ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 20 ಶನಿವಾರ 2025

46

ಸಂಪುಟ: 46 | ಸಂಚಿಕೆ: 242 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ನಾಳೆ ಮೈಸೂರಲ್ಲಿ ಈಶ್ವರೀಯ ವಿಶ್ವವಿದ್ಯಾನಿಲಯದಿಂದ ವಿಶ್ವ ಧ್ಯಾನ ಆಚರಣೆ

ಸಾವಿರಾರು ವಿದ್ಯಾರ್ಥಿಗಳು ಭಾಗಿ, ಯೋಗ ನೃತ್ಯ, ಸಮೂಹ ಗಾಯನ, ಧ್ಯಾನ ಕುರಿತು ಉಪನ್ಯಾಸ



ಮೈಸೂರಿನ ಯಾದವಗಿರಿಯಲ್ಲಿರುವ ಬ್ರಹ್ಮಕುಮಾರಿ ಸುಸ್ಥೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾನಿಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬಿ.ಕೆ. ಲಕ್ಷ್ಮೀಜಿ ಮಾತನಾಡಿದರು.

ಮೈಸೂರು, ಡಿ.19(ಜಿಎ)–ಮೈಸೂರಿನ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯ ದಿಂದ ಡಿ.21ರಂದು ಬೆಳಗ್ಗೆ 6ರಿಂದ 8.30ರವರೆಗೆ ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ವಿಶ್ವ ಧ್ಯಾನ ದಿನವನ್ನು ಆಚರಿಸಲಾಗುತ್ತಿದೆ ಎಂದು ಸಂಸ್ಥೆಯ ಪ್ರಾಂಶುಪಾಲರಾದ ಬಿ.ಕೆ. ರಂಗನಾಥ್ ತಿಳಿಸಿದರು.

ಮೈಸೂರಿನ ಯಾದವಗಿರಿಯಲ್ಲಿರುವ ಬ್ರಹ್ಮ ಕುಮಾರಿ ಸಂಸ್ಥೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಮೈಸೂರು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾನಿಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬಿ.ಕೆ. ಲಕ್ಷ್ಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್. ಶ್ರೀವತ್ಸ, ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ, ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ವಿದ್ಯಾಲಯದ ಪ್ರಾಂಶುಪಾಲ ಡಾ.ವೆಂಕಟಕೃಷ್ಣ, ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮೀನಾರಾಯಣ ಶೆಣೈ ಪಾಲ್ಗೊಳ್ಳುವರು ಎಂದರು.

ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳು ಸೇರಿದಂತೆ 7 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆ ಇದೆ. ಅಂದು ಬೆಳಗ್ಗೆ 6 ಗಂಟೆಯಿಂದ ಸಿದ್ಧತೆ ಆರಂಭವಾಗಲಿದೆ. 6.10ಕ್ಕೆ ರಿಂದ ಯೋಗ ನೃತ್ಯ, 6.20 ರಿಂದ 6.30ರವರೆಗೆ ಸಮೂಹ ಗಾಯನ, 6.35 ರಿಂದ 7 ರವರೆಗೆ ಧ್ಯಾನದ ಲಾಭಗಳ ಕುರಿತು ಉಪನ್ಯಾಸ, 7ರಿಂದ 7.30 ಧ್ಯಾನದ ಪ್ರಾಯೋಗಿಕ ಅಭ್ಯಾಸ ನಂತರ 7.30ರಿಂದ 7.40ರವರೆಗೆ ದೆಹಲಿಯ ಶಿವಾನಿಜೀ ಅವರಿಂದ ಧ್ಯಾನದ ಬಗ್ಗೆ ವಿಡಿಯೋ ಪ್ರದರ್ಶನ. ನಂತರ 7.45 ವೇದಿಕೆ ಕಾರ್ಯಕ್ರಮ ಆರಂಭವಾಗಲಿದೆ ಎಂದು ತಿಳಿಸಿದರು.

ಈ ವೇಳೆ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾನಿಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬಿ.ಕೆ.ಲಕ್ಷ್ಮೀಜಿ ಮಾತನಾಡಿ, ನಗರ ಮತ್ತು ಗ್ರಾಮೀಣ ಜನರ ಬದುಕಿನಲ್ಲಿ ಇಂದು ಧಾವಂತ ಮತ್ತು ಒತ್ತಡದ ಜೀವನ ಹೆಚ್ಚಾಗುತ್ತಿದೆ. ಇದರ ಪರಿಣಾಮವನ್ನು ನಿತ್ಯ ಬದುಕಿನಲ್ಲಿ ಪ್ರತಿಯೊಂದು ಹಂತದಲ್ಲಿಯೂ ನಾವು ಕಾಣುತ್ತಿದ್ದೇವೆ. ಮಾನವೀಯ ಸಂಬಂಧಗಳಲ್ಲಿ ಕುಸಿತದ ಜೊತೆಗೆ ಒತ್ತಡ ಜೀವನದಿಂದ ಶಾರೀರಿಕ ರೋಗಗಳೂ ಕೂಡ ಬೇರೆ ಬೇರೆ ರೀತಿಯಲ್ಲಿ ಕಾಣಿಸಿಕೊಳ್ಳುತ್ತಿವೆ. ಈ ಎಲ್ಲಕ್ಕೂ ನಮ್ಮ ಮನಸ್ಥಿತಿಯನ್ನು ಕಡೆಗಣಿಸಿರುವುದು ಮತ್ತು ಸದ ಬಾಹ್ಯ ಮುಖಿಯಾಗಿರಲು ಬಯಸುವುದು. ಏಕಾಂತದಲ್ಲಿ ಕುಳಿತು ನಮ್ಮನ್ನು ನಾವು ನೋಡಿಕೊಳ್ಳುವಷ್ಟು ಸಮಯವೂ ನಮಗಿಲ್ಲ ಇಂತಹ ಬದುಕಿಗೆ ಒಂದು ಉತ್ತಮ ತಿರುವು ನೀಡಲು ವಿಶ್ವ ಧ್ಯಾನ ದಿನವನ್ನು ಆಚರಿಸಲಾಗುತ್ತಿದೆ ಎಂದು ವಿವರಿಸಿದರು.

ನಟಿ ರನ್ಯಾ ರಾವ್ ಹೇಬಿಯಸ್ ಕಾರ್ಪಸ್ ಅರ್ಜಿ ವಜಾಗೊಳಿಸಿದ ಹೈಕೋರ್ಟ್



ಬೆಂಗಳೂರು, ಡಿ.19– ಸುಮಾರು 15 ಕೋಟಿ ರೂ. ಮೌಲ್ಯದ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಬಂಧಿತರಾಗಿರುವ ಕನ್ನಡದ ನಟಿ ರನ್ಯಾ ರಾವ್ ಹಾಗೂ ಇತರ ಆರೋಪಿಗಳಾದ ತರುಣ್‌ರಾಜ್ ಮತ್ತು ಸಾಹಿಲ್ ಜೈನ್ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಹೈಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ವಿದೇಶಿ ವಿನಿಮಯ ನಿಯಂತ್ರಣ ಮತ್ತು ಕಳ್ಳಸಾಗಣೆ ಚಟುವಟಿಕೆಗಳ ತಡೆ ಕಾಯ್ದೆ 1974ರ ಅಡಿಯಲ್ಲಿ ಬಂಧನ ಕಾನೂನು ಬಾಹಿರ ಎಂದು ಘೋಷಿಸುವಂತೆ ಕೋರಿ ಬಂಧಿತ ನಟಿಯ ತಾಯಿ ಹರ್ಷವರ್ಧಿನಿ ರಾವ್ ಹಾಗೂ ಇತರು ಇಬ್ಬರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅನು ಶಿವರಾಮನ್ ಹಾಗೂ ವಿಜಯ್ ಕುಮಾರ್ ಪಾಟೀಲ್ ಅವರನ್ನೊಳಗೊಂಡ ಪೀಠವು ಅರ್ಜಿದಾರರ ವಾದವನ್ನು ತಳ್ಳಿ ಹಾಕಿದೆ.



ಬಂಧನ ಪ್ರಕ್ರಿಯೆಯಲ್ಲಿ ಯಾವುದೇ ಕಾನೂನು ಉಲ್ಲಂಘನೆ ಕಂಡು ಬಂದಿಲ್ಲ ಎಂದು ಅಭಿಪ್ರಾಯಪಟ್ಟ ನ್ಯಾಯಾಲಯ, ಮೂವರು ಆರೋಪಿಗಳ ಬಂಧನ ಕಾನೂನು ಬದ್ಧವಾಗಿದೆ ಎಂದು ಸ್ಪಷ್ಟಪಡಿಸಿದೆ. ಹೀಗಾಗಿ ರನ್ಯಾ ರಾವ್, ತರುಣ್ ರಾಜ್ ಹಾಗೂ ಸಾಹಿಲ್ ಜೈನ್ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ವಜಾಗೊಳಿಸಿ ಆದೇಶ ಹೊರಡಿಸಿದೆ.

ಕಳೆದ ಮಾರ್ಚ್ 3ರ ರಾತ್ರಿ ದುಬೈ ನಿಂದ ಎಮಿರೇಟ್ಸ್ ಏರ್‌ಲೈನ್ಸ್ ವಿಮಾನದಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ನಟಿಯನ್ನು ಕಂದಾಯ ಗುಪ್ತಚರ ನಿರ್ದೇಶನಾಲಯ(ಡಿಆರ್‌ಐ)ದ ಅಧಿಕಾರಿಗಳು ತಪಾಸಣೆಗೆ ಒಳಪಡಿಸಿದ್ದು, ಈ ವೇಳೆ ನಟಿ ಬಳಿ 14.80 ಕೆಜಿ ಚಿನ್ನ ಪತ್ತೆಯಾಗಿತ್ತು. ತಕ್ಷಣ ನಟಿಯನ್ನು ಬಂಧಿಸಲಾಗಿತ್ತು.

ನಾಳೆ ಮೈಸೂರಲ್ಲಿ ಉಚಿತ ಕಣ್ಣಿನ ತಪಾಸಣೆ, ಶಸ್ತ್ರ ಚಿಕಿತ್ಸಾ ಶಿಬಿರ

ಮೈಸೂರು, ಡಿ.19(ಜಿಎ)–ಮೈಸೂರಿನ ಜೆಪಿ.ನಗರದ ಸ್ಪೋರ್ಟ್ಸ್ ಕ್ಲಬ್ ಆವರಣದಲ್ಲಿ ಡಿ.21ರಂದು ಬೆಳಿಗ್ಗೆ 8ಗಂಟೆಯಿಂದ ಮಧ್ಯಾಹ್ನ 12.30ರವರೆಗೆ ಕಣ್ಣಿನ ಉಚಿತ ತಪಾಸಣೆ ಹಾಗೂ ಶಸ್ತ್ರಚಿಕಿತ್ಸೆ ಶಿಬಿರ ಹಮ್ಮಿಕೊಳ್ಳಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ರೋಟರಿ ಜೆಪಿನಗರ ಅಧ್ಯಕ್ಷ ಪಿ.ರವಿಶಂಕರ್ ಈ ವಿಷಯ ತಿಳಿಸಿ, ರೋಟರಿ ಜಯಪ್ರಕಾಶ ನಗರ ಚಾರಿಟಬಲ್ ಟ್ರಸ್ಟ್, ಜೆ.ಪಿ.ನಗರದ ಲಯನ್ಸ್ ಕ್ಲಬ್, ಜೆ.ಪಿ.ನಗರ ಸ್ಪೋರ್ಟ್ಸ್ ಕ್ಲಬ್, ಸ್ನೇಹನಿಧಿ ಪತ್ತಿನ ಸಹಕಾರ ಸಂಘ, ರೋಟರಿ ಕ್ಲಬ್ ಆಫ್ ಕೃಷ್ಣರಾಜ, ಲಯನ್ಸ್ ಕ್ಲಬ್ ಆಫ್ ವಿಜಯನಗರ, ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ನಡೆಸಲಾಗುತ್ತಿದೆ' ಎಂದರು. ಶಿಬಿರದಲ್ಲಿ ಕಣ್ಣಿನ ಪೊರೆ, ಗ್ಲಾಕೋಮ, ನೀರು ಸೋರುವಿಕೆ, ಕಣ್ಣಿನಲ್ಲಿ ಗೀಚು ಬರುವುದು, ಹತ್ತಿರ ಮತ್ತು ದೂರ ದೃಷ್ಟಿ, ಕಣ್ಣಿನಲ್ಲಿ ಬಿರುಕು ಉಂಟಾಗುವುದು, ವಾರೆಗಣ್ಣು, ರಾತ್ರಿ ಕುರುಡು ಮೊದಲಾದ ಸಮಸ್ಯೆಯಿಂದ ಬಳಲುವವರು ಪ್ರಯೋಜನ ಪಡೆಯಬಹುದಾಗಿದೆ. ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಅಗತ್ಯವಿರುವವರನ್ನು ಕೊಯಮತ್ತೂರಿನ ಆಸ್ಪತ್ರೆಗೆ ಕರೆದೊಯ್ದು ಉಚಿತವಾಗಿ ಶಸ್ತ್ರಚಿಕಿತ್ಸೆ ನೆರವೇರಿಸಿ ವಾಪಸ್ಸು ಕರೆತರಲಾಗುವುದು ಎಂದು ಮಾಹಿತಿ ನೀಡಿದರು.

ಡಾ. ಮುಳ್ಳೂರು ನಂಜುಂಡಸ್ವಾಮಿ ಮಾತನಾಡಿ, ಕಳೆದ 6 ತಿಂಗಳಿನಿಂದ ಪ್ರತಿಯೊಂದು ತಿಂಗಳು ಈ ಶಿಬಿರ ಆಯೋಜಿಸಲಾಗುತ್ತಿದೆ. ಮೈಸೂರು ಮಾತ್ರವಲ್ಲ, ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳ ಜನರೂ ಸೇವೆ ಪಡೆಯುತ್ತಿದ್ದಾರೆ. ಪ್ರತಿ ತಿಂಗಳೂ ಕನಿಷ್ಠ 15 ರಿಂದ 20 ಮಂದಿಗೆ ಸುಮಾರು 25 ಸಾವಿರ ಮೌಲ್ಯದ ಶಸ್ತ್ರಚಿಕಿತ್ಸೆ ಉಚಿತವಾಗಿ ನೆರವೇರಿಸಲಾಗುತ್ತಿದೆ. ಮಾಹಿತಿಗೆ ದೂ. 94484 13274 ನ್ನು ಸಂಪರ್ಕಿಸಿ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ನಂಜುಂಡಸ್ವಾಮಿ, ಜೆ.ವೆಂಕಟೇಶ್, ಜಿ.ವೆಂಕಟೇಶ್ ಉಪಸ್ಥಿತರಿದ್ದರು

ಹದಿನಾರು ಮೋಳೆ ಗ್ರಾಮದ ಸರ್ಕಾರಿ ಶಾಲೆ ಉಳಿಸಲು ಆಗ್ರಹಿಸಿ ಪ್ರತಿಭಟನೆ

ಎಐಡಿಎಸ್‌ಓ ನೇತೃತ್ವದಲ್ಲಿ ವಿದ್ಯಾರ್ಥಿಗಳು, ಗ್ರಾಮಸ್ಥರು ಭಾಗಿ



ಹದಿನಾರು ಮೋಳೆ ಗ್ರಾಮದಲ್ಲಿ ಸರ್ಕಾರಿ ಶಾಲೆ ಉಳಿವಿಗಾಗಿ ಎಐಡಿಎಸ್‌ಓ ನೇತೃತ್ವದಲ್ಲಿ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಡಿ.19(ಎಂಕೆ)– ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹದಿನಾರು ಮೋಳೆ ಗ್ರಾಮದಲ್ಲಿರುವ ಸರ್ಕಾರಿ ಶಾಲೆ ಉಳಿಸಲು ಆಗ್ರಹಿಸಿ, ಎಐಡಿಎಸ್‌ಓ ನೇತೃತ್ವದಲ್ಲಿ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರಿಂದ ಪ್ರತಿಭಟನೆ ನಡೆಸಲಾಯಿತು.


ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಹೆಸರಲ್ಲಿ 40,000ಕ್ಕೂ ಅಧಿಕ ಸರಕಾರಿ ಶಾಲೆಗಳನ್ನು ರಾಜ್ಯ ಸರಕಾರ ಮುಚ್ಚಲು ಮುಂದಾಗಿದ್ದು, ಹದಿನಾರು ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯನ್ನು ಮ್ಯಾಗ್ನೆಟ್ ಶಾಲೆಯನ್ನಾಗಿಸಿ, ಹದಿನಾರು ಮೋಳೆ ಗ್ರಾಮದ ಶಾಲೆಯನ್ನು ಮ್ಯಾಗ್ನೆಟ್ ಶಾಲೆಯೊಂದಿಗೆ ಸೇರಿಸಲಾಗುತ್ತಿದೆ. 140ಕ್ಕೂ ಹೆಚ್ಚು ದಾಖಲಾತಿ ಹೊಂದಿರುವ ಹದಿನಾರು ಮೋಳೆ ಗ್ರಾಮದ ಸರ್ಕಾರಿ ಶಾಲೆಯನ್ನು ಮುಚ್ಚುತ್ತಿರುವ ರಾಜ್ಯ ಸರಕಾರ, ಬಡ ರೈತ ಮತ್ತು ಕಾರ್ಮಿಕರ ಮಕ್ಕಳಿಗೆ ಅನ್ಯಾಯ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಊರಿನ ಶಾಲೆಗಳನ್ನು ಮುಚ್ಚಿ, ಮಕ್ಕಳನ್ನು ದೂರದ ಶಾಲೆಗೆ ತಲುಪಿಸಲಾಗುತ್ತಿದೆ. ಅಲ್ಲದೆ ಮ್ಯಾಗ್ನೆಟ್ ಶಾಲೆಯ ನಿರ್ವಹಣೆಯನ್ನು ಹೊರಗುತ್ತಿಗೆ ನೀಡುವ ಮೂಲಕ ಕ್ರಮೇಣವಾಗಿ ಸರ್ಕಾರಿ ಶಾಲೆಗಳನ್ನು ಖಾಸಗೀಕರಣಗೊಳಿಸಿ, ಬಡ ಮಕ್ಕಳನ್ನು ಶಾಶ್ವತವಾಗಿ ಶಿಕ್ಷಣದಿಂದ ದೂರ ತಳ್ಳುವ ಹುನ್ನಾರ ಎಂದು ಕಿಡಿಕಾರಿದರು.

ಎಐಡಿಎಸ್‌ಓ ಜಿಲ್ಲಾ ಮಂಡಳಿ ಸದಸ್ಯೆ ದಿಶಾ, ಜಿಲ್ಲಾ ಕಾರ್ಯದರ್ಶಿ ನಿತಿನ್, ಉಪಾಧ್ಯಕ್ಷೆ ಸ್ವಾತಿ, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಹೇಮಲತಾ, ಅಭಿಷೇಕ್, ಗ್ರಾಮಸ್ಥರಾದ ಕುಮಾರ್, ಮಹದೇವ್, ಹೆಚ್.ನಾಗರಾಜು, ಮಂಜುನಾಥ್, ರಾಮು ಮತ್ತಿತರರಿದ್ದರು.

ನಿರಾಶ್ರಿತ ಮಾನಸಿಕ ಅಸ್ವಸ್ಥರ ಚಿಕಿತ್ಸೆಗಾಗಿ

ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸಾ; ಚೇತರಿಕೆ ಕೇಂದ್ರ





ಇತ್ತೀಚಿನ ಸಮೀಕ್ಷೆ ಪ್ರಕಾರ ಪ್ರತಿ 500 ಮಂದಿ ಜನಸಂಖ್ಯೆಗೆ ಒಬ್ಬರು ನಿರಾಶ್ರಿತರಿದ್ದು ಅದರನ್ವಯ ಮೈಸೂರು ನಗರದಲ್ಲಿ ಸರಿಸುಮಾರು 15 ಸಾವಿರ ನಿರ್ಗತಿಕರಿದ್ದಾರೆ ಎಂದು ಅಂದಾಜಿಸಲಾಗಿದೆ. ಆ ಪೈಕಿ ಶೇಕಡ 25ರಷ್ಟು ಮಾನಸಿಕ ಅಸ್ವಸ್ಥರಿದ್ದಾರೆ. ಅವರ ಅತಿರೇಕ ವರ್ತನೆಯಿಂದಾಗಿ ಮನೆಯವರು, ನೆರೆಹೊರೆಯವರಿಗೂ ತೊಂದರೆ ಉಂಟಾಗುತ್ತದೆ ಅಲ್ಲದೆ ಆಶ್ರಯವಿಲ್ಲದ ಕಾರಣ ಅವರು ಹೊರಗೆ ಅಲೆದಾಡುತ್ತಿರುತ್ತಾರೆ. ಬದಲಾದ ಜೀವನ ಶೈಲಿಯಿಂದ ಹಾಗೂ ಆಹಾರ ಪದ್ಧತಿಯಿಂದಾಗಿ ಮಾನಸಿಕ ಖಾಯಿಲೆ ಪ್ರಕರಣಗಳು ಹೆಚ್ಚಾಗುತ್ತಿದೆ. ಆದ್ದರಿಂದ ಅವರಿಗೆ ಆರಂಭದಲ್ಲೇ ಚಿಕಿತ್ಸೆ ಮತ್ತು ಆರೈಕೆ ನೀಡುವುದು ಅತ್ಯವಶ್ಯ.
- ಡಾ. ಪಿ.ಸಿ. ಕುಮಾರಸ್ವಾಮಿ, ಜಿಲ್ಲಾ ಆರೋಗ್ಯಾಧಿಕಾರಿ.

ಆಲದ ಮರ ಸಂಸ್ಥೆ ಸಹಯೋಗದಲ್ಲಿ ಆರೋಗ್ಯ ಮತ್ತು ಕುಟುಂಬ ಇಲಾಖೆಯಿಂದ ನಿರ್ಗತಿಕ ಮಾನಸಿಕ ಅಸ್ವಸ್ಥರಿಗಾಗಿ ತುರ್ತು ಚಿಕಿತ್ಸಾ ಚೇತರಿಕಾ ಕೇಂದ್ರ ಸ್ಥಾಪಿಸಲು ಕೆಆರ್ ಆಸ್ಪತ್ರೆಯ ಕಲ್ಲು ಕಟ್ಟಡದ 2ನೇ ವಾರ್ಡ್ ಅನ್ನು ಬಿಟ್ಟುಕೊಟ್ಟಿದ್ದೇವೆ. ಅಲ್ಲಿ ಮಹಿಳೆಯರು ಮತ್ತು ಪುರುಷರಿಗಾಗಿ ತಲಾ 15 ಹಾಸಿಗೆ ಹಾಗೂ ಇನ್ನಿತರ ಅಗತ್ಯ ಸೌಲಭ್ಯವನ್ನು ಒದಗಿಸಲಾಗಿದೆ. ನಮ್ಮ ಆಸ್ಪತ್ರೆಯಿಂದ ಮಾನಸಿಕ ರೋಗಿಗಳಿಗೆ ಮುಂದೆಯೂ ಈ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.
-ಡಾ. ಹೆಚ್.ಪಿ.ಶೋಭಾ, ವೈದ್ಯಕೀಯ ಅಧೀಕ್ಷಕರು, ಕೆ.ಆರ್.ಆಸ್ಪತ್ರೆ


ಮೈಸೂರು, ಡಿ.19(ಆರ್‌ಕೆ)– ಮನೆಯವರ ನಿರ್ಲಕ್ಷ್ಯಕ್ಕೊಳಗಾಗಿ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವ ನಿರಾಶ್ರಿತರ ಚಿಕಿತ್ಸೆಗಾಗಿ ಸರ್ಕಾರವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೂಲಕ ತುರ್ತು ಚಿಕಿತ್ಸಾ ಮತ್ತು ಚೇತರಿಕಾ ಕೇಂದ್ರ (ಎಮರ್ಜೆನ್ಸಿ ಕೇರ್ ಅಂಡ್ ರಿಕವರಿ ಸೆಂಟರ್)ವನ್ನು ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಆರಂಭಿಸುತ್ತಿದೆ.

ಮಾನಸಿಕ ಆರೋಗ್ಯ (Mental Health) ಹಾಗೂ ಬ್ರೇನ್ ಹೆಲ್ತ್ ಇನಿಷಿಯೇಟಿವ್ ಅಡಿ ಮೈಸೂರು ಜಿಲ್ಲಾಡಳಿತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಸಿಸಿ–ಆರ್‌ಐ) ಹಾಗೂ ಆಲದ ಮರ ಸಂಸ್ಥೆ ಸಹಯೋಗದಲ್ಲಿ ಮೈಸೂರಿನ ದೊಡ್ಡಾಸ್ಪತ್ರೆಯೆಂದೇ ಖ್ಯಾತಿಯಾಗಿರುವ ಕೃಷ್ಣರಾಜೇಂದ್ರ ಆಸ್ಪತ್ರೆಯ ಸರ್ಜಿಕಲ್ ಬ್ಲಾಕ್ (ಕಲ್ಲು ಕಟ್ಟಡ) ನ ನೆಲ ಮಹಡಿಯಲ್ಲಿರುವ ವಾರ್ಡ್ ನಂಬರ್ 2ರಲ್ಲಿ ತುರ್ತು ಚಿಕಿತ್ಸಾ ಮತ್ತು ಚೇತರಿಕಾ ಕೇಂದ್ರವನ್ನು ಆರಂಭಿಸಲಾಗುತ್ತಿದೆ.

ಅದಕ್ಕಾಗಿ ಸದರಿ ವಾರ್ಡ್‌ನಲ್ಲಿ 15 ಮಹಿಳೆಯರಿಗೆ ಹಾಗೂ 15 ಪುರುಷರಿಗೆ ಹಾಸಿಗೆ ಸಿದ್ಧಪಡಿಸಿದ್ದು, ಚಿಕಿತ್ಸೆ ಮತ್ತು ಆರೈಕೆಗೆ ಅಗತ್ಯ ಸೌಲಭ್ಯ ಕಲ್ಪಿಸಲಾಗಿದೆ. ಡಿಸೆಂಬರ್ 20ರಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಬೆಂಗಳೂರಿನಿಂದಲೇ ಈ ನೂತನ ಕೇಂದ್ರವನ್ನು ಉದ್ಘಾಟಿಸಲಿದ್ದಾರೆ. ಈಗಾಗಲೇ ನಿರ್ಗತಿಕರು, ಅನಾಥರು, ಮನೆಯಿಂದ ಹೊರ ಬಂದು ಆಶ್ರಯವಿಲ್ಲದೆ ಅಲೆದಾಡುತ್ತಿರುವವರನ್ನು ಗುರುತಿಸಿ ಕರೆ ತಂದು ತಮ್ಮ ಸಂಸ್ಥೆಯಲ್ಲಿ ಆರೈಕೆ ಮಾಡುತ್ತಿರುವ ಆಲದಮರ ಸರ್ಕಾರೇತರ ಸಂಸ್ಥೆಯನ್ನು ಈ ಯೋಜನೆಗೆ ಗುರುತಿಸಲಾಗಿದೆ.

ಆ ಸಂಸ್ಥೆಯು ಅನಾಥವಾಗಿ ಅಲೆಯುವ ಮಾನಸಿಕ ಅಸ್ವಸ್ಥರನ್ನು ಪತ್ತೆ ಮಾಡಿ ಕರೆ ತಂದು ಎಮರ್ಜೆನ್ಸಿ ಕೇರ್ ಅಂಡ್ ರಿಕವರಿ ಸೆಂಟರ್‌ನಲ್ಲಿ ಚಿಕಿತ್ಸೆ ಕೊಡಿಸಿ ಗುಣಮುಖರಾದ ನಂತರ ಅವರ ಮನೆಗೆ ಸೇರಿಸುವ ಕಾಯಕ ಮಾಡಲಿದೆ. ಒಂದು ವೇಳೆ ಕುಟುಂಬ ದವರು ಒಪ್ಪದಿದ್ದರೆ ಅವರಿಗೆ ಬಾಡಿಗೆ ಮನೆಯೊಂದನ್ನು ಮಾಡಿ ಜೀವನಕ್ಕೆ ಅಗತ್ಯವಿರುವ ಸೌಲಭ್ಯಗಳನ್ನು ಯೋಜನೆ ಯಡಿ ಒದಗಿಸಲಾಗುವುದು. ನಿರಾಶ್ರಿತ ಮಾನಸಿಕ ಅಸ್ವಸ್ಥರಿಗೆ ಆಧಾರ್‌ಕಾರ್ಡ್, ಮತದಾರರ ಗುರುತಿನ ಚೀಟಿ, ಪಡಿತರ ಚೀಟಿ, ಅಂಗವೈಕಲ್ಯತೆ ಇದ್ದರೆ, ಪ್ರಮಾಣ ಪತ್ರ, ಕೌಶಲ್ಯ ತರಬೇತಿ ಕೊಡಿಸಿ, ಉದ್ಯೋಗ ಅವಕಾಶ ಕಲ್ಪಿಸಲು ಈ ಯೋಜನೆಯಲ್ಲಿ ಅವಕಾಶವಿದೆ. ಕೇಂದ್ರದಲ್ಲಿ ಮಾನಸಿಕ ಅಸ್ವಸ್ಥೆಗೆ ಚಿಕಿತ್ಸೆ, ಔಷಧೋಪಚಾರ, ಊಟ, ನಿರಂತರ ಸಮಾಲೋಚನೆ, ನರ್ಸಿಂಗ್ ಕೇರ್ ನೀಡಲಾಗುವುದು ಅಲ್ಲದೆ ಮನೋವೈದ್ಯರು, ಮನಃಶಾಸ್ತ್ರಜ್ಞರು, ಸಾಮಾಜಿಕ ಕಾರ್ಯಕರ್ತರು, ನರ್ಸ್‌ಗಳು ಕೆಲಸ ಮಾಡಲಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.12.2025 ಶನಿವಾರ, ಮಳೆ ನಕ್ಷತ್ರ: ಮೂಲ, 16.12.2025 ರಿಂದ 28.12.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ: ಮೂಲ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

▪ **ಶಬರಿಮಲ ಶ್ರೀ ಅಯ್ಯಪ್ಪ ಪೂಜಾ ಸಮಿತಿ :** 65ನೇ ವಾರ್ಷಿಕ ಪೂಜಾ ಮಹೋತ್ಸವ, ಬೆಳಗ್ಗೆ 5 ರಿಂದ ಗಣಪತಿ ಹೋಮ, ತುಪ್ಪದ ಅಭಿಷೇಕ, ವಾದ್ಯದೊಂದಿಗೆ ಶ್ರೀ ಅಯ್ಯಪ್ಪ ಸ್ವಾಮಿಗೆ ಅಲಂಕಾರ ಪೂಜಾ, ಮಧ್ಯಾಹ್ನ 3.30 ರಿಂದ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಿಂದ ಅಯ್ಯಪ್ಪಸ್ವಾಮಿ ದೇವಾಲಯದವರೆಗೆ ಪಾಲಕ್ಕೊಂಬು ಮೆರವಣಿಗೆ, ರಾತ್ರಿ 7 ರಿಂದ ಅಯ್ಯಪ್ಪನ್ ಭಜನೆ, ಪಾಲಕ್ಕೊಂಬು ನೃತ್ಯ, ತಿರಿಉಳಿಚಲ್, ಅಯ್ಯಪ್ಪನ್ ಗೀತೆಗಳು, ವೆಟ್ಟುಂ ತಡವು, ಪಾಲ್‌ಕಿಂಡ ಉತ್ಸವ, ಕೊಂಡ, ಮಂಗಳಂ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಾಲಯ, ಚಾಮುಂಡಿಬೆಟ್ಟದ ಪಾದ.

▪ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಕ್ಕಳಲ್ಲಿ ಕಂಡು ಬರುವ ಆಟಿಸಂ, ಕುತ್ತಿಗೆ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.

▪ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

▪ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಉದ್ಯಮಶೀಲತೆ ಮತ್ತು ಸಮಾಜ ವಿಜ್ಞಾನ ಸಿನರ್ಜಿ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಡಾ. ಕೆ. ಕಾನಿಷ್ಕ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಅಧ್ಯಕ್ಷ ಟಿ. ನಾಗರಾಜು, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

▪ **ಶ್ರೀಸೂತ್ರ ಆಯುರ್ಧಾಮ :** ಕಿಡ್ನಿ ಸ್ಟೋನ್ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಉಚಿತ ವೈದ್ಯಕೀಯ ತಪಾಸಣಾ ಹಾಗೂ ಸಲಹಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ, ಚಾಮುಂಡಿಪುರಂ, ಬೆಳಗ್ಗೆ 10 ರಿಂದ.

▪ **ಸುಯೋಗ್ ಆಸ್ಪತ್ರೆ :** ಉಚಿತ ಪ್ರಾಸ್ಟೇಟ್ ಗ್ರಂಥಿ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

▪ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ :** ಪ್ರೊ. ವಿ.ಕೆ. ನಟರಾಜ್ ಸ್ಮರಣಾರ್ಥ ಪುಸ್ತಕ ಬಿಡುಗಡೆ ಹಾಗೂ ವಿಶೇಷ ಉಪನ್ಯಾಸ, ಸಾಂವಿಧಾನಿಕವಾಗಿ ಖಾತರಿಪಡಿಸಿದ ಮೂಲಭೂತ ಆರ್ಥಿಕ ಹಕ್ಕುಗಳ ಕಡೆಗೆ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ನಿವೃತ್ತ ಪ್ರಾಧ್ಯಾಪಕ ಪ್ರೊ. ಪ್ರಭಾತ್ ಪಟ್ನಾಯಕ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಮಹಿಳಾ ಅಧ್ಯಯನ ಕೇಂದ್ರದ ನಿವೃತ್ತ ನಿರ್ದೇಶಕರಾದ ಶ್ರೀಮತಿ ರಾಮೇಶ್ವರಿ ವರ್ಮ, ಸ್ಥಳ: ವಿಶ್ವಜ್ಞಾನಿ ಸಭಾಂಗಣ, ಡಾ. ಬಿ.ಆರ್. ಅಂಬೇಡ್ಕರ್ ಕೇಂದ್ರ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

▪ **ಮೈಸೂರು ಕನ್ನಡ ವೇದಿಕೆ :** ವಾಲ್ಮೀಕಿ, ಬುದ್ಧ, ಬಸವಣ್ಣ, ಕನಕದಾಸರ ಜಯಂತ್ಯೋತ್ಸವ, ಸಾಧಕರಿಗೆ ಅಭಿನಂದನಾ ಸಮಾರಂಭ, ಉದ್ಘಾಟನೆ : ಡಾ. ಶುಶ್ರೂತ್‌ಗೌಡ, ಪ್ರಧಾನ ಭಾಷಣ : ಡಾ. ಎಂ.ಜಿ.ಆರ್. ಅರಸ್, ಸನ್ಮಾನಿಸುವವರು : ಕೆ.ಆರ್. ಆಸ್ಪತ್ರೆ ವೈದ್ಯಕೀಯ ಅಧೀಕ್ಷಕರಾದ ಡಾ. ಹೆಚ್.ಪಿ. ಶೋಭ, ಅಧ್ಯಕ್ಷತೆ : ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ಮುಖ್ಯ ಅತಿಥಿಗಳು : ಶ್ರೀಮತಿ ಎಸ್. ಸುಜಾತ, ಡಾ. ನಟರಾಜ ಜೋಯಿಸ್, ಡಾ. ಶ್ರೀಷಾಭಟ್, ಮನೋಹರ್, ನಾಲಾ ಬೀದಿ ರವಿ, ಸಾ.ಸಿ. ದೊರೆಸ್ವಾಮಿ, ಸ್ಥಳ: ಮಹಾಜನ ಪ್ರೌಢಶಾಲೆ, ಬೆಳಗ್ಗೆ 11.30ಕ್ಕೆ.

▪ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.

▪ **ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ :** ರಾಷ್ಟ್ರೀಯ ಗೊಂಬೆಯಾಟ ಉತ್ಸವ ಮೈಸೂರು, ಗೊಂಬೆಯಾಟ ಕಾರ್ಯಾಗಾರದ ಸಮಾರೋಪ, ಗೌರವ ಅತಿಥಿಗಳು : ವೀನರ್‌ಬರ್ಗರ್ ಇಂಡಿಯಾ ವ್ಯವಸ್ಥಾಪಕ ನಿರ್ದೇಶಕ ಮೊನ್ನಂಡ ಅಪ್ಪಯ್ಯ, ಸ್ಥಳ: ಹಾರ್ಡ್ವಿಕ್ ಶಾಲಾ ಆವರಣ, ಜೆಎಲ್‌ಬಿ ರಸ್ತೆ, ಸಂಜೆ 4ಕ್ಕೆ.

▪ **ಕಲಾಸುರುಚಿ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು : ದಿವಾಕರ ಕೆ ಎ, ನಿವೃತ್ತ ಪ್ರಾಂಶುಪಾಲರು, ಸಲಹೆಗಾರರು, ವಿವೇಕ ವಿದ್ಯಾಲಯ, ಶ್ರೀರಾಮಪುರ, ಸ್ಥಳ: ಸುರುಚಿ ರಂಗಮನೆ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

▪ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ :** ದತ್ತಿ ಕಾರ್ಯಕ್ರಮ, ವಚನ ಸ್ಪರ್ಧೆ ಮತ್ತು ದತ್ತಿ ಉಪನ್ಯಾಸ, ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಸಿ.ಜಿ. ಉಷಾದೇವಿ ಅವರಿಂದ ಶರಣರ ಪರಿಕಲ್ಪನೆಯಲ್ಲಿ ದೇವರು ಕುರಿತು ಉಪನ್ಯಾಸ, ಅಧ್ಯಕ್ಷತೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಜಯಪ್ಪ ಹೊನ್ನಾಳಿ, ಉಪಸ್ಥಿತರು : ಜ್ಞಾನಜ್ಯೋತಿ ಪ್ರತಿಷ್ಠಾನ ಅಧ್ಯಕ್ಷ ಶಿವಪ್ಪಾಜಿ, ಸ್ಥಳ: ಜ್ಞಾನಜ್ಯೋತಿ ಪ್ರತಿಷ್ಠಾನ, ವಿದ್ಯಾರಣ್ಯಪುರಂ, ಸಂಜೆ 5ಕ್ಕೆ.

▪ **ಡಿಎವಿ ಪಬ್ಲಿಕ್ ಸ್ಕೂಲ್ :** ಶಾಲಾ ವಾರ್ಷಿಕೋತ್ಸವ, ಚಿಣ್ಣರ ಕಲರವ, ಮುಖ್ಯ ಅತಿಥಿಗಳು: ಮೈಸೂರು ಪುಸ್ತಕ ಕ್ಲಬ್‌ನ ಅಧ್ಯಕ್ಷೆ ಶ್ರೀಮತಿ ಶುಭ ಸಂಜಯ್ ಅರಸು, ಸ್ಥಳ: ಕಲಾಮಂದಿರ, ಸಂಜೆ 5ಕ್ಕೆ.

▪ **ಪುಷ್ಕರ ಪ್ರಕಾಶನ :** ಸುರೇಶ್ ಕರ್ತಾಳ್ ಅವರ ಸಾರಥ್ಯದಲ್ಲಿ ಲಾ ಫಾರ್ ಆಲ್ ಕನ್ನಡ ಕಾನೂನು ಮಾಸಪತ್ರಿಕೆ ಡಿಸೆಂಬರ್ ಸಂಚಿಕೆ ಹಾಗೂ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ, ಗುರುವಂದನಾ ಕಾರ್ಯಕ್ರಮ, ಉದ್ಘಾಟನೆ : ಕರ್ನಾಟಕ ಉಚ್ಚ ನ್ಯಾಯಾಲಯ ನ್ಯಾಯಮೂರ್ತಿ ಜಿ. ಬಸವರಾಜು, ಕ್ಯಾಲೆಂಡರ್ ಬಿಡುಗಡೆ : ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ, ಪತ್ರಿಕೆ ಬಿಡುಗಡೆ : ಮಾಜಿ ಸಚಿವ ಜೆ.ಸಿ. ಮಾಧುಸ್ವಾಮಿ, ಅಧ್ಯಕ್ಷತೆ : ಹಿರಿಯ ವಕೀಲ ಆರ್.ಎಸ್. ರವಿ, ಉಪಸ್ಥಿತರು : ಹಿರಿಯ ವಕೀಲರಾದ ಕೆ.ಆರ್. ಶಿವಶಂಕರ್, ಕೆ.ಬಿ. ಸುರೇಶ್, ಸ್ಥಳ: ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್, ಆದಿಚುಂಚನಗಿರಿ ರಸ್ತೆ, ಸಂಜೆ 5.30ಕ್ಕೆ.

▪ **ನಿರಂತರ ಫೌಂಡೇಷನ್ :** ನಿರಂತರ ರಂಗ ಉತ್ಸವ, ಸಂಜೆ 5.30ಕ್ಕೆ ದೇವಾನಂದ್ ವರಪ್ರಸಾದ್ ಮತ್ತು ನಿರಂತರ ಗೆಳೆಯರಿಂದ ಜನಪದ ಮತ್ತು ತತ್ವಪದ ಗಾಯನ, ಸಂಜೆ 6.15ಕ್ಕೆ ಸಭಾ ಕಾರ್ಯಕ್ರಮ, ಉಪಸ್ಥಿತರು : ಮಹಾರಾಜ ಕಾಲೇಜು ಪ್ರಾಧ್ಯಾಪಕ ಡಾ. ಡಿ. ವಿಜಯಲಕ್ಷ್ಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ. ಎನ್ ಮಲ್ಲಿಕಾರ್ಜುನ ಸ್ವಾಮಿ, ಸಂಜೆ 7ಕ್ಕೆ ಮೈಸೂರಿನ ನಿರಂತರ ರಂಗ ತಂಡದಿಂದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ನಮ್ಮ ಊರಿನ ರಸಿಕರು' ಮತ್ತು ಇತರ ಕೃತಿಗಳ ಆಧಾರಿತ ನಾಟಕ: ಗೊರೂರು, ಸಂಗೀತ: ದಿಗ್ವಿಜಯ ಹೆಗ್ಗೋಡು, ರಂಗಪಠ್ಯ, ವಿನ್ಯಾಸ ಮತ್ತು ನಿರ್ದೇಶನ: ಮಂಜುನಾಥ್ ಎಲ್ ಬಡಿಗೇರ, ಸ್ಥಳ: ಕಿರು ರಂಗಮಂದಿರ.

▪ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಬುದ್ಧಿದಾನಂದ ಅವರಿಂದ ನಾರದ ಭಕ್ತಿ ಸೂತ್ರಗಳು ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

▪ **ಬೆಂಗಳೂರಿನ ಇನ್ಫೋಸಿಸ್ ಪ್ರತಿಷ್ಠಾನ ಮತ್ತು ಭಾರತೀಯ ವಿದ್ಯಾಭವನ, ಬೆಂಗಳೂರು–ಮೈಸೂರು :** 162ನೇ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಜಾನಪದ ಜಾಕ್ಸನ್ ಜನಪದಶ್ರೀ ಡಾ. ಅಪ್ಪಗೆರೆ ತಿಮ್ಮರಾಜು ಅವರಿಂದ ಜನಪದ ಗೀತೆಗಳ ಸಂಜೆ ಕಾರ್ಯಕ್ರಮ, ಕಾರ್ಯಕ್ರಮದಲ್ಲಿ ಸಹ ಗಾಯಕರಾಗಿ ಶ್ರೀಮತಿ ದಿವ್ಯ, ಶ್ರೀಮತಿ ವನಿತಾ ಮತ್ತು ಶ್ರೀಮತಿ ಶ್ವೇತಾ, ಪಕ್ಕವಾದ್ಯ : ಪುಣ್ಯೇಶ್–ಹಾರ್ಮೋನಿಯಂ, ರಘು–ತಬಲಾ, ಪುನೀಶ್–ಕೊಳಲು, ಕಿರಣ್–ಡೋಲಕ್ ಮತ್ತು ಗುರುದತ್ ತಾಳಗೆಜ್ಜೆ, ಸ್ಥಳ: ಭಾರತೀಯ ವಿದ್ಯಾಭವನ, ವಿಜಯನಗರ 1ನೇ ಹಂತ, ಸಂಜೆ 6ಕ್ಕೆ.

▪ **ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ :** ಮಿಶ್ರ ಮಾಧುರ್ಯ, ಸುಮಧುರ ಗೀತೆಗಳು, ಮುಖ್ಯ ಅತಿಥಿಗಳು : ಅಕಾಡೆಮಿ ಗೌರವ ಅಧ್ಯಕ್ಷ ಟಿ.ಆರ್. ಹರೀಶ್, ಸನ್ಮಾನಿತರು : ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಅಂಶಿ ಪ್ರಸನ್ನಕುಮಾರ್, ರಾಮಮೂರ್ತಿರಾವ್, ಉಪಸ್ಥಿತರು: ಅಕಾಡೆಮಿ ಸಂಸ್ಥಾಪಕರಾದ ಹೆಚ್.ಆರ್. ಲೀಲಾವತಿ, ಅಧ್ಯಕ್ಷತೆ : ಅಕಾಡೆಮಿ ಅಧ್ಯಕ್ಷ ಕೆ. ನಾಗರಾಜು, ಸ್ಥಳ: ಸಂಗೀತ ಕಲಾನಿಧಿ ಮೈಸೂರು ವಾಸುದೇವಾಚಾರ್ಯ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

▪ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಸ್ಥಳ: ಶ್ರೀವೇಣುಗೋಪಾಲಸ್ವಾಮಿ ದೇವಸ್ಥಾನ, ತ್ಯಾಗರಾಜ ರಸ್ತೆ, ಸಂಜೆ 6.30 ರಿಂದ.

▪ **ರಂಗಾಯಣ :** ದಾವಣಗೆರೆ ವೃತ್ತಿ ರಂಗಭೂಮಿ ರಂಗಾಯಣ ಕಲಾವಿದರಿಂದ ಪ್ರತಿ ಗಂಧರ್ವ ನಾಟಕ ಪ್ರದರ್ಶನ, ರಚನೆ : ಡಾ. ರಾಜಪ್ಪ ದಳವಾಯಿ, ನಿರ್ದೇಶನ : ಮಾಲತೇಶ್ ಬಡಿಗೇರ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

▪ **ಸಾಧನಾ ಮಂದಿರ:** ಸರಸ್ವತಿ ಪೂಜೆ ವಿಶೇಷ ತರಬೇತಿ, ಅರ್ಥ, ಸಂಕೇತ, ಮಹತ್ವ, ಪ್ರಾಮುಖ್ಯತೆ, ಪ್ರಯೋಜನ ಮತ್ತು ವಿಧಾನಗಳೊಂದಿಗೆ, ಸ್ಥಳ: ಸಂಜೆ 6.30ಕ್ಕೆ ಶ್ರೀ ಸಂಕಷ್ಟಹರ ಗಣಪತಿ ದೇವಸ್ಥಾನ, ಬಿಇಎಂಎಲ್‌ನಗರ, ಶ್ರೀರಾಮಪುರ, ಸಂಜೆ 7.30ಕ್ಕೆ ಮೈಸೂರು ಮೃಗಾಲಯ, ಎಸ್‌ವಿಎಂ ಲೇಔಟ್, ಕೆನರಾ ಬ್ಯಾಂಕ್ ಹಿಂಭಾಗ, ವಿವೇಕಾನಂದನಗರ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

▪ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿ ಧನುರ್ಮಾಸ ವಿಶೇಷ ಪೂಜೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪತ್ರಿಕಾಧ್ವನಿ – ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ. ಕೊಡ್ಲಿ ಗುರುರಾಜು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಟಿ.ಎನ್.ಅಶ್ವಿನಿ ಹಾಗೂ ಗೀತಾ ವೈ.ಪುಟ್ಟಿ, ವ್ಯಾಖ್ಯಾನ–ಪ್ರೊ. ಸಿ. ನಾಗಣ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ–ಕೊನೆ ಅರಿಯದ ಪಯಣ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ :ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ ಕೆ. ಆರ್. ಪೇಟೆ ತಾಲೂಕು ಕಸಬಾ ಹೋಬಳಿ ಲಕ್ಷ್ಮಿಪುರದ ಎಲ್. ಆರ್. ಕುಮಾರಸ್ವಾಮಿ ಮತ್ತು ಕಿಕ್ಕೇರಿ ಹೋಬಳಿ ಬಿದರಹಳ್ಳಿ ಗ್ರಾಮದ ಜವರಾಯಿಗೌಡ, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಇಸ್ ಸಪ್ತಾಹ್ ಸಂಸದ್ ಮೇ, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಸೋಮಬಾಲ ಕುಮಾರ್–ದ್ರುಪದ್, ಧಾಮಾರ್



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 20 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 242 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4



ಇಂದು, ಮುಂದೂ ನಾನೇ ಮುಖ್ಯಮಂತ್ರಿ



ಅಧಿಕಾರ ಹಂಚಿಕೆ ಒಪ್ಪಂದವೇ ಆಗಿಲ್ಲ; ವಿಪಕ್ಷ ನಾಯಕರು, ತಮ್ಮದೇ ಪಕ್ಷದ ವಿರೋಧಿ ಬಣಕ್ಕೆ ಭರ್ಜರಿ ಸಂದೇಶ

ಬೆಳಗಾವಿ, ಸುವರ್ಣವಿಧಾನಸೌಧ, ಡಿ.19(ಕೆಎಂಶಿ)– **ಅಧಿಕಾರ ಹಂಚಿಕೆ ಒಪ್ಪಂದವೇ ಆಗಿಲ್ಲ. ನಾನೇ ಐದು ವರ್ಷ ಆಡಳಿತ ನಡೆಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲೇ ಇಂದು ಘೋಷಿಸಿದ್ದಾರೆ.**

ಪಕ್ಷದ ಶಾಸಕರು ನನ್ನನ್ನು ಆಯ್ಕೆ ಮಾಡಿ ಅಧಿಕಾರ ನಡೆಸಲು ಅವಕಾಶ ಕೊಟ್ಟಿದ್ದಾರೆ. ಶಾಸಕರು, ವರಿಷ್ಠರು ನನ್ನ ಜೊತೆ ಇರುವವರೆಗೂ ನಾನೇ ಮುಖ್ಯಮಂತ್ರಿ. ಉತ್ತರ ಕರ್ನಾಟಕ ಅಭಿವೃದ್ಧಿಗೆ ಸಂಬಂಧಿಸಿದ ಚರ್ಚೆಗೆ ಉತ್ತರ ನೀಡುವ ಸಂದರ್ಭದಲ್ಲಿ ಪ್ರತಿಪಕ್ಷ ನಾಯಕ ಆರ್.ಅಶೋಕ್ ಸೇರಿದಂತೆ ಕೆಲವು ಬಿಜೆಪಿ ಶಾಸಕರು, ಅಧಿಕಾರ ಹಸ್ತಾಂತರ ವಿಷಯ ಪ್ರಸ್ತಾಪಿಸಿದ್ದನ್ನೇ ಆಧಾರ ಮಾಡಿಕೊಂಡ ಮುಖ್ಯಮಂತ್ರಿ, ವಿರೋಧ ಪಕ್ಷಗಳಿಗಷ್ಟೇ ಅಲ್ಲದೆ, ತಮ್ಮ ಪಕ್ಷದವರಿಗೂ ಸಂದೇಶ ನೀಡಿದರು.

ಕಳೆದ ನಾಲ್ಕು ದಿನಗಳಿಂದ ಬಳಲಿದ್ದೀರಿ. ನಾನು, ರಾಜಕೀಯ ನಿಶ್ಶಕ್ತಿ ಎಂದುಕೊಂಡಿದ್ದೆ. ನಿಮಗೆ ರಾಜಕೀಯ ಶಕ್ತಿ ಬಂದಿದೆಯೇ ಎಂಬುದಾಗಿ ಅಶೋಕ್ ಕಾಲೆಳೆದಿದ್ದನ್ನೇ ಅಸ್ತ್ರವನ್ನಾಗಿ ಮಾಡಿಕೊಂಡ ಮುಖ್ಯಮಂತ್ರಿ, ಪಕ್ಷದಲ್ಲಿನ ತಮ್ಮ ವಿರೋಧಿಗಳಿಗೆ ಅಧಿಕಾರ ಹಂಚಿಕೆ ಸೂತ್ರವೇ ಇಲ್ಲ ಎಂಬುದಾಗಿ ಸ್ಪಷ್ಟಪಡಿಸಿದ್ದಲ್ಲದೆ, ನನಗೆ ರಾಜಕೀಯ ನಿಶ್ಶಕ್ತಿಯೇ ಇಲ್ಲ. ಅಂತಹ ಅವಕಾಶ ಸೃಷ್ಟಿಯೂ ಆಗುವುದಿಲ್ಲ ಎಂದರು.

ಅಷ್ಟೊಂದು ತಲೆಕೆಡಿಸಿಕೊಂಡು ರಾಜಕೀಯ ಮಾಡುವ ಅಗತ್ಯವೂ ಇಲ್ಲ. ನನಗೆ ರಾಜಕೀಯ ನಿಶ್ಶಕ್ತಿ ಎಂಬುದು ಹಿಂದೆಯೂ ಇರಲಿಲ್ಲ, ಈಗಲೂ ಇಲ್ಲ, ಮುಂದೆಯೂ ಬರುವುದಿಲ್ಲ. ಆದರೆ ದೈಹಿಕ ನಿಶ್ಶಕ್ತಿ ಇರಬಹುದು ಎಂದರು. ನಮ್ಮಲ್ಲಿ ಅಧಿಕಾರ ಹಂಚಿಕೆ ಸೂತ್ರ ವರಿಷ್ಠರು ಮಾಡಿಲ್ಲ. ಅಂತಹ ತೀರ್ಮಾನವೂ ಆಗಿಲ್ಲ. ಈಗ ನಾನೇ ಮುಖ್ಯಮಂತ್ರಿ, ▶ 6ನೇ ಪುಟಕ್ಕೆ

ನನ್ನ, ಸಿದ್ದರಾಮಯ್ಯ ನಡುವೆ ಒಂದು ಒಪ್ಪಂದ ಆಗಿದೆ: ಅದರಂತೆ ನಡಿತೇವೆ!

ಜೊತೆಗೆ ಹೈಕಮಾಂಡೂ ಒಪ್ಪಂದಕ್ಕೆ ಬಂದಿದೆ: ಡಿಕೆಶಿ



ಬೆಂಗಳೂರು, ಡಿ.19(ಕೆಎಂಶಿ)– ಅಧಿಕಾರ ಹಂಚಿಕೆ ಕುರಿತಂತೆ ನಾನು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಒಂದು ಒಪ್ಪಂದಕ್ಕೆ ಬಂದಿದ್ದೇವೆ. ಅದರಂತೆ ನಡೆದುಕೊಳ್ಳುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಇಬ್ಬರ ನಡುವಿನ ಮಾತುಕತೆ ಅಲ್ಲದೆ, ಹೈಕಮಾಂಡೂ ಒಪ್ಪಂದಕ್ಕೆ ಬಂದಿದೆ. ಈ ವಿಷಯದಲ್ಲಿ ನಾವಿಬ್ಬರೂ ಅನೇಕ ಬಾರಿ ಮಾತನಾಡಿದ್ದು, ಅದರಂತೆ ನಡೆದುಕೊಳ್ಳುತ್ತಿದ್ದೇವೆ ಎನ್ನುವ ಮೂಲಕ ಅಧಿಕಾರ ಹಂಚಿಕೆ ಸೂತ್ರ ಆಗಿದೆ ಎಂಬುದನ್ನು ಬಹಿರಂಗಪಡಿಸಿದರು. ಅಧಿಕಾರ ಹಂಚಿಕೆ ಒಪ್ಪಂದವೇ ಆಗಿಲ್ಲ ಎಂದು ಮುಖ್ಯಮಂತ್ರಿ ವಿಧಾನಸಭೆಯಲ್ಲಿ ಘೋಷಣೆ ಮಾಡಿದ ಬೆನ್ನಲ್ಲೇ ಶಿವಕುಮಾರ್ ಗೋಕರ್ಣದಲ್ಲಿ ದೇವರಿಗೆ ಪೂಜೆ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಒಪ್ಪಂದವನ್ನು ಬಹಿರಂಗಪಡಿಸಿದರು.

ಸಿದ್ದರಾಮಯ್ಯ ಐದು ವರ್ಷ ಮುಖ್ಯಮಂತ್ರಿ ಆಗಿರುವುದಿಲ್ಲ ಎಂಬುದಾಗಿ ನಾನು ಎಲ್ಲಿಯೂ ಹೇಳಿಲ್ಲ. ವರಿಷ್ಠರಿಂದ ಅವರು ಮುಖ್ಯಮಂತ್ರಿ ಆಗಿದ್ದಾರೆ. ▶ 6ನೇ ಪುಟಕ್ಕೆ

ರೈತರ ಹಾಲಿನ ಪ್ರೋತ್ಸಾಹ ಧನ 7 ರೂ.ಗೆ ಏರಿಕೆ

ಸಿಎಂ ಸಿದ್ದರಾಮಯ್ಯ ಘೋಷಣೆ

ಬೆಳಗಾವಿ, ಡಿ.19– ರೈತರಿಗೆ 1 ಲೀಟರ್ ಹಾಲಿಗೆ ಸಹಾಯಧನವನ್ನು 7 ರೂ.ಗಳಿಗೆ ಏರಿಕೆ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ಬೆಳಗಾವಿ ಅಧಿವೇಶನದ ಕೊನೆಯ ದಿನವಾದ ಶುಕ್ರವಾರ ಮಾತನಾಡಿದ ಅವರು, ರೈತರಿಗೆ ಹಸುಗಳನ್ನು ಸಾಕಿ, ಮೇವು ನೀಡಲು ಹೆಚ್ಚು ಖರ್ಚುಗಳು ಆಗುತ್ತವೆ. ಮೇವಿನ ಹಿಂಡಿ ದರ ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ ರೈತರಿಗೆ ನೆರವಾಗಲು ನಮ್ಮ ಸರ್ಕಾರ ಪ್ರತಿ ಲೀಟರ್ ಹಾಲಿನ ಮೇಲೆ 5 ರೂಪಾಯಿ ಸಹಾಯಧನವನ್ನು ಹಿಂದೆ ನೀಡುತ್ತಿತ್ತು. ಅದನ್ನೀಗ ಈ ವರ್ಷದ ಅವಧಿಯಲ್ಲೇ 7 ರೂಗಳಿಗೆ ಹೆಚ್ಚಿಸುತ್ತಿದ್ದೇವೆ ಎಂದರು.

ಪ್ರಸ್ತುತ ಪ್ರೋತ್ಸಾಹ ಧನವು ರೈತರಿಗೆ ಸಂಪೂರ್ಣವಾಗಿ ತಲುಪುತ್ತಿಲ್ಲ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಬೆಲೆ ಏರಿಕೆ ಹೊರತಾಗಿಯೂ ಸರ್ಕಾರದಿಂದ ನೆರವು ಮುಂದುವರಿಯುತ್ತದೆ ಎಂದು ಭರವಸೆ ನೀಡಿದರು.

ತಮ್ಮ ಸರ್ಕಾರದ ಹಿಂದಿನ ಅವಧಿಯ (2013–18) ಪ್ರಣಾಳಿಕೆ ಭರವಸೆಗಳನ್ನು ಪ್ರಸ್ತಾಪಿಸಿದ ಸಿದ್ದರಾಮಯ್ಯ, 165 ಭರವಸೆಗಳ ಪೈಕಿ 158 ಭರವಸೆಗಳನ್ನು ಈಡೇರಿಸಲಾಗಿದೆ ಎಂದು ಸ್ಪಷ್ಟಪಡಿಸಿದರು. ಇದರ ಜೊತೆಗೆ ಬಜೆಟ್‌ನಲ್ಲಿ ಘೋಷಿಸದೆ 30 ಹೊಸ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ ಎಂದರು. ಪ್ರಸ್ತುತ (2023ರ ನಂತರ) ಪ್ರಣಾಳಿಕೆಯಲ್ಲಿನ 593 ಭರವಸೆಗಳ ಪೈಕಿ 293 ಭರವಸೆಗಳನ್ನು ಈಗಾಗಲೇ ಈಡೇರಿಸಲಾಗಿದ್ದು, ಉಳಿದ ಭರವಸೆಗಳನ್ನು ಮುಂದಿನ ಮೂರು ಬಜೆಟ್‌ಗಳಲ್ಲಿ ಈಡೇರಿಸಲಾಗುವುದು ಎಂದು ಹೇಳಿದರು.

ಶೃಂಗೇರಿ ಪೀಠದ ಶ್ರೀಗಳಾದ ಶ್ರೀ ಶ್ರೀ ವಿಧುಶೇಖರ ಭಾರತೀ ಶ್ರೀಪಾದಂಗಳಿಗೆ ಮೈಸೂರಲ್ಲಿ ಭಕ್ತಿಪೂರ್ವಕ ಸ್ವಾಗತ

ಇಂದು ಅರಮನೆ ಆವರಣದಲ್ಲಿ ಸ್ತುತಿಶಂಕರ ಸ್ತೋತ್ರ ಮಹಾಸಮರ್ಪಣೆ



'ಸ್ತುತಿಶಂಕರ ಸ್ತೋತ್ರ ಮಹಾಸಮರ್ಪಣೆ' ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಗಮಿಸಿದ ಶೃಂಗೇರಿ ಮಠದ ಕಿರಿಯ ಶ್ರೀಗಳಾದ ವಿಧುಶೇಖರಭಾರತೀ ಸನ್ನಿಧಾನಂಗಳವರು ಸಕಲ ಗೌರವಗಳೊಂದಿಗೆ ಶುಕ್ರವಾರ ಪುರಪ್ರವೇಶ ಮಾಡಿದರು.

ಮೈಸೂರು, ಡಿ.19(ಎಸ್‌ಪಿಎನ್)– ಮೈಸೂರು ಅರಮನೆ ಆವರಣದಲ್ಲಿ ಶನಿವಾರ ಸಂಜೆ 4 ಗಂಟೆಗೆ ಹಮ್ಮಿಕೊಂಡಿರುವ 'ಸ್ತುತಿಶಂಕರ ಸ್ತೋತ್ರ ಮಹಾಸಮರ್ಪಣೆ' ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಶೃಂಗೇರಿ ಮಠದ ಕಿರಿಯ ಶ್ರೀಗಳಾದ ವಿಧುಶೇಖರಭಾರತೀ ಸನ್ನಿಧಾನಂಗಳವರು ಸಕಲ ಗೌರವಗಳೊಂದಿಗೆ ಶುಕ್ರವಾರ ಪುರಪ್ರವೇಶ ಮಾಡಿದರು.

ಮೈಸೂರು ಅಗ್ರಹಾರದಲ್ಲಿರುವ ಶಂಕರ ಮಠಕ್ಕೆ ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರು ಭೇಟಿ ನೀಡುವ ಮುನ್ನ ಹೊಸ ಮಠದ ಮುಂಭಾಗದಲ್ಲಿ ಅವರಿಗೆ ಸಕಲ ಧಾರ್ಮಿಕ ಗೌರವಗಳೊಂದಿಗೆ ಶ್ರೀ ಶಂಕರಭಾರತೀ ಸ್ವಾಮೀಜಿ, ಶ್ರೀ ಬ್ರಹ್ಮಾನಂದ ಭಾರತೀ ಸ್ವಾಮೀಜಿ ಮತ್ತು ಇತರರು ಸ್ವಾಗತ ಕೋರಿದರು. ಬಳಿಕ ಮೆರವಣಿಗೆ ಮೂಲಕ ಶ್ರೀ ಶಾರದಾದೇವಿ ಮಂದಿರ ಪ್ರವೇಶಿಸಿ, ಪೂಜೆ ಸಲ್ಲಿಸಿದರು. ಅಲ್ಲಿ ಭಕ್ತರಿಗೆ ಕೆಲಕಾಲ ಪ್ರವಚನ ನೀಡಿದರು. ಶುಕ್ರವಾರ ರಾತ್ರಿ ಶ್ರೀಪಾದಂಗಳವರು ಶಂಕರಮಠದಲ್ಲೇ ನೆಲೆನಿಂತಿದ್ದಾರೆ.

ವಿಶೇಷ ಲೇಖನ ಪುಟ–4

ಮೆರವಣಿಗೆಯಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಅಖಿಲ ಕರ್ನಾಟಕ ಬ್ರಾಹ್ಮಣದ ಮಹಾಸಭಾ ಮೈಸೂರು ಘಟಕದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಶಂಕರಮಠದ ಕಾರ್ಯದರ್ಶಿ ರಾಮಚಂದ್ರ, ಶಶಿಕಲಾ ಕುಮಾರ್, ಕಲಾವತಿ ವೆಂಕಟೇಶ್, ಭಜನಾ ಮಂಡಳಿಯ ಮಹಿಳೆಯರು ಭಾಗವಹಿಸಿದ್ದರು. ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನ ಹಾಗೂ ಕೆ.ಆರ್.ನಗರದ ▶ 6ನೇ ಪುಟಕ್ಕೆ

ಇಡಿಯಿಂದ ಮಾಜಿ ಸಚಿವ ನಾಗೇಂದ್ರರ 8 ಕೋಟಿ ಆಸ್ತಿ ಜಪ್ತಿ

ನವದೆಹಲಿ, ಡಿ.19– ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮಾಜಿ ಸಚಿವ ಬಿ.ನಾಗೇಂದ್ರ ಅವರ



ಸುಮಾರು 8 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿರುವುದಾಗಿ ಜಾರಿ ನಿರ್ದೇಶನಾಲಯ ಶುಕ್ರವಾರ ತಿಳಿಸಿದೆ. ನಾಲ್ಕು ವಸತಿ ಮತ್ತು ವಾಣಿಜ್ಯ ಆಸ್ತಿ, ಒಂದು ಕಟ್ಟಡ ಮುಟ್ಟುಗೋಲು ಹಾಕಿಕೊಂಡಿರುವ ಆಸ್ತಿಗಳಲ್ಲಿ ಸೇರಿವೆ. ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯ ಸೆಕ್ಷನ್‌ಗಳ ಅಡಿಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಜಾರಿ ನಿರ್ದೇಶನಾಲಯ ತಿಳಿಸಿದೆ. ಈ ಆಸ್ತಿಗಳನ್ನು ಪಿಎಂಎಲ್‌ಎ ಅಡಿಯಲ್ಲಿ 'ಅಪರಾಧದ ಆದಾಯ' ಎಂದು ಇಡಿ ಕರೆದಿದೆ. ▶ 6ನೇ ಪುಟಕ್ಕೆ

ಭಾರೀ ವಿರೋಧದ ನಡುವೆ ವಿಧಾನಪರಿಷತ್‌ನಲ್ಲೂ 'ದ್ವೇಷ ಭಾಷಣ' ಮಸೂದೆಗೆ ಅಂಗೀಕಾರ

ಬೆಳಗಾವಿ, ಡಿ.19– ರಾಜ್ಯದಲ್ಲಿ ದ್ವೇಷಭಾಷಣಗಳಿಗೆ ಕಡಿವಾಣ ಹಾಕುವ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ವಿಧೇಯಕ–2025 ಅನ್ನು ಪ್ರತಿಪಕ್ಷಗಳ ತೀವ್ರ ಪ್ರತಿಭಟನೆ ನಡುವೆ ಶುಕ್ರವಾರ ವಿಧಾನ ಪರಿಷತ್ತಿನಲ್ಲಿಯೂ ಅಂಗೀಕರಿಸಲಾಯಿತು.

ವಿರೋಧ ಪಕ್ಷಗಳು, ಭಾಷಣ ಸ್ವಾತಂತ್ರ್ಯದ ಮೇಲೆ ನೇರ ದಾಳಿ, ರಾಜಕೀಯ ದ್ವೇಷಗಳಿಗೆ ಅಪಾಯಕಾರಿ ಅಸ್ತ್ರ ಎಂದು ಕರೆದು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದವು. ಇದರ ನಡುವೆ ಗೃಹ ಸಚಿವ ಡಾ. ಜಿ. ಪರಮೇಶ್ವರ್, ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ(ಪ್ರತಿಬಂಧಕ) ವಿಧೇಯಕ– 2025 ಅನ್ನು ಮಂಡಿಸಿದರು. ಗುರುವಾರ ವಿಧಾನಸಭೆಯಲ್ಲಿ ಈ ವಿಧೇಯಕವನ್ನು ಅಂಗೀಕರಿಸಲಾಗಿತ್ತು. ಪ್ರಸ್ತಾವಿತ ಮಸೂದೆಯು ಪೊಲೀಸ್ ರಾಜ್ಯ "ಅಘೋಷಿತ ತುರ್ತುಸ್ಥಿತಿ"ಗೆ ಕಾರಣವಾಗುತ್ತದೆ ಎಂದು ಆರೋಪಿಸಿ ಪ್ರತಿಪಕ್ಷಗಳು ಮಸೂದೆಯನ್ನು ಹಿಂಪಡೆಯಬೇಕೆಂದು ಒತ್ತಾಯಿಸಿದವು. ದ್ವೇಷದ ಅಪರಾಧಕ್ಕಾಗಿ 50,000 ರೂ.ಗಳ ದಂಡದೊಂದಿಗೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆಯನ್ನು ಮಸೂದೆಯಲ್ಲಿ ▶ 6ನೇ ಪುಟಕ್ಕೆ

ದ್ವೇಷ ಭಾಷಣ ಮಸೂದೆಗೆ ಅಂಕಿತ ಬೇಡ: ರಾಜ್ಯಪಾಲರಿಗೆ ಶೋಭಾ ಪತ್ರ

ನವದೆಹಲಿ: ಬೆಳಗಾವಿ ವಿಧಾನಮಂಡಲದ ಅಧಿವೇಶನದಲ್ಲಿ ಅಂಗೀಕರಿಸಿರುವ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ಮಸೂದೆ–2025ಗೆ ಅಂಕಿತ ಹಾಕಬಾರದು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ಕೇಂದ್ರ ಕಾರ್ಮಿಕ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಶುಕ್ರವಾರ ಪತ್ರ ಬರೆದಿದ್ದಾರೆ.

ದ್ವೇಷ ಭಾಷಣ ನಿಯಂತ್ರಣಕ್ಕೆ ಈ ಮಸೂದೆ ತರಲಾಗಿದೆ ಎಂದು ರಾಜ್ಯ ಸರ್ಕಾರ ಹೇಳಿಕೊಂಡಿದೆ. ಆದರೆ, ಮಸೂದೆಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಮಸೂದೆಯಲ್ಲಿ ಅನೇಕ ಲೋಪಗಳಿರುವುದು ಗಮನಕ್ಕೆ ತಂದಿದೆ. ಭಿನ್ನಾಭಿಪ್ರಾಯಗಳನ್ನು ಹತ್ತಿಕ್ಕಲು ಸರ್ಕಾರ ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆ ಇದೆ. ಸಂವಿಧಾನದ 19ನೇ ವಿಧಿಯ ಅಡಿಯ ವಾಕ್ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕುವ ಉದ್ದೇಶವನ್ನು ಈ ಮಸೂದೆ ಹೊಂದಿದೆ ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.




ಆಂದ್ಲೆ ಜಗದೀಶ್ವರಿಯಲ್ಲಿ ಡಿಸಿಎಂ ಡಿಕೆಶಿ ಮೊರೆ

ಇಲ್ಲಿ ಹಿಂಗಾರ ಪ್ರಸಾದ ಭವಿಷ್ಯಕ್ಕೆ ವಿಶೇಷ ಮಹತ್ವವಿದೆ

ಬೆಳಗಾವಿ, ಡಿ.19(ಕೆಎಂಶಿ)– ಅಧಿಕಾರ ಹಸ್ತಾಂತರ, ಕಾನೂನು ಹೋರಾಟ ಸೇರಿದಂತೆ ಹಲವು ಒತ್ತಡಗಳಲ್ಲಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಾಲರಾತ್ರಿ ಎಳ್ಳು ಅಮಾವಾಸ್ಯೆ ದಿನವಾದ ಅಂಕೋಲಾದ ಆಂದ್ಲೆ ಜಗದೀಶ್ವರಿ ದೇವಿಗೆ ವಿಶೇಷ ಮಾಲೆ ಪೂಜೆ ಸಲ್ಲಿಸಿದ್ದಾರೆ.

ಬೆಳಗಾವಿ ವಿಧಾನಮಂಡಲದ ಅಧಿವೇಶನ ವೇಳೆ ಇಂದು ಬೆಳಗ್ಗೆಯೇ ಹೆಲಿಕಾಪ್ಟರ್‌ನಲ್ಲಿ ಗೋಕರ್ಣಕ್ಕೆ ಆಗಮಿಸಿ, ಮಹಾಬಲೇಶ್ವರನಿಗೆ ವಿಶೇಷ ಪೂಜೆ ನೆರವೇರಿಸಿದರು. ಆಂದ್ಲೆ ಜಗದೀಶ್ವರಿ ದೇವಿ ಹಿಂಗಾರ ಪ್ರಸಾದ ಭವಿಷ್ಯಕ್ಕೆ ಜನಸಾಮಾನ್ಯರಲ್ಲದೆ, ನಾಡಿನ ಖ್ಯಾತ ಉದ್ಯಮಿಗಳು, ಪ್ರಸಿದ್ಧ ರಾಜಕಾರಣಿಗಳು, ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಹಿಂಗಾರ ಪ್ರಸಾದ ಭವಿಷ್ಯ ಕೇಳುತ್ತಾರೆ. ದೇವಿಯ ತಲೆಯ ಬಲಭಾಗದಿಂದ ಹಿಂಗಾರ ಪ್ರಸಾದ ಬಿದ್ದರೆ, ಅಂದುಕೊಂಡ ಕೆಲಸ ಆಗುತ್ತದೆ.



ಗೋಕರ್ಣದ ಮಹಾಬಲೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿದರು.

ಎಡಭಾಗದಿಂದ ಹಿಂಗಾರ ಪ್ರಸಾದ ಬಿದ್ದರೆ ಕೆಲಸ ಆಗುವುದಿಲ್ಲ. ಒಂದು ವೇಳೆ ಹಿಂಗಾರ ಪ್ರಸಾದ ಬೀಳದಿದ್ದರೆ ಆ ಕೆಲಸವನ್ನೇ ಮಾಡಬಾರದು ಎಂಬ ಸಂದೇಶ ನೀಡಲಾಗುತ್ತದೆ.

ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗುವ ಮುನ್ನ ದೇವಾಲಯಕ್ಕೆ ಬಂದು ವಿಶೇಷ ಪೂಜೆ ಸಲ್ಲಿಸಿ ಹಿಂಗಾರ ಪ್ರಸಾದ ಭವಿಷ್ಯ ಕೇಳಿದ್ದರು. ನಂತರ ತಮಗೆ ಎದುರಾದ ಕಾನೂನು ಸಂಕಷ್ಟ ಸಮಯದಲ್ಲೂ ದೇವಿಯ ಮೊರೆ ಹೊಕ್ಕಿದ್ದರು.

ಇದಾದ ಬಳಿಕ ಕಳೆದ ವಿಧಾನಸಭೆ ಚುನಾವಣೆ ಸಮಯದಲ್ಲೂ ದೇವಿಯ ಬಳಿ ಹಿಂಗಾರ ಭವಿಷ್ಯ ಕೇಳಿದ್ದರು. ಅಂದು ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಕೇಳಿದ ಭವಿಷ್ಯ ನಿಜವಾಗಿದೆ ಎಂದು ಅರ್ಚಕರು ತಿಳಿಸಿದ್ದರು. ಈಗ ಕಾಲರಾತ್ರಿ ಎಳ್ಳು ಅಮಾವಾಸ್ಯೆ ಹಿನ್ನೆಲೆಯಲ್ಲಿ ದೇವಿಗೆ ವಿಶೇಷ ಮಾಲೆ ಪೂಜೆ ನೆರವೇರಿಸಿದ್ದಾರೆ. ದೇವಸ್ಥಾನದಲ್ಲಿ ಪೂಜೆ ವೇಳೆ ಶಿವಕುಮಾರ್ ಅತ್ಯಂತ ಕಟ್ಟುನಿಟ್ಟಿನ ನಿಯಮ ಪಾಲಿಸಿದ್ದು, ಗರ್ಭಗುಡಿಯೊಳಗೆ ಸೂಚಿಸಿದ ಕೆಲವೇ ಕೆಲವು ಆಪ್ತರಿಗೆ ಮಾತ್ರ ಪ್ರವೇಶ ನೀಡಲಾಗಿತ್ತು. ▶ 6ನೇ ಪುಟಕ್ಕೆ

ಕೋರಿಕೆಗೆ ಸಿಕ್ಕ 'ಪ್ರಸಾದ'!

ಕಾರವಾರ, ಡಿ.19– ಅಂಕೋಲಾದ ಆಂದ್ಲೆ ಗ್ರಾಮದಲ್ಲಿನ ಜಗದೀಶ್ವರಿ ಅಮ್ಮನವರ ದೇವಸ್ಥಾನದಿಂದ ಮರಳುವಾಗ ಡಿ.ಕೆ. ಶಿವಕುಮಾರ್ ಸಂತಸದಲ್ಲಿದ್ದರು. ಇನ್ನೊಂದು ತಿಂಗಳಲ್ಲಿ ಪುನಃ ಬರುವುದಾಗಿ ಭರವಸೆ ನೀಡಿದ್ದಾರೆ.

ಐದು ವರ್ಷದ ಹಿಂದೆ ಇದೇ ಸ್ಥಳಕ್ಕೆ ಬಂದು ಕುಟುಂಬ ಸಮೇತ ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸಿದ್ದೆ. ಅದು ಈಡೇರಿದ ಬಳಿಕ ಬಂದು ಪೂಜೆ ಸಲ್ಲಿಸಿದ್ದೆ. ಈಗಲೂ ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸಲು ಬಂದಿದ್ದೇನೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಜಗದೀಶ್ವರಿ ದೇವಿ ಸನ್ನಿಧಿಯಲ್ಲಿ ಭಕ್ತರು ಇಷ್ಟಾರ್ಥ ಸಿದ್ಧಿಗೆ ದೇವಿಗೆ ಅಲಂಕಾರ ಮಾಡಿಸಿ, ಪ್ರಶ್ನೆ ಕೇಳಿಸುತ್ತಾರೆ. ಭಕ್ತರ ಕೋರಿಕೆ ಈಡೇರುವುದಿದ್ದರೆ ದೇವಿ ಐದು ರೂಪದಲ್ಲಿ ಪ್ರಸಾದ ನೀಡುತ್ತಾಳೆ. ಡಿ.ಕೆ. ಶಿವಕುಮಾರ್ ಅವರು ಹಲವು ಬಾರಿ ಪ್ರಶ್ನೆ ಕೇಳಿದಾಗಲೂ ಅವರಿಗೆ ದೇವಿ ಪ್ರಸಾದ ಕರುಣಿಸಿದ್ದಾಳೆ ಎಂದು ಅರ್ಚಕ ಗಣೇಶ ನಾಯ್ಕ ಪ್ರತಿಕ್ರಿಯಿಸಿದ್ದಾರೆ.

ಸಂಸತ್ ಕಲಾಪ ಮುಂದೂಡಿಕೆ

ನವದೆಹಲಿ, ಡಿ.19– ಸಂಸತ್ತು ಚಳಿಗಾಲದ ಅಧಿವೇಶನದ ಕೊನೆಯ ದಿನವಾದ ಶುಕ್ರವಾರ ಕಲಾಪ ಆರಂಭವಾದ ಸ್ವಲ್ಪ ಸಮಯದಲ್ಲೇ ಲೋಕಸಭೆಯ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು. ಇಂದು ಲೋಕಸಭೆ ಕಲಾಪ ಆರಂಭವಾದ ಸ್ವಲ್ಪ ಸಮಯದ ನಂತರ ಸ್ಪೀಕರ್ ಓಂ ಬಿರ್ಲಾ ಅವರು ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು. ಈ ಅಧಿವೇಶನದಲ್ಲಿ ಸದನವು ಶೇ.111 ರಷ್ಟು ಫಲಪ್ರದವಾಗಿತ್ತು ಎಂದು ಓಂ ಬಿರ್ಲಾ ಹೇಳಿದರು. ಅತ್ತ ರಾಜ್ಯಸಭೆಯ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ ಸಭಾಪತಿ ಸಿ.ಪಿ.ರಾಧಾಕೃಷ್ಣನ್, ಹೆಚ್ಚಿನ ಉತ್ಪಾದಕತೆ ಮತ್ತು ಫಲಪ್ರದ ಚರ್ಚೆಗಳಿಗಾಗಿ ಎಲ್ಲರಿಗೂ ಧನ್ಯವಾದ ಅರ್ಪಿಸಿದರು.



ನಕ್ಕರೆ ಅದೇ ಸ್ವರ್ಗ

ವಕೀಲ : ನೀನು ಕಾರು ಕದ್ದಿದ್ದನ್ನು ನೋಡಿದ 15 ಜನ ಸಾಕ್ಷಿಗಳು ಇದ್ದಾರೆ. ಇದಕ್ಕೆ ಏನು ಹೇಳುತ್ತೀಯಾ?

ಅಪರಾಧಿ : ಇರಬಹುದು. ನಾನು ಕದ್ದಿದ್ದನ್ನು ನೋಡಿಲ್ಲದ 30 ಸಾಕ್ಷಿಗಳನ್ನು ನಾನು ಒದಗಿಸಬಲ್ಲೆ...!

ಮೈಸೂರು ಮಿತ್ರ

ಶನಿವಾರ, 20 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಶ್ರಮವು ನಿನ್ನದೇ ಸಮಯವು ನಿನ್ನದೇ ಸಾಧಿಸುವ ಛಲವಿದ್ದರೆ ಪ್ರತಿಫಲ ಕೂಡ ನಿನ್ನದಾಗುವುದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ.

ನಿಮ್ಮ ಪತ್ರಗಳು

ದೊಡ್ಡಕೆರೆ ಮೈದಾನದಲ್ಲಿ ಕೆರೆಯೂ ಬೇಡ, ಮಾಲ್ ಕೂಡ ಬೇಡ

ಮಾನ್ಯರೆ,

ಮೈಸೂರಿನ ದೊಡ್ಡಕೆರೆ ಮೈದಾನವನ್ನು ಸರ್ಕಾರ ತನ್ನ ಕೈವಶ ಮಾಡಿಕೊಂಡು ಆ ಜಾಗದಲ್ಲಿ ಯೂನಿಟಿ ಮಾಲ್ ನಿರ್ಮಿಸಲು ಮುಂದಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಮೈ.ಕಾ.ಪ್ರೇಮ್ ಕುಮಾರ್ ಆರೋಪ ಮಾಡಿರುವ ವಿಚಾರ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ದೊಡ್ಡಕೆರೆ ಮೈದಾನದಲ್ಲಿ ಕೆರೆಯನ್ನು ನಿರ್ಮಿಸಿ ಆ ಜಾಗದಲ್ಲಿ ನಿರ್ಮಿಸಲು ಮುಂದಾಗಿರುವ ಯೂನಿಟಿ ಮಾಲ್ ಬೇರೆಡೆಗೆ ಸ್ಥಳಾಂತರಿಸಬೇಕು. ಅಲ್ಲಿ ಕೆರೆ ನಿರ್ಮಿಸಬೇಕು ಎಂದು ಆಗ್ರಹಪಡಿಸಿರುವುದು ಸರಿಯಲ್ಲ ಎಂಬುದು ಮೈಸೂರಿನ ಜನತೆಯ ಅಭಿಪ್ರಾಯವಾಗಿದೆ.

ಸದರಿ ದೊಡ್ಡ ಕೆರೆ ಮೈದಾನದಲ್ಲಿ ವಸ್ತು ಪ್ರದರ್ಶನದ ವೀಕ್ಷಣೆಗೆಂದು ಬರುವ ನೂರಾರು ಕಾರುಗಳು, ಹಲವಾರು ಆಟೋರಿಕ್ಷಾಗಳೂ, ದೊಡ್ಡ ಖಾಸಗಿ ಬಸ್ಸುಗಳೂ ಸಹ ಅದೇ ಜಾಗದಲ್ಲಿ ನಿಲ್ಲಿಸುತ್ತಿದ್ದಾರೆ. ಅಲ್ಲಿ ಹಲವಾರು 'ಚುರುಮುರಿ' ಅಂಗಡಿಗಳೂ, ಟೊಮಾಟೊ ಸ್ಲೈಸ್ ಮಾರುವ ಅಂಗಡಿಗಳೂ, ಅನಾನಸ್, ಪಪ್ಪಾಯ, ಕಿತ್ತಳೆ, ಸೇಬು ಮುಂತಾದ ಹಣ್ಣುಗಳನ್ನು ಮಾರುವವರು ತಮ್ಮ ಜೀವನಕ್ಕೆ ಒಂದು ದಾರಿಯನ್ನು ಕಂಡುಕೊಂಡಿದ್ದಾರೆ.

ಇನ್ನು ವಸ್ತು ಪ್ರದರ್ಶನವನ್ನು ನೋಡುವ ಆಸೆಯಿಂದ ಅಲ್ಲಿಗೆ ಬರುವ ಸಾವಿರಾರು ಜನರು, ತಮ್ಮ ವಾಹನಗಳನ್ನು ಸದರಿ ಜಾಗದಲ್ಲಿ ನಿಲ್ಲಿಸಿ ವಸ್ತು ಪ್ರದರ್ಶನದ ವೀಕ್ಷಣೆಗೆ ತೆರಳುತ್ತಾರೆ. ಸದರಿ ವಸ್ತು ಪ್ರದರ್ಶನದ ವೀಕ್ಷಣೆಗಾಗಿ ಬಂದ ಜನರು ಒಳಗೆ ಪ್ರವೇಶಿಸಲು ಪ್ರತಿಯೊಬ್ಬರೂ 50 ರೂ.ಗಳನ್ನು ನೀಡಿ ಟಿಕೆಟ್ ಕೊಂಡು ಒಳಕ್ಕೆ ಪ್ರವೇಶ ಮಾಡಬೇಕಾಗಿದೆ. ಈ ಮೂಲಕ ಸರ್ಕಾರಕ್ಕೂ ಹೆಚ್ಚಿನ ಆದಾಯವಿದೆ. ಇನ್ನು ಒಳಗೆ ನೂರಾರು ವ್ಯಾಪಾರಸ್ಥರು ಅಲ್ಲಿ ನಡೆಸುವ ವ್ಯಾಪಾರದಿಂದ ತಮ್ಮ ಜೀವನಕ್ಕೆ ಒಂದು ಮಾರ್ಗವನ್ನು ಕಂಡುಕೊಂಡಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಅಲ್ಲಿ ಯೂನಿಟಿ ಮಾಲ್ ನಿರ್ಮಿಸುವ ಅವಶ್ಯಕತೆ ಇದೆಯೇ?

ಅಲ್ಲದೆ ಸದರಿ ಜಾಗದಲ್ಲಿ ಕೆರೆ ನಿರ್ಮಿಸಿದರೆ, ಅಲ್ಲಿ ನಿಲ್ಲುವ ನೀರಿನ ಸಂಗ್ರಹದಿಂದ ಸೊಳ್ಳೆ ಮುಂತಾದ ಕ್ರಿಮಿ–ಕೀಟಗಳು ನೆಲೆಸಿ ಸದರಿ ಜಾಗವು ರೋಗಗಳ ತವರು ಮನೆಯಾಗುತ್ತದೆ. ಅದೂ ಅಲ್ಲದೆ ಸದರಿ ಜಾಗದಲ್ಲಿ ಯೂನಿಟಿ ಮಾಲ್ ನಿರ್ಮಿಸಿದರೆ, ವಸ್ತು ಪ್ರದರ್ಶನದ ವೀಕ್ಷಣೆಗೆ ಬರುವ ಜನರ ವಾಹನಗಳನ್ನು ನಿಲ್ಲಿಸಲು ಜಾಗವೆಲ್ಲಿರುತ್ತದೆ. ಇದು ಹೇರಳವಾಗಿ ಹಣವಿರುವವರ ಜೇಬನ್ನು ಮತ್ತಷ್ಟು ತುಂಬಿಸುವ ಹುನ್ನಾರವಿದು ಎಂದು ಸಾಮಾನ್ಯ ಜನರಿಗೂ ಅರ್ಥವಾಗುತ್ತದೆ.

–ಬೇಲೂರು ದ.ಶಂ. ಪ್ರಕಾಶ್, ಮೈಸೂರು.

ಪೌರಕಾರ್ಮಿಕರೇ ಆರೋಗ್ಯದ ಕಡೆ ಗಮನವಿರಲಿ

ಮಾನ್ಯರೆ,

ಪೌರಕಾರ್ಮಿಕರು ವಾರಿಯರ್ಸ್. ನಗರವನ್ನು ಕಸಮುಕ್ತವನ್ನಾಗಿ ಮಾಡುವ ದಿಸೆಯಲ್ಲಿ ಪೌರಕಾರ್ಮಿಕರ ಶ್ರಮ ನಿರ್ಣಾಯಕ. ಪೌರಕಾರ್ಮಿಕರು ನಗರದ ಸ್ವಚ್ಛತೆಯ ಜತೆಗೆ ತಮ್ಮ ಆರೋಗ್ಯದ ಬಗ್ಗೆ ಜಾಗೃತಿ ವಹಿಸಬೇಕು ಹಾಗೂ ಸಂಬಂಧಪಟ್ಟ ಇಲಾಖೆ ಅವರಿಗೆ ಅಗತ್ಯವಾದ ಮಾಹಿತಿಗಳನ್ನು ನೀಡಬೇಕು. ಪೌರಕಾರ್ಮಿಕರು ಆರೋಗ್ಯವಾಗಿದ್ದರೆ ಮಾತ್ರ ನಗರವನ್ನು ಸ್ವಚ್ಛವಾಗಿಡಲು ಸಾಧ್ಯ. ಪೌರಕಾರ್ಮಿಕರು ಪ್ರತಿ ಮನೆ, ರಸ್ತೆಗೂ ಹೋಗಿ ಕಸವನ್ನು ಸಂಗ್ರಹಿಸಿ ಸ್ವಚ್ಛತೆ ಮಾಡುತ್ತಾರೆ. ಆದ್ದರಿಂದ ಪೌರಕಾರ್ಮಿಕರು ನಿಯಮಿತವಾಗಿ ಕೈಗಳನ್ನು ಸ್ಯಾನಿಟೈಸರ್‌ನಿಂದ ಸ್ವಚ್ಛಗೊಳಿಸಿಕೊಳ್ಳಬೇಕು. ಸ್ವಚ್ಛ ಮಾಡುವಾಗ ಮುಂಜಾಗ್ರತಾ ಸಲಕರಣೆಗಳನ್ನು ಉಪಯೋಗಿಸಬೇಕು ಮತ್ತು ಮಾಸ್ಕ್ ಧರಿಸಿ ತಮ್ಮ ಕೆಲಸ ಮಾಡಬೇಕು. ಕಸ ವಿಂಗಡಣೆ ಬಗ್ಗೆ ನಗರವಾಸಿಗಳಿಗೆ ಜಾಗೃತಿ ಮೂಡಿಸಬೇಕು. ಪೌರಕಾರ್ಮಿಕರು ಹೆಚ್ಚು ಜವಾಬ್ದಾರಿಯುತವಾಗಿ ಸ್ವಚ್ಛತಾ ಕಾರ್ಯ ನಿರ್ವಹಿಸಬೇಕು. ಮೈಸೂರು ಮಹಾನಗರ ಪಾಲಿಕೆ ಪೌರಕಾರ್ಮಿಕರಿಗೆ ಸಹಕರಿಸುತ್ತಿದೆ. ಅದರಂತೆಯೇ ಸಾರ್ವಜನಿಕರು ಹಸಿ ಕಸ ಹಾಗೂ ಒಣ ಕಸವನ್ನು ಬೇರ್ಪಡಿಸಿ ನೀಡುವ ಮೂಲಕ ಸಹಕರಿಸಬೇಕು. ಸ್ವಚ್ಛತೆಯ ಕಾರ್ಯ ಮನೆಯಿಂದಲೇ ಆರಂಭಿಸಬೇಕು. ಪೌರಕಾರ್ಮಿಕರಿಗೆ ನಮ್ಮಂತೆ ಕುಟುಂಬ, ಮಕ್ಕಳು ಇದ್ದಾರೆ. ನಗರವನ್ನು ಸ್ವಚ್ಛವಾಗಿಡುವ ಪೌರಕಾರ್ಮಿಕರ ಶ್ರಮಕ್ಕೆ ಧನ್ಯವಾದಗಳು. ಸಾರ್ವಜನಿಕರು ಸ್ವಚ್ಛ ಹಾಗೂ ಸುಂದರ ಮೈಸೂರಿನ ನಿರ್ಮಾಣಕ್ಕೆ ಕೈಜೋಡಿಸಬೇಕು. ಕಸ ವಿಲೇವಾರಿ ಬಗ್ಗೆ ಅಕ್ಕಪಕ್ಕದ ಮನೆಯವರಿಗೆ ಮಾಹಿತಿ ನೀಡಬೇಕು.

–ಗೋವಿತ್ ಕಿರಣ್, ರಾಜೇಂದ್ರನಗರ, ಮೈಸೂರು.

ಶ್ರೀರಾಂಪುರದ ಪ್ರೀತಿ ಲೇಔಟ್‌ನಲ್ಲಿ ಬೀದಿ ದೀಪ ಅಳವಡಿಸಿ

ಮಾನ್ಯರೆ,

ಮೈಸೂರಿನ ಶ್ರೀರಾಂಪುರ ಪಟ್ಟಣ ಪಂಚಾಯಿತಿಗೆ ಸೇರಿದ ಪ್ರೀತಿ ಲೇಔಟ್ ಸರ್ಕಲ್‌ನಿಂದ ಲಿಂಗಾಂಬುದಿ ಪಾಳ್ಯದ ಕೆರೆ ರಸ್ತೆ ಹಾದು ಹೋಗುವ ಜಾಗದಲ್ಲಿ ದೀಪಗಳು ಕೆಟ್ಟು ಹೋಗಿ ವರ್ಷವೇ ಆಗಿದೆ. ಶ್ರೀರಾಂಪುರದಿಂದ ಪ್ರೀತಿ ಲೇಔಟ್ ಮಾರ್ಗವಾಗಿ ರಾತ್ರಿ ಮಕ್ಕಳು, ಕಾರ್ಮಿಕರು, ಅಧಿಕಾರಿಗಳು ಈ ರಸ್ತೆಯಲ್ಲಿ ಓಡಾಡುತ್ತಾರೆ. ಈ ರಸ್ತೆಯು ಲಿಂಗಾಂಬುದಿ ಪಾಳ್ಯ, ಕಾರ್ಯ ಲೇಔಟ್ ಮತ್ತು ಆರ್‌ಟಿ ನಗರಕ್ಕೆ ಸಂಪರ್ಕಿಸುವ ರಸ್ತೆಯಾಗಿದೆ. ರಾತ್ರಿ ಪಾಠ ಮುಗಿಸಿಕೊಂಡು ಬರುವ ವಿದ್ಯಾರ್ಥಿಗಳು ಮತ್ತು ಕಾರ್ಮಿಕರಿಗೆ ಚಿರತೆ ಮತ್ತು ಇತರ ಪ್ರಾಣಿಗಳು ಓಡಾಡುವುದರಿಂದ ಅಪಾಯ ಸಂಭವಿಸುವುದುಂಟು. ಇದರ ಬಗ್ಗೆ ಶ್ರೀರಾಂಪುರ ಪಟ್ಟಣ ಪಂಚಾಯಿತಿಗೆ ತಿಳಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಗಮನಹರಿಸಿ ಕೂಡಲೇ ಬೀದಿ ದೀಪಗಳನ್ನು ಅಳವಡಿಸುವಂತೆ ಮನವಿ.

– ಉದಯ್, ಅಧ್ಯಕ್ಷರು, ಕಾರ್ಲೆ ಹೆಬಿಟೇಟ್ ಸಂಘ, ಲಿಂಗಾಂಬುದಿ ಪಾಳ್ಯ ಮೈಸೂರು.


ಸಾಮಾಜಿಕ ಬಹಿಷ್ಕಾರಕ್ಕೆ ಜೈಲು ಶಿಕ್ಷೆ ಸ್ವಾಗತಾರ್ಹ

ಮಾನ್ಯರೇ


ಬಹಿಷ್ಕಾರ ಅನ್ನೋದು ಒಂದು ಸಾಮಾಜಿಕ ಪಿಡುಗು. ಇದು ಎಲ್ಲಾ ಕಡೆ ತಾಂಡವಾಡುತ್ತಿದೆ. ಸಮುದಾಯದ ಬಹಿಷ್ಕಾರ, ಕುಟುಂಬದ ಬಹಿಷ್ಕಾರ, ಊರಿನ ಬಹಿಷ್ಕಾರ, ವ್ಯಕ್ತಿಗತ ಬಹಿಷ್ಕಾರ, ನೀರು ಮುಟ್ಟಿದ್ದಕ್ಕೆ, ದೇವಸ್ಥಾನ ಪ್ರವೇಶಿಸಿದ್ದಕ್ಕೆ, ಎದುರು ಮಾತನಾಡಿದ್ದಕ್ಕೆ, ಪ್ರಶ್ನೆ ಮಾಡಿದ್ದಕ್ಕೆ ಇಂಥ ನಿಷೇಧಗಳು ಹಿಂದಿನ ಕಾಲದಿಂದಲೂ ಇವತ್ತಿನವರೆಗೂ ನಡೆಯುತ್ತಾ ಬಂದಿದೆ. ಒಮ್ಮೆ ಮಹಾತ್ಮ ಗಾಂಧೀಜಿಗೂ ಕೂಡ ದಕ್ಷಿಣ ಆಫ್ರಿಕಾದಲ್ಲಿ ಇಂತಹ ಘಟನೆ ನಡೆದಿದೆ. ಈಗಲೂ ಕೂಡ ಕೆಲವು ಹಳ್ಳಿ, ನಗರ ಪ್ರದೇಶಗಳಲ್ಲೂ ನಡೆಯುತ್ತಿರುವುದನ್ನು ಆಗಾಗ ನೋಡಿದ್ದೇವೆ. ಕೆಲವು ಊರುಕೇರಿಗಳಲ್ಲಿ ಸ್ವಯಂಘೋಷಿತ ಮುಖಂಡರು ಎಂದು ಹೇಳಿಕೊಳ್ಳುವರು ತಮ್ಮ ನ್ಯೂನತೆಯ ಪ್ರಶ್ನೆ ಮಾಡುವ ಜನರನ್ನೂ ಬಹಿಷ್ಕಾರ ಹಾಕುವ ಪರಿಪಾಠಗಳು ಅಲ್ಲಲ್ಲಿ ನಡೆಯುತ್ತವೆ. ಇಂಥವರಿಗೆಲ್ಲಾ ಅಂಕುಶವಾಗಿ ರಾಜ್ಯ ಸರ್ಕಾರ ಬಹಿಷ್ಕಾರ ಹಾಕಿದವರಿಗೆ ಜೈಲು ಶಿಕ್ಷೆ, ಲಕ್ಷ ರೂ. ದಂಡವನ್ನು ವಿಧಿಸುವ ಮಸೂದೆಗೆ ವಿಧಾನ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿರುವುದು ಸ್ವಾಗತಾರ್ಹ.

–ಪಿ.ಸಿ.ಕಂಗಾಣಿಸೋಮ, ಕ್ಯಾತಮಾರನಹಳ್ಳಿ, ಮೈಸೂರು

'ಸ್ತುತಿಶಂಕರ' ಸ್ತೋತ್ರ ಸಮರ್ಪಣೆ



ಶ್ರೀ ಶ್ರೀ ಶ್ರೀ ಭಾರತೀತೀರ್ಥ ಶ್ರೀ ಪಾದಂಗಳವರು.



ಸ್ತುತಿ ಶಂಕರ ಮಹಾ ಸ್ತೋತ್ರ ಸಮರ್ಪಣೆಗಾಗಿ ಅರಮನೆ ಆವರಣದಲ್ಲಿ ವ್ಯವಸ್ಥೆ ಮಾಡಿರುವ ಭವ್ಯ ವೇದಿಕೆ

**ಸದಾಶಿವಸಮಾರಂಭಾಂ ಶಂಕರಾಚಾರ್ಯಮಧ್ಯಮಾಮ್ ।
ಅಸ್ಮದಾಚಾರ್ಯಪರ್ಯಂತಾಂ ವಂದೇ ಗುರುಪರಂಪರಾಮ್ ॥
ಶ್ರುತಿಸ್ಮೃತಿಪುರಾಣಾನಾಮಾಲಯಂ ಕರುಣಾಲಯಮ್ ।
ನಮಾಮಿ ಭಗವತ್ಪಾದಶಂಕರಂ ಲೋಕಶಂಕರಮ್ ॥**

ಹಿನ್ನೆಲೆ:

ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧ್ಯಕ್ಷರಾಗಿರುವ ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರು ಶ್ರೇಷ್ಠವಾದ ತುರೀಯಾಶ್ರಮ (ಸಂನ್ಯಾಸ)ದಲ್ಲಿ 50 ಸಂವತ್ಸರಗಳನ್ನು ವಿಧಿವತ್ತಾಗಿ ಸಂಪನ್ನಗೊಳಿಸಿ ನಮ್ಮನ್ನೆಲ್ಲ ಅನುಗ್ರಹಿಸುತ್ತಿರುವ ಹಿನ್ನೆಲೆಯಲ್ಲಿ ಭಕ್ತರಾದ ನಾವು ನಮ್ಮ ಭಕ್ತಿಯನ್ನು ಪ್ರಕಟಿಸಲು ಉತ್ಸುಕರಾಗಿದ್ದೇವೆ. ಅದಕ್ಕೆ ಮಾರ್ಗ ಯಾವುದು ಎಂಬ ಜಿಜ್ಞಾಸೆಯಿಂದ ಶ್ರೀಶ್ರೀ ಸನ್ನಿಧಾನಂಗಳವರಲ್ಲಿ ವಿಜ್ಞಾಪಿಸಿದಾಗ ಭಗವತ್ಪಾದ ಶಂಕರರ ಸ್ತೋತ್ರತ್ರಯವನ್ನು ಸಮಸ್ತ ಸಾಮಾಜಿಕರೂ ಪಾರಾಯಣ ಮಾಡಲಿ ಎಂದು ಆಜ್ಞಾಪಿಸಿದರು. **'ಕಲ್ಯಾಣವೃಷ್ಟಿಸ್ತವಃ, ಶಿವಪಂಚಾಕ್ಷರ ನಕ್ಷತ್ರಮಾಲಾ ಸ್ತೋತ್ರಮ್** ಹಾಗೂ **ಲಕ್ಷ್ಮೀನೃಸಿಂಹಕರುಣಾರಸ ಸ್ತೋತ್ರಮ್'** ಇವೇ ಆ ಮೂರು ಸ್ತೋತ್ರಗಳಾಗಿವೆ.

ಅವರ ನಿರ್ದೇಶನದಂತೆ ಕಳೆದ ಅನೇಕ ತಿಂಗಳುಗಳಿಂದ ಸಮಾಜದ ಎಲ್ಲ ವರ್ಗದ ಮಹಿಳೆಯರು, ಮಹನೀಯರು ಹಾಗೂ ವಿದ್ಯಾರ್ಥಿಗಳು ನಿಷ್ಠೆಯಿಂದ ಈ ಸ್ತೋತ್ರಗಳ ಪಾರಾಯಣ ಮಾಡುತ್ತಾ ಬಂದಿದ್ದಾರೆ. ಈ ಪಾರಾಯಣಗಳ 'ಸಮಷ್ಟಿಸಾರವೋ' ಎಂಬಂತೆ 'ಸ್ತುತಿಶಂಕರ' ಎಂಬ ಹೆಸರಿನಲ್ಲಿ **ಮೈಸೂರಿನ ರಾಜಮಾತೆಯವರ ಅಪೇಕ್ಷೆಯಂತೆ ಅರಮನೆಯ ಆವರಣದಲ್ಲಿ ಈ ಸಮಾರೋಹ ನಡೆಯಲಿದೆ.**

ಈ ಸಮಾರಂಭವು ಶೃಂಗೇರಿ ಮಹಾಸಂಸ್ಥಾನದ ಜಗದ್ಗುರು ಶಂಕರಾಚಾರ್ಯ **ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ** ಸಮ್ಮುಖದಲ್ಲಿ ಸಂಪನ್ನವಾಗಲಿದೆ. ಈ ಭಕ್ತಿಯಜ್ಞದಲ್ಲಿ ಪ್ರಾರಂಭದಿಂದಲೂ ವೇದಾಂತಭಾರತಿಯು ಸಕ್ರಿಯವಾಗಿ ಸಹಕರಿಸುತ್ತಿದೆ. ಈ ವೇದಾಂತ ಭಾರತಿಯ ಪೋಷಕರಾಗಿರುವ ಯಡತೊರೆ ಶ್ರೀಯೋಗಾನಂದೇಶ್ವರ ಸರಸ್ವತೀ ಮಠದ ಪೀಠಾಧಿಪತಿಗಳಾದ ಶ್ರೀ ಶ್ರೀ ಶಂಕರಭಾರತೀ ಮಹಾಸ್ವಾಮಿಗಳು ಹಾಗೂ ತತ್ಕರಕಮಲಸಂಜಾತರಾದ ಶ್ರೀಶ್ರೀ ಬ್ರಹ್ಮಾನಂದ ಭಾರತೀ ಸ್ವಾಮಿಗಳು ಉಪಸ್ಥಿತರಿರುವರು.

ಪರಿಣಾಮ–ಫಲ

ಇಂತಹ ಪಾರಾಯಣದ ಪರಿಣಾಮವೇನೆಂದರೆ, ಸಮಾಜದಲ್ಲಿ ಪ್ರಗತಿಶೀಲ ಪರಿವರ್ತನೆಯನ್ನು ನಾವು ಕಾಣಬಹುದಾಗಿದೆ. ಅಂತೆಯೇ ಭಾರತೀಯ ಸಂಸ್ಕೃತಿಯನ್ನು ಮಕ್ಕಳಿಗೂ ಪರಿಚಯಿಸುತ್ತಾ ಅದನ್ನು ಪೋಷಿಸಿದಂತಾಗುತ್ತದೆ. ಅದಲ್ಲದೇ ಈ ಸಮಾರೋಹದಲ್ಲಿ ಜಾತಿ, ಮತ, ಲಿಂಗ ಮುಂತಾದ ತಾರತಮ್ಯವಿಲ್ಲದೇ ಎಲ್ಲರೂ ಆನಂದಾನುಭೂತಿಗಾಗಿ ಒಕ್ಕೊರಲಿನಿಂದ ಒಮ್ಮನಸ್ಸಿನಿಂದ ಪ್ರಾರ್ಥನೆ ಸಲ್ಲಿಸುವುದರ ಮೂಲಕ ಭಾವೈಕ್ಯತೆಯು ತಾನೇ ತಾನಾಗಿ ಸ್ಥಾಪಿತವಾಗಿ ಒಗ್ಗಟ್ಟಿನ ಸಮಾಜ ನಿರ್ಮಾಣವಾಗುತ್ತದೆ. ಇದರಿಂದ ಈ ಲೋಕದಲ್ಲಿನ ಆನಂದ ನಮ್ಮದಾಗುವುದಲ್ಲದೇ ಪಾರಲೌಕಿಕ ಸಿದ್ಧಿಗೂ ಮಾರ್ಗವಾಗುತ್ತದೆ.

ಕಲ್ಯಾಣವೃಷ್ಟಿಸ್ತವಃ

ಈ ಸ್ತೋತ್ರದಲ್ಲಿ ಭಗವತ್ಪಾದರು ಪ್ರಕೃತಿಮಾತೆಯನ್ನು ಶಾಸ್ತ್ರೀಯ ರೀತಿಯಲ್ಲಿ ಸ್ತುತಿಸಿದ್ದಾರೆ.

ಮೊದಲನೆಯ ಶ್ಲೋಕದಲ್ಲಿ 'ಕಲ್ಯಾಣವೃಷ್ಟಿಭಿಃ' ಎಂಬುದಾಗಿ ಪ್ರಾರಂಭಿಸಿ ನಿನ್ನ ಸೇವೆಯಲ್ಲಿ ತೊಡಗಿದ ಭಾಗ್ಯವಂತರಿಗೆ ನೀನು ಏನನ್ನು ತಾನೆ ಕರುಣಿಸಿಲ್ಲ ಎಂದು ಪ್ರಶ್ನಿಸುವ ಮೂಲಕ ಸರ್ವಮಂಗಳ ಮೂರ್ತಿಯೆಂದು ಸಾರುತ್ತಾರೆ. ಹಾಗೆಯೇ ಮುಂದೆ– ತಾಯಿಯೇ! ನಿನಗೆ ನಮಿಸುವಾಗ ಭಕ್ತಿ ಪರವಶತೆಯಿಂದ ಕಣ್ಣುತುಂಬಿ ಹೋಗುವುದೆಂದು ಸ್ತುತಿಸುತ್ತಾರೆ. ನಿನಗೆ ನಮಸ್ಕರಿಸುವವನು ಶಾಶ್ವತ ಈಶ್ವರಸಿದ್ಧಿಯನ್ನು ಪಡೆಯುತ್ತಾನೆ. ಮನ್ಮಥನಂತಹ ಸೌಂದರ್ಯ ಹೊಂದುತ್ತಾನೆ. ಶ್ರೀಚಕ್ರದಲ್ಲಿ ವಾಸವಾಗಿರುವ ತಾಯಿಯೇ ನೀನು ಹ್ರೀಂಕಾರವಾಚ್ಯಳು. ಶಿವನು ವಿಷವನ್ನು ಕುಡಿದರೂ ಅವನಿಗೆ ಯಾವ ಬಾಧೆಯೂ ಆಗಿಲ್ಲ. ಕಾರಣವೇನೆಂದರೆ ನೀನು ಅವನ ಅರ್ಧಾಂಗಿ.

ದೇವಿ! ನಿನ್ನ ಪಾದಗಳಿಗೆ ನಮಿಸಿದವರಿಗೆ ಉತ್ತಮ ಮಾತುಗಾರಿಕೆ, ಸರ್ವಜ್ಞತ್ವವನ್ನು ನೀನು ಕರುಣಿಸುತ್ತೀಯೆ. ತಾಯಿಯೇ ನಿನ್ನ ದೃಷ್ಟಿಯೇ ಕಲ್ಪವೃಕ್ಷ ಅಂತಹ ಕರುಣಾದೃಷ್ಟಿಯನ್ನು ಒಮ್ಮೆ ಬೀರು. ಅದರಿಂದ ನನ್ನಂತಹವರು ಬೇರೆ ಯಾರೂ ಇರಲು ಸಾಧ್ಯವಿಲ್ಲ. ಹ್ರೀಂ ಎಂಬುದು ನಿನ್ನ ಬೀಜಾಕ್ಷರ. ಅದೇ ನಿನ್ನ ಸ್ವರೂಪ. ಅದನ್ನು ಪ್ರತಿದಿನ ಪಠಿಸುವವನಿಗೆ ಎಲ್ಲವೂ ಲಭ್ಯವಾಗುವುದು.

ಕಲ್ಪಾಂತದಲ್ಲಿ ಶಿವನು ಉಗ್ರರೂಪದ ತಾಂಡವ ನೃತ್ಯವನ್ನು ಮಾಡುವಾಗ ತಾಯಿ! ನೀನೊಬ್ಬಳೇ ಅದಕ್ಕೆ ಸಾಕ್ಷಿಯಾಗಿರುವೆ. ದೇವಿಯೇ ! ನಿನ್ನ ತೇಜಸ್ಸಿನಿಂದಲೇ ಈ ಆಕಾಶಾದಿ ಪಂಚಭೂತಗಳು ಪರಿಣಾಮ ಹೊಂದಿವೆ. ಹೀಗೆ ದೇವಿಯನ್ನು ಸ್ತುತಿಸುತ್ತಾ ಇದನ್ನು ಪ್ರತಿದಿನ ಪಠಿಸುತ್ತಾ ಬಂದರೆ ರಾಜಮಹಾರಾಜರಿಗೂ ಸಹ ಎಲ್ಲ ವಿಧವಾದ ಆಯುರಾರೋಗ್ಯಾದಿಗಳನ್ನು ಆ ದೇವಿ ಕರುಣಿಸುತ್ತಾಳೆ ಎಂಬುದಾಗಿ ತಾಯಿಯನ್ನು ಸ್ತುತಿಸಿದ್ದಾರೆ.

ವಿದ್ವಾನ್ ಶ್ರೀಪಾದ ಭಟ್ಟ
ನಿವೃತ್ತ ಮುಖ್ಯ ಅಧ್ಯಾಪಕರು, ಮೈಸೂರು

ಶಿವಪಂಚಾಕ್ಷರನಕ್ಷತ್ರಮಾಲಾ ಸ್ತೋತ್ರ

ಇದು ಪುರುಷನ (ಪರಮಾತ್ಮನ) ಸ್ತುತಿ. ಈ ಸ್ತೋತ್ರದಲ್ಲಿ ಶ್ರೀ ಶಂಕರಭಗವತ್ಪಾದರು ಪ್ರತಿಸಾಲಿನಲ್ಲಿಯೂ 'ನಮಃ ಶಿವಾಯ' ಎಂಬ ಪಂಚಾಕ್ಷರೀ ಮಂತ್ರವನ್ನು ಸೇರಿಸಿ ನಕ್ಷತ್ರಗಳ ಸಂಖ್ಯೆಗನುಸಾರವಾಗಿ 27 ಶ್ಲೋಕಗಳನ್ನು ರಚಿಸಿದ್ದಾರೆ. ಕೊನೆಯಲ್ಲಿ ಇದು ಒಂದು ಮಾಲಿಕೆ ಎಂಬುದಾಗಿ ವರ್ಣಿಸಿದ್ದಾರೆ.

ಇಲ್ಲಿ ಸಾಮಾನ್ಯವಾಗಿ ನೋಡಿದರೆ ಸರಳವಾಗಿರುವಂತೆ ತೋರುತ್ತದೆಯಾದರೂ ಅಲ್ಲಿನ ಒಂದೊಂದು ಪದವೂ ಪುರಾಣಘಟನೆಯನ್ನು ಆಧರಿಸಿರುತ್ತದೆ. ಇದು ಪರಮಾತ್ಮ ಚೈತನ್ಯದ ಸ್ತುತಿಯಾಗಿದೆ. ಶ್ರೀಮದಾತ್ಮನೇ ಗುಣೈಕಸಿಂಧವೇ ನಮಃ ಶಿವಾಯ ಎಂಬುದಾಗಿ ಪ್ರಾರಂಭವಾಗುತ್ತದೆ. ಇಲ್ಲಿ ಒಟ್ಟಾರೆ 108 ಸಂಖ್ಯೆಯಲ್ಲಿ ಪಂಚಾಕ್ಷರೀ ಮಂತ್ರ ಜಪವಾಗುತ್ತದೆ.

ಯಮನಿಂದ ಭೀತನಾದ ಮಾರ್ಕಂಡೇಯನನ್ನು ರಕ್ಷಿಸಿದವನು, ದಕ್ಷನನ್ನು ಸಂಹಾರ ಮಾಡಿದವನು ಜಗತ್ತಿಗೆ ಮೂಲ ಕಾರಣನು. ಸಂರಕ್ಷಕನು, ಹಾಗೆಯೇ ಸಂಹಾರಕನು. ಇತ್ಯಾದಿಯಾಗಿ ಶಿವನ ಮಹಿಮೆಯನ್ನು ಪುರಾಣಾದಿ ಶಾಸ್ತ್ರಗ್ರಂಥಗಳಿಗೆ ಅನುಸಾರವಾಗಿ ಸಾರುತ್ತಾ ಶಿವನನ್ನು ಸ್ತುತಿಸಲಾಗಿದೆ. ಶಿವನು ಭುಕ್ತಿ(ಈ ಲೋಕದ ಬದುಕು) ಹಾಗೂ ಮುಕ್ತಿ (ಸದ್ಗತಿ) ಎರಡನ್ನೂ ಕರುಣಿಸುವವನು. ಅಂತಕ(ಯಮ)ನಿಗೂ ಅಂತಕ. ನಿರಂತರ ತನ್ನನ್ನೇ ಧ್ಯಾನಿಸುವವರ ದುಃಖವನ್ನು ದೂರ ಮಾಡುವವ ಇತ್ಯಾದಿಯಾಗಿ ಶಿವನ ಮಹಿಮೆಯನ್ನು ಹೇಳುತ್ತಾ ಸ್ತುತಿಸಲಾಗಿದೆ.

ಕೊನೆಯಲ್ಲಿ ಶ್ರೀ ಶಂಕರಾಚಾರ್ಯರು ಈ ಇಪ್ಪತ್ತೇಳು ಶ್ಲೋಕಗಳಿಂದ ಕೂಡಿರುವ ಈ ಸ್ತುತಿಯನ್ನು 27 ನಕ್ಷತ್ರಗಳ ಮಾಲೆಯೆಂದು ತಿಳಿಸುತ್ತಾ ಯಾವನು ಈ ಮಾಲಿಕೆಯನ್ನು ಕಂಠದಲ್ಲಿ ಸದಾ ಧರಿಸುವನೋ (ಕಂಠಸ್ಥ ಮಾಡುವನೋ) ಅವನು ನಕ್ಷತ್ರಗಳ ಸಮೂಹದಿಂದ ಸುತ್ತುವರಿಯಲ್ಪಟ್ಟ ಸೋಮ (ಚಂದ್ರ) ಆಗುವನೆಂದು ಉಪದೇಶಿಸಿದ್ದಾರೆ.

ಲಕ್ಷ್ಮೀನೃಸಿಂಹ ಕರುಣಾರಸಸ್ತೋತ್ರ

ಈ ಸ್ತೋತ್ರ ರಚನೆಗೆ ಮೂಲ ಸ್ಫೂರ್ತಿ ಭಗವತ್ಪಾದರಿಗೆ ಲಭ್ಯವಾದದ್ದು ಭಾಗವತ ಪುರಾಣ ದಿಂದ ಎಂದು ತಿಳಿದವರು ಹೇಳುತ್ತಾರೆ. ಅಲ್ಲಿ ಭಕ್ತ ಶ್ರೇಷ್ಠನಾದ ಪ್ರಹ್ಲಾದನು ಶ್ರೀಹರಿಯಲ್ಲಿ ಮೊರೆ ಯಿಡುವ ಸನ್ನಿವೇಶದಲ್ಲಿ ಸ್ತುತಿಸಿದ್ದಾನೆ. ಅದೇ ರೀತಿ ಭಗವತ್ಪಾದ ಶಂಕರರು ಈ ಸ್ತೋತ್ರದಲ್ಲಿ ಸಂಸಾರವೆಂಬುದು ಎಷ್ಟು ಭಯಂಕರ ಎಂದು ವಿವರಿಸುತ್ತಾ ಹೇ ಮಹಾವಿಷ್ಣುವಿನ ಅವತಾರಿ ಯಾದ ನೃಸಿಂಹನೇ! ನನ್ನನ್ನು ಕೈ ಹಿಡಿದು ಮೇಲಕ್ಕೆತ್ತಿ ಈ ಸಂಸಾರ ಬಂಧನದಿಂದ ವಿಮುಕ್ತಿಗೊಳಿಸಿಕೊಡು ಎಂಬುದಾಗಿ ಪರಿಪರಿಯಲ್ಲಿ ಪ್ರಾರ್ಥಿಸಿದ್ದಾರೆ.

ರತ್ನಾಕರ(ಸಮುದ್ರ)ದಲ್ಲಿ ನೆಲೆಸಿರುವ ಮಹಾವಿಷ್ಣುವೇ ನನ್ನ ಕೈಹಿಡಿದು ಮೇಲೆತ್ತು ಎಂಬುದಾಗಿ ಪ್ರಾರಂಭಿಸುತ್ತಾರೆ. ದೇವಾನುದೇವತೆ ಗಳೆಲ್ಲಾ ನೃಸಿಂಹನಿಗೆ ನಮಸ್ಕರಿಸಲು ಬಂದಾಗ ಆ ದೇವನ ಕಾಂತಿ ಅಧಿಕವಾಗುವುದೆನ್ನುತ್ತಾ ದೇವಾದಿದೇವತೆಗಳೆಲ್ಲಾ ಅವನಿಗೆ ನಮಸ್ಕರಿಸುತ್ತಾರೆಂದು ತಿಳಿಸಿದ್ದಾರೆ. ಈ ಸಂಸಾರವನ್ನು ಕಾಡ್ಗಿಚ್ಚು, ಬಲೆ, ಆಳವಾದ ಬಾವಿ, ಮದ್ದಾನೆಯ ಸೊಂಡಿಲಿನ ಆಘಾತ, ಕ್ರೂರ ಸರ್ಪಗಳ ಆವಾಸಸ್ಥಾನ, ಪಾಪವೆಂಬ ಬೀಜದಿಂದ ಬೆಳೆದ ಮರ, ಕಾಲವೆಂಬ ಮೊಸಳೆ ಇತ್ಯಾದಿಯಾಗಿ ಸಂಸಾರದ ಭಯಂಕರತೆಯನ್ನು ವರ್ಣಿಸುತ್ತಾ ಸಂಸಾರ ಸಾಗರದಲ್ಲಿ ವಿವಿಧ ರೀತಿಯಲ್ಲಿ ಚಿತ್ರವಿಚಿತ್ರ ಹಿಂಸೆಯನ್ನು ಅನುಭವಿಸುತ್ತಿರುವ ನನ್ನನ್ನು ಕರುಣಾಸಾಗರನಾಗಿರುವ ನೀನೇ ಕಾಪಾಡಬೇಕೆಂದು ಪ್ರಾರ್ಥಿಸುತ್ತಾರೆ.

ಬದುಕಿನಲ್ಲಿಯೇ ಅತ್ಯಂತ ಭಯಾನಕವಾದ ಮರಣಕಾಲದಲ್ಲಿ ಯಮಭಟರು ಹೆದರಿಸುತ್ತಿರುವ ಕಾಲದಲ್ಲಿ ಬೇರೆ ಯಾರೂ ಸಹಾಯಕರಿರಲು ಸಾಧ್ಯವಿಲ್ಲ. ಆ ಸಮಯದಲ್ಲಿ ನೀನೇ ಕರಪಿಡಿದು ನನ್ನನ್ನು ಉದ್ಧರಿಸಬೇಕು. ಪ್ರಹ್ಲಾದನೇ ಮೊದಲಾದ ಭಕ್ತರನ್ನು ನೀನು ರಕ್ಷಿಸಿದ್ದೀಯೆ. ಕೊನೆಯಲ್ಲಿ ಹರಿ ಭಕ್ತರಿಗೆ ನರಹರಿಯ ಪಾದಸಾಯುಜ್ಯ ಲಭಿಸುವು ದೆಂದು ಸ್ತುತಿಸಿದ್ದಾರೆ.

ಇಂತಹ ಪುಣ್ಯಪ್ರದವಾದ ಭಕ್ತಿಯಜ್ಞದಲ್ಲಿ ನಾವೆಲ್ಲರೂ ಶ್ರದ್ಧೆಯಿಂದ ಭಾಗಿಗಳಾಗೋಣ ಎಂಬ ವಿನಮ್ರವಾದ ಪ್ರಾರ್ಥನೆಯೊಂದಿಗೆ 'ಶುಭಂ' ಎಂಬ ಪದದೊಂದಿಗೆ ವಿರಮಿಸುತ್ತೇನೆ.

ಲೋಕಕಲ್ಯಾಣಾರ್ಥ ಆದಿಶಂಕರರ ರಚನೆಯ ಮಹಾಸ್ತೋತ್ರ

> "ಮೈಸೂರು ಸಂಸ್ಥಾನದ ವಿಶ್ವವಿಖ್ಯಾತ ಅರಮನೆ ಆವರಣದಲ್ಲಿ ಪ್ರಪ್ರಥಮವಾಗಿ ಆಯೋಜಿಸಿರುವ ಅತ್ಯಂತ ಪವಿತ್ರವಾದ ಈ ಮಹಾಸಮರ್ಪಣಾ ಅಭಿಯಾನದಲ್ಲಿ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠದ ಮೂವತ್ತೇಳನೇ ಜಗದ್ಗುರುಗಳಾದ ಶ್ರೀ ಶ್ರೀ ವಿಧುಶೇಖರಭಾರತೀ ಸ್ವಾಮಿಗಳವರು ದಿವ್ಯ ಸಾನ್ನಿಧ್ಯವನ್ನು ವಹಿಸಿ ಅನುಗ್ರಹಿಸಲಿದ್ದು ಯಡತೊರೆ ಶ್ರೀ ಯೋಗನಂದೇಶ್ವರ ಸರಸ್ವತೀ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಶ್ರೀ ಶಂಕರಭಾರತೀ ಮಹಾಸ್ವಾಮಿಗಳವರು ಹಾಗೂ ತತ್ಕರಕಮಲಸಂಜಾತರಾದ ಪೂಜ್ಯ ಶ್ರೀ ಶ್ರೀ ಬ್ರಹ್ಮಾನಂದ ಭಾರತೀ ಸ್ವಾಮಿಗಳವರು ಮಹಾಸಮರ್ಪಣೆಯಲ್ಲಿ ದಿವ್ಯ ಉಪಸ್ಥಿತಿ ವಹಿಸಿ ಆಸ್ತಿಕರನ್ನು ಆಶೀರ್ವದಿಸಲಿರುವುದು ಮೈಸೂರು ಮಹಾಜನತೆಗೆ ಸಂತಸ ತಂದಿದೆ.



ಪರಶಿವಾವತಾರರಾದ ಜಗದ್ಗುರು ಶ್ರೀಶಂಕರ ಭಗವತ್ಪಾದಾಚಾರ್ಯರು ಹನ್ನೆರಡು ಶತಮಾನಗಳ ಹಿಂದೆ ನಮ್ಮ ಪವಿತ್ರ ಭರತಭೂಮಿಯಲ್ಲಿ ಅವತರಿಸಿ ಸನಾತನ ವೈದಿಕಧರ್ಮ ಮತ್ತು ಉಪನಿಷತ್ಪ್ರತಿಪಾದ್ಯವಾದ ಅದ್ವೈತ ಸಿದ್ಧಾಂತವನ್ನು ಉದ್ಧರಿಸಿ ಅವುಗಳ ನಿರಂತರ ಪ್ರಸಾರಕ್ಕಾಗಿ ಭಾರತದ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಆಮ್ನಾಯಪೀಠಗಳನ್ನು ಸ್ಥಾಪಿಸಿದರೆಂಬ ವಿಷಯವು ಜಗದ್ವಿದಿತ. ಈ ಚತುರಾಮ್ನಾಯ ಪೀಠಗಳಲ್ಲಿ ದಕ್ಷಿಣಾಮ್ನಾಯ ಶೃಂಗೇರಿ ಪೀಠವು ಇಂದಿಗೂ ಅವಿಚ್ಛಿನ್ನ ಗುರುಪರಂಪರೆಯಿಂದ ವಿಜೃಂಭಿಸುತ್ತಿದೆ. ಪ್ರಸ್ತುತ ಈ ಪೀಠದ ಮೂವತ್ತಾರನೇ ಪೀಠಾಧಿಪತಿಗಳಾದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರು ಸಂನ್ಯಾಸ ಸ್ವೀಕಾರ ಮಾಡಿ ಐವತ್ತು ವಸಂತಗಳನ್ನು ಪೂರೈಸಿರುವುದು ಭಕ್ತ ಮಹಾಶಯರಿಗೆ ಸಂತಸದ ವಿಷಯವಾಗಿದೆ.

ಪ್ರಸ್ತುತ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿದಾನಂಗಳವರ ಸಂನ್ಯಾಸ ಸ್ವೀಕರಿಸಿದ ಐವತ್ತನೇ ವರ್ಷದ ಅಂಗವಾಗಿ ಸ್ವರ್ಣಮಹೋತ್ಸವವನ್ನು 'ಸುವರ್ಣಭಾರತೀ' ಎಂಬುದಾಗಿ ವರ್ಷಪೂರ್ತಿ ಧಾರ್ಮಿಕ, ಸಾಮಾಜಿಕವಾಗಿ ಹಲವಾರು ರೀತಿಯ ಕಾರ್ಯಕ್ರಮಗಳನ್ನು ಆಚರಿಸಬೇಕೆಂದು ತತ್ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಸನ್ನಿದಾನಂಗಳವರು ಸಂಕಲ್ಪಿಸಿರುತ್ತಾರೆ. ತದನುಸಾರವಾಗಿ ಲೋಕಕಲ್ಯಾಣಾರ್ಥವಾಗಿ ಪಂಚಾಯತನ ದೇವತಾರಾಧನೆ ಮೊದಲಾದ ಅನೇಕ ಧಾರ್ಮಿಕ ಕಾರ್ಯಕ್ರಮಗಳು ಎಲ್ಲೆಡೆ ನಡೆಯುತ್ತಲಿದ್ದು ಅವುಗಳಲ್ಲಿ ಶ್ರೀ ಶಂಕರರು ರಚಿಸಿದ ಸ್ತೋತ್ರ ಸಮರ್ಪಣೆಯೂ ಒಂದಾಗಿದೆ.

ಶೃಂಗೇರಿ ಶ್ರೀಶಾರದಾಪೀಠದ ಅವಿಚ್ಛಿನ್ನ ಗುರುಪರಂಪರೆಯಲ್ಲಿನ ಯತಿಶ್ರೇಷ್ಠರ ಆಶೀರ್ವಾದದಿಂದ ದಕ್ಷಿಣಭಾರತದಲ್ಲಿ ಅದ್ವೈತ ಪರಂಪರೆಯ ಅನೇಕ ಶ್ರೀಮಠಗಳು ಸ್ಥಾಪಿತವಾಗಿದ್ದು ಅಂತಹ ಶ್ರೀಮಠಗಳಲ್ಲಿ ಪ್ರಮುಖವಾಗಿ ಸುಮಾರು ಎಂಟುನೂರು ವರ್ಷಗಳ ಹಿಂದೆ ಪರಮತಪಸ್ವಿಗಳೂ, ಯೋಗಿಗಳೂ ಆದ ಶ್ರೀ ಶ್ರೀ ಯೋಗನಂದೇಶ್ವರ ಸರಸ್ವತೀ ಸ್ವಾಮಿಗಳವರು ಮೈಸೂರು ಜಿಲ್ಲೆಯ ಕೃಷ್ಣರಾಜನಗರದಲ್ಲಿನ ಪವಿತ್ರ ಕಾವೇರಿ ನದಿ ತೀರದ ಯಡತೊರೆ ಎಂಬಲ್ಲಿ ಶ್ರೀಮಠವೊಂದನ್ನು ಸನಾತನ ವೈದಿಕ ಧರ್ಮಾನುಷ್ಠಾನವಾಗಿ ಸ್ಥಾಪಿಸಿದರು. ನಂತರ ಶ್ರೀಕ್ಷೇತ್ರವು ಶ್ರೀಜಪ್ಯೇಶ್ವರ ಕ್ಷೇತ್ರವಾಗಿ ಪ್ರಸಿದ್ಧಿಯಾಗಿ ಯಡತೊರೆ ಶ್ರೀ ಯೋಗನಂದೇಶ್ವರ ಮಠವೆಂದೇ ಇದುವರೆವಿಗೂ ಅನೇಕ ಯತಿವರೇಣ್ಯರು ಸನಾತನ ಧರ್ಮ ಅದ್ವೈತದ ಪೋಷಣೆಯನ್ನು ಮಾಡುತ್ತಿರುವುದು ಶ್ರೀಮಠದ ಭಕ್ತರಲ್ಲಿ ಭಕ್ತಿಭಾವವನ್ನು ಹೆಚ್ಚಿಸಿದೆ.

ಪ್ರಸ್ತುತ ಯಡತೊರೆ ಶ್ರೀ ಯೋಗನಂದೇಶ್ವರ ಸರಸ್ವತೀ ಶ್ರೀಮಠದ ಪೀಠಾಧಿಪತಿಳಾಗಿರುವ ಪರಮಪೂಜ್ಯ ಶ್ರೀ ಶ್ರೀ ಶಂಕರಭಾರತೀ ಮಹಾಸ್ವಾಮಿಗಳವರು ಶ್ರೀಮಠವನ್ನು ಅಭಿವೃದ್ಧಿಪಡಿಸಿ ಆಸ್ತಿಕರಿಗೆ ಮಾರ್ಗದರ್ಶನ ನೀಡುತ್ತಿರುತ್ತಾರೆ. ಶ್ರೀಶಂಕರತತ್ವಪ್ರಸಾರದ ಅಭಿಯಾನದಲ್ಲಿ ಸುವರ್ಣಭಾರತೀ ಮಹೋತ್ಸವದ ಅಂಗವಾಗಿ ಶೃಂಗೇರಿ ಶ್ರೀಶಾರದಾ ಪೀಠದ ಉಭಯ ಜಗದ್ಗುರುಗಳವರ ಅಪ್ಪಣೆ ಹಾಗೂ ಅನುಗ್ರಹದೊಂದಿಗೆ ವೇದಾಂತ ಭಾರತೀ ಧಾರ್ಮಿಕ ಸಂಸ್ಥೆಯು ಆದಿಗುರು ಶ್ರೀಶಂಕರಾಚಾರ್ಯರು ರಚಿಸಿರುವ ಅರವತ್ತಾರು ಸ್ತೋತ್ರಗಳಲ್ಲಿ ಆಯ್ದ ಮೂರು ಶ್ಲೋಕಗಳಾದ ಕಲ್ಯಾಣವೃಷ್ಟಿಸ್ತವಃ ಶಿವಪಂಚಾಕ್ಷರ ನಕ್ಷತ್ರಮಾಲಾ ಸ್ತೋತ್ರ ಮತ್ತು ಲಕ್ಷ್ಮಿನರಸಿಂಹಕರಾವಲಂಬಸ್ತೋತ್ರಗಳ ವಿಶೇಷಮಹಾಭಿಯಾನವನ್ನು ಲೋಕಕಲ್ಯಾಣಾರ್ಥವಾಗಿ ಹಾಗೂ ಪ್ರತಿಯೊಬ್ಬರಿಗೂ ಅತ್ಯಂತ ಪುಣ್ಯವನ್ನುಂಟು ಮಾಡಲೆಂದು ವೇದಾಂತಭಾರತೀ ಸಂಸ್ಥೆಯ ಆಶ್ರಯದಲ್ಲಿ ಶ್ರೀಮಠದ ಭಕ್ತರು ಸ್ತುತಿಶಂಕರ ಮಹಾಸಮರ್ಪಣೆಯನ್ನು ಮಾಡುತ್ತಿರುವುದು ಮಹಾಭಾಗ್ಯವೇ ಆಗಿದೆ.

ಜಗದ್ಗುರು ಆದಿಶಂಕರರು ರಚಿಸಿದ ಕಲ್ಯಾಣವೃಷ್ಟಿಸ್ತವಃ ಸ್ತೋತ್ರದಲ್ಲಿ ಪ್ರತೀಶ್ಲೋಕವೂ ಶ್ರೀವಿದ್ಯಾ ಪಂಚದಶಾಕ್ಷರೀ ಮಹಾಮಂತ್ರದ ಒಂದೊಂದು ಬೀಜಾಕ್ಷರದಿಂದ ಪ್ರಾರಂಭವಾಗುತ್ತದೆ. ಜಗನ್ಮಾತೆಯನ್ನು ಸ್ತುತಿಸುವ ಈ ಸ್ತೋತ್ರವು ಕಲ್ಯಾಣವೃಷ್ಟಿಯನ್ನು ಸುರಿಸಬಲ್ಲದು. ಹದಿನೈದು ಶ್ಲೋಕಗಳಿಂದ ಕೂಡಿರುವ ಈ ಸ್ತೋತ್ರವನ್ನು ಪಠಿಸುವುದರಿಂದ ಪಂಚದಶಿ ಮಹಾಮಂತ್ರವನ್ನು ಅನುಸಂಧಾನ ಮಾಡಿದ ಫಲವು ದೊರೆಯುತ್ತದೆಯೆಂದು ಪ್ರತೀತಿ. ಈ ಮಂತ್ರದ ಉಪದೇಶ ಪಡೆಯಲು ಮತ್ತು ಅನುಸಂಧಾನ ಮಾಡಲು ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಈ ಮಂತ್ರವನ್ನು ಜನಸಾಮಾನ್ಯನೂ ಅನುಸಂಧಾನ ಮಾಡಲೆಂದು ಈ ಬೀಜಾಕ್ಷರಗಳನ್ನು ಒಳಗೊಂಡಂತೆ ಕಲ್ಯಾಣ ವೃಷ್ಟಿಸ್ತವಃ ಎಂಬ ಸ್ತೋತ್ರವನ್ನು ಸರ್ವಜನರ ಹಿತದೃಷ್ಟಿಯಿಂದ ಆದಿಶಂಕರರು ರಚಿಸಿದರು. ಈ ಸ್ತೋತ್ರವನ್ನು ಪಠಿಸಲು ಯಾವುದೇ ಕಠಿಣನಿಯಮಗಳ ಪಾಲನೆಯ ಅಗತ್ಯವಿಲ್ಲ. ಹೆಸರೇ ಸೂಚಿಸುವಂತೆ ಲೋಕಕಲ್ಯಾಣಾರ್ಥವಾಗಿ ಶ್ರೀಶಂಕರರು ರಚಿಸಿರುವ ಮಹಾಸ್ತೋತ್ರವಿದು. ಇಲ್ಲಿ ಕಲ್ಯಾಣ ಶಬ್ದವು ಐಹಿಕ ಹಾಗೂ ಆಧ್ಯಾತ್ಮಿಕ ಸಮೃದ್ಧಿಯನ್ನು ಒಳಗೊಂಡಿದೆ ಎನ್ನಲಾಗಿದೆ. ಈ ಕಲ್ಯಾಣವೃಷ್ಟಿಸ್ತವಃ ಸ್ತೋತ್ರವು ಜಗತ್ತನ್ನು ಆವರಿಸಿರುವ ನಕಾರಾತ್ಮಕತೆಯನ್ನು ನಿಶ್ಚಯವಾಗಿ ತೊಳೆದುಹಾಕುವ ಮಹಾಶಕ್ತಿಯಾಗಿದೆ. ಇದನ್ನು ಶ್ರೀ ಸಾಮಾನ್ಯನು ಪಠಿಸುವುದರಿಂದ ಅವನಿಗರಿವಿಲ್ಲದಂತೆಯೇ 108ಬಾರಿ ಪಂಚಾಕ್ಷರಿ ಮಂತ್ರವನ್ನು ಅನುಸಂಧಾನ ಮಾಡಿದಂತಾಗುತ್ತದೆ.



ನಂ. ಶ್ರೀಕಂಠ ಕುಮಾರ್
ಮೊ: 9481067333

ಶಿವಪಂಚಾಕ್ಷರಿ ಪ್ರತೀ ಶ್ಲೋಕದ ನಾಲ್ಕು ಪಂಕ್ತಿಗಳಲ್ಲಿ ಶಿವಪಂಚಾಕ್ಷರಿ ಮಂತ್ರವನ್ನು ಹೊಂದಿದ್ದು ಶಿವಪಂಚಾಕ್ಷರ ನಕ್ಷತ್ರಮಾಲ ಸ್ತೋತ್ರದಲ್ಲಿ 108 ಬಾರಿ ಶಿವಪಂಚಾಕ್ಷರಿ ಮಂತ್ರವನ್ನು ಉಲ್ಲೇಖಿಸಿ ಸರಳ ಶಿವತತ್ವವನ್ನು ಆಚಾರ್ಯ ಭಗವತ್ಪಾದರು ಉಪದೇಶಿಸಿದ್ದಾರೆ. ಶ್ರೀಲಕ್ಷ್ಮೀನರಸಿಂಹಸ್ವಾಮಿಯನ್ನು ಸ್ತುತಿಸುವ ಕರಾವಲಂಬಸ್ತೋತ್ರದ ಪಠಣವು ಮನುಷ್ಯನನ್ನು ಸಂಸಾರ ದುಃಖದಿಂದ ದಾಟಿಸುತ್ತದೆ ಎಂಬುದಾಗಿದೆ. ಲಕ್ಷ್ಮೀನರಸಿಂಹ ಕರಾವಲಂಬನ ಸ್ತೋತ್ರದಲ್ಲಿ ಭಗವಾನ್ ಶಂಕರರು ಸಂಸಾರವನ್ನು ಅರಣ್ಯ, ಕೂಪ, ಸಾಗರ, ಎತ್ತರದವೃಕ್ಷ, ಕ್ರೂರಸರ್ಪ, ದಾವನಲ, ಜಾಲ, ಮದೋನ್ಮತ್ತವಾದ ಆನೆ ಈ ಎಂಟು ಅಪಾಯಕರ ವಸ್ತುಗಳಿಗೆ ಹೋಲಿಸಿ ಮನುಷ್ಯನನ್ನು ಸಂಸಾರದ ಆಪತ್ತಿನಿಂದ ಪಾರು ಮಾಡಲು ಶ್ರೀ ಲಕ್ಷ್ಮೀನರಸಿಂಹನನ್ನು ಪ್ರಾರ್ಥಿಸುತ್ತಾರೆ. ಜಗದ್ಗುರು ಶ್ರೀಶಂಕರಭಗವತ್ಪಾದರಿಂದ ರಚಿತವಾದ ಈ ಮೂರೂ ಸ್ತೋತ್ರಗಳು ಪ್ರತಿಯೊಬ್ಬರಿಗೂ ಅತ್ಯಂತ ಪುಣ್ಯವನ್ನುಂಟುಮಾಡಿ, ವಿಶೇಷ ಫಲಗಳನ್ನು ನೀಡುವ ಸಾಮರ್ಥ್ಯವುಳ್ಳದ್ದಾಗಿವೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಜಿಲ್ಲೆಯಲ್ಲಿ ಆರೋಗ್ಯ ಸಂಚಾರಿ ಕ್ಲಿನಿಕ್ ಯೋಜನೆ ಯಶಸ್ವಿ

ಕಾರ್ಮಿಕ ವಲಯದಲ್ಲಿ ಉತ್ತಮ ಪ್ರತಿಕ್ರಿಯೆ

ಮೈಸೂರು, ಡಿ.19– ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಆರೋಗ್ಯ ರಕ್ಷಣೆಗಾಗಿ ಕಾರ್ಮಿಕ ಇಲಾಖೆ ವತಿಯಿಂದ ಜಾರಿಗೊಳಿಸಿರುವ 'ಸಂಚಾರಿ ಹೈಟೆಕ್ ಆರೋಗ್ಯ ಕ್ಲಿನಿಕ್' ಯೋಜನೆಗೆ ಜಿಲ್ಲೆಯ ಕಾರ್ಮಿಕ ವಲಯದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಮೈಸೂರಿನಲ್ಲಿ 4 ಸಂಚಾರಿ ಹೈಟೆಕ್ ಆರೋಗ್ಯ ಕ್ಲಿನಿಕ್‌ಗಳಿದ್ದು, ಕಾರ್ಮಿಕರು ತಮ್ಮ ಆರೋಗ್ಯ ಸಮಸ್ಯೆಗಳಿಗೆ ಇಲ್ಲಿ ಚಿಕಿತ್ಸೆ ಪಡೆಯುವ ಮೂಲಕ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಇಲಾಖೆಯಿಂದ ಕಾರ್ಮಿಕರ ಕಾರ್ಡ್ ಪಡೆದಿರುವ ಜಿಲ್ಲೆಯ 1,48,536 ಕಾರ್ಮಿಕರು ಹಾಗೂ ಅವರ ಕುಟುಂಬದ ಸೇರಿ ಒಟ್ಟು 6 ಲಕ್ಷ ಜನ ಈ ಕ್ಲಿನಿಕ್‌ಗಳಿಂದ ಆರೋಗ್ಯ ಸೇವೆ ಪಡೆಯಬಹುದಾಗಿದೆ.

ರಾಜ್ಯ ಸರ್ಕಾರ 2022–23ನೇ ಸಾಲಿನಲ್ಲಿ ರಾಜ್ಯದ 31 ಜಿಲ್ಲೆಗಳಲ್ಲೂ ಒಟ್ಟು 100 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಆರಂಭಿಸುವುದಾಗಿ ಘೋಷಣೆ ಮಾಡಿತ್ತು. ಸದ್ಯ ಈ ಯೋಜನೆಯು ಜಿಲ್ಲೆಯಲ್ಲೂ ಅನುಷ್ಠಾನಗೊಂಡಿದ್ದು, 4 ಸಂಚಾರಿ ಹೈಟೆಕ್ ಕ್ಲಿನಿಕ್‌ಗಳು ಸೇವೆ ನೀಡುತ್ತಿವೆ. ಕಾರ್ಮಿಕ ಇಲಾಖೆಯಡಿ ಬರುವ ಕರ್ನಾಟಕ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಣಿಯಾಗಿರುವ ಕಾರ್ಮಿಕರು ಸೇವೆ ಪಡೆಯುತ್ತಿದ್ದಾರೆ.

ಸಾವಿರಾರು ಮಂದಿಗೆ ಸೇವೆ: ಕಳೆದ ನವೆಂಬರ್ ತಿಂಗಳಲ್ಲಿ 3,500ಕ್ಕೂ ಹೆಚ್ಚು ಫಲಾನುಭವಿಗಳು ಇದರ ಅನುಕೂಲ ಪಡೆದಿದ್ದು, ಕಾರ್ಮಿಕ ಇಲಾಖೆ ಮಾಹಿತಿ ಅನ್ವಯ ಪ್ರತಿ ತಿಂಗಳು ಸರಾಸರಿ ಸಾವಿರಕ್ಕೂ ಹೆಚ್ಚು ಫಲಾನುಭವಿಗಳಿಗೆ ಸೇವೆ ದೊರಕುತ್ತಿದೆ. ಮೈಸೂರು ನಗರ ಹಾಗೂ ತಾಲೂಕು ವ್ಯಾಪ್ತಿಗೆ 2, ತಿ.ನರಸೀಪುರ, ನಂಜನಗೂಡು, ಹೆಚ್.ಡಿ.ಕೋಟೆಗೆ ತಾಲೂಕುಗಳಿಗೆ 1, ಕೆ.ಆರ್.ನಗರ, ಹುಣಸೂರು ಹಾಗೂ ಪಿರಿಯಾಪಟ್ಟಣ ತಾಲೂಕಿಗೆ 1 ಸಂಚಾರಿ ಆರೋಗ್ಯ ಕ್ಲಿನಿಕ್ ವಾಹನಗಳು ಕಟ್ಟಡ ಕಾರ್ಮಿಕರಿಗೆ ಆರೋಗ್ಯ ಸೇವೆ ಒದಗಿಸುತ್ತಿವೆ.



ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಹಾಗೂ ಅವರ ಅವಲಂಭಿತರಿಗೆ ಆರೋಗ್ಯ ಸೇವೆ ನೀಡುತ್ತಿರುವ ಸಂಚಾರಿ ಆರೋಗ್ಯ ಕ್ಲಿನಿಕ್ ವಾಹನ.

ಮುಂಚಿತವಾಗಿ ಮಾಹಿತಿ: ಪ್ರತಿ ಸಂಚಾರಿ ಕ್ಲಿನಿಕ್‌ನಲ್ಲೂ ಒಬ್ಬರು ವೈದ್ಯಕೀಯ ಅಧಿಕಾರಿ, ಇಬ್ಬರು ಶುಶ್ರೂಷಕಿಯರು, ಓರ್ವ ಫಾರ್ಮಸಿಸ್ಟ್ ಕಮ್ ಸಹಾಯಕ, ಪ್ರಯೋಗಾಲಯ ತಜ್ಞ ಹಾಗೂ ಚಾಲಕ ಕಾರ್ಯ ನಿರ್ವಹಿಸುತ್ತಾರೆ. ಈ ಸುಸಜ್ಜಿತ ತಂಡ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನದವರೆಗೆ ಒಂದು ಕಡೆ, ಮಧ್ಯಾಹ್ನದ ನಂತರ ಮತ್ತೊಂದು ಭಾಗದಲ್ಲಿ ನಿಗದಿತ ಸ್ಥಳಗಳಲ್ಲಿ ಕನಿಷ್ಠ 4 ಗಂಟೆ ಕಾರ್ಯ ನಿರ್ವಹಿಸಲಿದೆ. ಈ ಕ್ಲಿನಿಕ್ ಸೇವೆ ಎಲ್ಲಿ, ಯಾವ ಸಮಯಕ್ಕೆ ದೊರಕಲಿದೆ ಎಂಬ ರೂಟ್‌ಮ್ಯಾಪ್ ಅನ್ನು 15 ದಿನಗಳ ಮುಂಚಿತವಾಗಿಯೇ ಸಿದ್ಧಪಡಿಸಿ ಸಂಬಂಧಿಸಿದ ವಾರ್ಡ್, ತಾಪಂ, ಗ್ರಾಪಂ, ಹೋಬಳಿ, ಕಾರ್ಮಿಕ ಸಂಘಟನೆಗಳಿಗೆ ಮಾಹಿತಿ ರವಾನಿಸಲಾಗುತ್ತದೆ. ಸಂಚಾರಿ ಕ್ಲಿನಿಕ್ ಸ್ಥಳಕ್ಕೆ ಆಗಮಿಸುವ ವೇಳೆಗೆ ಹಾಜರಿದ್ದು, ಮಂಡಳಿಯಿಂದ ಪಡೆದಿರುವ ಕಾರ್ಡ್ ತೋರಿಸಿ ಸೇವೆ ಪಡೆಯಬಹುದು.

ಹಲವು ಪರೀಕ್ಷೆಗಳು: ಸಂಚಾರಿ ಘಟಕದಲ್ಲಿ 25 ಮಾದರಿಯ ಪರೀಕ್ಷೆ ಮಾಡಬಹುದಾದ ವೈದ್ಯಕೀಯ ಉಪಕರಣಗಳನ್ನು ವ್ಯವಸ್ಥೆ ಮಾಡಲಾಗಿದೆ. ಬಯೋಕೆಮಿಸ್ಟ್ರಿ ಅನಲೈಸರ್, ಇಎಸ್‌ಆರ್, ಯೂರಿನ್ ಅನಲೈಸರ್, ಹೆಚ್‌ಬಿ ಮೀಟರ್ ಸೇರಿದಂತೆ ಒಟ್ಟು 5 ಪ್ರಯೋಗಾಲಯ ಉಪಕರಣಗಳು, ಚಿಕಿತ್ಸೆಗೆ ಪೂರಕವಾದ 37 ವೈದ್ಯಕೀಯ ವಸ್ತುಗಳು ವಾಹನದಲ್ಲಿವೆ. ಕಾರ್ಮಿಕರಿಗೆ ಎಲ್ಲ ರೀತಿಯ ಆಧುನಿಕ ವೈದ್ಯಕೀಯ ಪರೀಕ್ಷೆಗಳನ್ನು ನಿಖರವಾಗಿ ಮಾಡಿ, ವರದಿ ನೀಡುವಂತಹ ವ್ಯವಸ್ಥೆಯನ್ನು ವಾಹನದಲ್ಲಿ ಅಳವಡಿಸಲಾಗಿದೆ.

ಹೆಚ್ಚಿನ ಚಿಕಿತ್ಸೆಗೂ ನೆರವು: ನಾನಾ ಕಟ್ಟಡ ಕಾರ್ಮಿಕರಿಗೆ ತುರ್ತು ಚಿಕಿತ್ಸೆಯ ಪರಿಸ್ಥಿತಿ ಕಂಡುಬಂದ ಸಂದರ್ಭದಲ್ಲಿ ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲು ಆಂಬುಲೆನ್ ಸೇವೆಯನ್ನೂ ಒದಗಿಸಲಾಗುತ್ತದೆ. ಬಳಿಕ ಮಂಡಳಿಯೊಂದಿಗೆ ಸಮನ್ವಯ ಸಾಧಿಸಿ ಕಾರ್ಮಿಕರಿಗೆ ಅಗತ್ಯ ಚಿಕಿತ್ಸೆ ಅಥವಾ ಶಸ್ತ್ರಚಿಕಿತ್ಸೆಯನ್ನು ಕಲ್ಪಿಸಲಾಗುತ್ತದೆ. ಮುಖ್ಯವಾಗಿ ತಾಯಿಯ ಆರೋಗ್ಯ, ಗರ್ಭಾವಸ್ಥೆಯಲ್ಲಿನ ರಕ್ತಹೀನತೆ, ಹೆರಿಗೆ, ಶಿಶು ಆರೋಗ್ಯ, ಮಗು ಮತ್ತು ಹದಿಹರೆಯದವರ ಆರೋಗ್ಯ, ನಿರ್ಜಲೀಕರಣ, ಜ್ವರ, ಸಮಾಲೋಚನೆ, ತೀವ್ರ ಅಪೌಷ್ಟಿಕತೆ, ಮೂರ್ಛೆ, ಕಣ್ಣು–ದಂತ ಆರೈಕೆ, ಡಿ–ಅಡಿಕ್ಷನ್, ಮಾನಸಿಕ ಅಸ್ವಸ್ಥತೆ ನಿರ್ವಹಣೆ, ಸಾಂಕ್ರಾಮಿಕವಲ್ಲದ ರೋಗಗಳು, ಮೂಲಭೂತ ಓಪಿಡಿ ಆರೈಕೆ, ಕ್ಷಯರೋಗ, ಹೆಚ್‌ಐವಿ, ಕುಷ್ಠರೋಗ, ಮಲೇರಿಯಾ, ಫೈಲೇರಿಯಾಸಿಸ್, ಅಂಗವೈಕಲ್ಯ ಸೇರಿ ನಾನಾ ಆರೋಗ್ಯ ಸಮಸ್ಯೆಗಳಿಗೆ ಪರೀಕ್ಷೆ ಹಾಗೂ ಚಿಕಿತ್ಸೆ ಪಡೆಯಲು, ಸಂಚಾರಿ ಆರೋಗ್ಯ ಕ್ಲಿನಿಕ್ ಸೇವೆ ನೆರವಾಗುತ್ತಿದೆ.

> ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಹಾಗೂ ಅವರ ಅವಲಂಭಿತರ ಆರೋಗ್ಯ ರಕ್ಷಣೆಗೆ ಕಾರ್ಮಿಕ ಇಲಾಖೆಯಿಂದ ಜಾರಿಯಾಗಿರುವ ಸಂಚಾರಿ ಹೈಟೆಕ್ ಆರೋಗ್ಯ ಕ್ಲಿನಿಕ್ ಯೋಜನೆಗೆ ಜಿಲ್ಲೆಯಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. 20ಕ್ಕೂ ಹೆಚ್ಚು ಬಗೆಯ ಆರೋಗ್ಯ ಪರೀಕ್ಷೆಗಳಿಗೆ ಅಗತ್ಯವಾದ ಎಲ್ಲ ವೈದ್ಯಕೀಯ ಉಪಕರಣಗಳನ್ನೂ ವಾಹನದಲ್ಲಿ ಅಳವಡಿಸಲಾಗಿದೆ. ಓಪಿಡಿ ಪಡೆಯುವ ಎಲ್ಲ ಚಿಕಿತ್ಸೆಗಳ ಸೇವೆಯನ್ನೂ ನೀಡಲಾಗುತ್ತದೆ. ಅಧಿಕ ರಕ್ತದೊತ್ತಡ, ಸಕ್ಕರೆ ಕಾಯಿಲೆ ಸೇರಿದಂತೆ ನಾನಾ ಕಾಯಿಲೆಗಳನ್ನು ಪರೀಕ್ಷಿಸಿ ಔಷಧಗಳನ್ನು ವಿತರಿಸಲಾಗುವುದು.
>
> - **ಚೇತನ್,** ಜಿಲ್ಲಾ ಕಾರ್ಮಿಕ ಅಧಿಕಾರಿ, ಮೈಸೂರು

8ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 8 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

P. ಸತೀಶ್
(ಗ್ರಾಮ ಪಂಚಾಯಿತಿ S.D.A.)

ದು:ಖಿತಪ್ತರು
ಪತ್ನಿ: ಹೇಮಾ ಹಾಗೂ ಕುಟುಂಬವರ್ಗದವರು

ಎರಡನೇ ವರ್ಷದ ಸವಿನೆನಪು



ಶ್ರೀಮತಿ ದೇವಮ್ಮ

ಲೇ|| ಜೆ ಪುಟ್ಟಲಿಂಗಯ್ಯನವರ ಧರ್ಮಪತ್ನಿ (ಕೆಎಸ್‌ಆರ್‌ಟಿಸಿ) ನಾಡನಹಳ್ಳಿ

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ಸದಾ ನಾವುಗಳು ನಿಮ್ಮ ನೆನಪಿನಲ್ಲೇ ಇರುತ್ತೇವೆ ಹಾಗೂ ನಿಮ್ಮ ಆಶೀರ್ವಾದಗಳು ನಮ್ಮ ಜೊತೆಯಲ್ಲಿ ಇರುತ್ತದೆ.

ದುಃಖಿತಪ್ತರು: ನಿಮ್ಮ ಪ್ರೀತಿಯ ತಮ್ಮ T.ರಂಗಸ್ವಾಮಿ, (CPWD Rtd.,) ಲೆಕ್ಕ ಪರಿಶೋಧಕರು ಎಸ್ ಉತ್ತನಹಳ್ಳಿ

10ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 10 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಇಂತಿ ದುಃಖಿತಪ್ತ
ಶ್ರೀಮತಿ ನಿಂಗಮ್ಮ, ಲೇಟ್ ಗೌಡ ನಿಂಗೇಗೌಡರ ಕುಟುಂಬವರ್ಗ, ಶ್ರೀಮತಿ ಅನಸೂಯ ಮೃತರ ಪತ್ನಿ ಮತ್ತು ಮಕ್ಕಳು, ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು ಹೂಟಗಳ್ಳಿ

ಶ್ರೀ ನಾಗರಾಜು
ನಿಧನ: 20.12.2015

ಕರ್ನಾಟಕ ಸರ್ಕಾರ
ಕಾರ್ಯದರ್ಶಿಗಳ ಕಾರ್ಯಾಲಯ

ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಮಹದೇಶ್ವರಬೆಟ್ಟ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.
ದೂರವಾಣಿ: 08225–272128, ಫ್ಯಾಕ್ಸ್ ಸಂಖ್ಯೆ 08225–272123 Email: sec.mmtemple@gmail.com

ಸಂಖ್ಯೆ: ಶ್ರೀ ಮ.ಮ.ಕ್ಷೇತ್ರ.ಅ.ಪ್ರಾ/ಗುತ್ತಿಗೆ/8/ಪಿಆರ್/81/2023–24 ದಿನಾಂಕ: 15–12–2025

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಇ ಪ್ರಕ್ಯೂರ್‌ಮೆಂಟ್ ಮತ್ತು ಬಹಿರಂಗ ಹರಾಜು

ಕ್ರಸಂ	ಹಕ್ಕುಬಾಧ್ಯತೆಗಳ ವಿವರ	ಗುತ್ತಿಗೆ ಅವಧಿ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1.	ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಮಾಸ್ಟರ್ ಪ್ಲಾನ್ ಆವರಣ ಅರಳಿಮರದ ಹತ್ತಿರ ನೂತನ ಡಾರ್ಮೇಟರಿ ಹೋಗುವ ರಸ್ತೆಯಲ್ಲಿರುವ ಪಾದರಕ್ಷೆ ಬಿಡುವ ಕೌಂಟರ್ (ಸ್ಟಾಂಡ್)ನ್ನು ಇ–ಟೆಂಡರ್ ಕಂ ಬಹಿರಂಗ ಹರಾಜಿನಲ್ಲಿ ಬಿಡುವ ಬಗ್ಗೆ.	2 ವರ್ಷ	–	30,000=00

ಕ್ರ.ಸಂ	ಮಳಿಗೆಗಳ ವಿವರ	ಇ.ಎಂ.ಡಿ.	ವರ್ಗ ಮತ್ತು ಮಳಿಗೆ ಸಂಖ್ಯೆ
1	ಬಸ್ ನಿಲ್ದಾಣದ ವಾಣಿಜ್ಯ ಸಂಕೀರ್ಣ ಮಳಿಗೆಗಳಲ್ಲಿ 3 ಮಳಿಗೆಗಳು 11 ತಿಂಗಳ ಅವಧಿಗೆ ಮಾತ್ರ	10,000.00	ಸಾ,ವರ್ಗ: 8, 12, 24,
	ತಂಬಡಗೇರಿ ರಸ್ತೆ ವಾಣಿಜ್ಯ ಸಂಕೀರ್ಣ 1 ಮಳಿಗೆ	30,000.00	ಸಾ,ವರ್ಗ: 2
2	ಗುಂಜುಮಲೆ ವಾಣಿಜ್ಯ ಸಂಕೀರ್ಣ 2 ಮಳಿಗೆಗಳು 11 ತಿಂಗಳ ಅವಧಿಗೆ ಮಾತ್ರ	30,000.00	ಸಾ,ವರ್ಗ: 03, 05,
3	ನಡುಮಲೆ 90 ಎ.ಸಿ. ಶೀಟ್ ಮಳಿಗೆಗಳ ಪೈಕಿ 26 ಮಳಿಗೆಗಳು 11 ತಿಂಗಳ ಅವಧಿಗೆ ಮಾತ್ರ	30,000.00	ಸಾ,ವರ್ಗ:1.3, 8, 30, 34, 38, 47, 54, 55, 57, 58, 61, 65, 66, 70, 74, 76,77,78, ಪರಿಶಿಷ್ಟ ಜಾತಿ 79, 80, 84, 87, 89 ಪರಿಶಿಷ್ಟ ಪಂಗಡ: 25, 62,
4	ಮೂಡಲ ಮಲೆ ವಾಣಿಜ್ಯ ಸಂಕೀರ್ಣ 7 ಮಳಿಗೆಗಳು 11 ತಿಂಗಳ ಅವಧಿಗೆ ಮಾತ್ರ	30,000.00	ಸಾ,ವರ್ಗ: 1, 15, 43, 27, 46, 48 ಪರಿಶಿಷ್ಟ ಜಾತಿ: 37
5	ಅಂತರಗಂಗೆ ಸಾಲು ಮಳಿಗೆಗಳ ಪೈಕಿ 10 ಮಳಿಗೆ 11 ತಿಂಗಳ ಅವಧಿಗೆ ಮಾತ್ರ	30,000.00	ಸಾ,ವರ್ಗ: 2, 4, 6, 13, 14, 24, 26, 28 ಪರಿಶಿಷ್ಟ ಜಾತಿ: 10, 16,
6	ತಾಳಬೆಟ್ಟ ಅಂಗಡಿ ಮಳಿಗೆಗಳ ಪೈಕಿ 2 ಮಳಿಗೆ 11 ತಿಂಗಳ ಅವಧಿಗೆ ಮಾತ್ರ	10,000.00	ಸಾ,ವರ್ಗ: 13. 14,

ವಿವರಗಳನ್ನು https://kppp.karnataka.gov.in/ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಹೆಚ್ಚಿನ ವಿವರಗಳಿಗೆ ಕಛೇರಿಯ ಅವಧಿಯಲ್ಲಿ ಸ್ಪಷ್ಟೀಕರಣಬೇಕಾದಲ್ಲಿ ಉಪಕಾರ್ಯದರ್ಶಿಯವರ ಮೊಬೈಲ್ ನಂ. 9902593369. ವಿಷಯ ನಿರ್ವಾಹಕರು ಮೊಬೈಲ್ ನಂ: 8277244893 ಸಂಪರ್ಕಿಸ ತಕ್ಕದ್ದು.

ಇ–ಪ್ರಕ್ಯೂರ್‌ಮೆಂಟ್ ಮತ್ತು ಬಹಿರಂಗ ಹರಾಜು ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತಿದೆ

ಕ್ರ.ಸಂ	ವಿವರ	ದಿನಾಂಕ	ಷರಾ
1	ಇ–ಪೋರ್ಟಲ್‌ನಲ್ಲಿ ಟೆಂಡರ್ ಪ್ರಕ್ರಿಯೆಗಳು ಚಾಲ್ತಿಗೆ ಬರುವ ದಿನಾಂಕ	15–12–2025	ರ ನಂತರ
2	ಇ– ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ವೇಳೆ	29–12–2025	ಸಂಜೆ 4.00 ಗಂಟೆಯವರೆಗೆ
3	ಬಹಿರಂಗ ಹರಾಜು ದಿನಾಂಕ ಮತ್ತು ವೇಳೆ	30–12–2025	ಸ್ಥಳ: ಬಸ್ ನಿಲ್ದಾಣ ವಾಣಿಜ್ಯ ಸಂಕೀರ್ಣ ಬೆಳಗ್ಗೆ 10.00 ನಂತರ
4	ಇ–ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ	31–12–2025	ಇ–ಟೆಂಡರ್ ಸಂಜೆ 03.00 ಗಂಟೆಯ ನಂತರ ತೆರೆಯಲಾಗುವುದು

ಸಹಿ/– ಕಾರ್ಯದರ್ಶಿ
ಶ್ರೀಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ,
ಮಹದೇಶ್ವರ ಬೆಟ್ಟ

ಸಂ:ವಾಸಾಸಂಇ:ಚಾ.ನಗರ:575:2025–26

IN THE COURT OF SENIOR CIVIL JUDGE AND MACT AT VIRAJPET.
MVC No. 4/2024

Petitioner: Akash K P
V/s
Respondent:
Chethan Kumar TR & others
R1: Chethan Kumar TR
Aged. 33 years
Son of Ramesh P V, House No. 1521/5 Near SV Regency Apartment, HT Main Road, Hinkal Ring Road Mysore -570017

COURT NOTICE TO THE RESPONDENT NO. 1

Whereas the Petitioner filed the above case and you being as Respondent No. 1 have been avoiding service of Court summons. Therefore take notice that the above case is posted for your appearance either in person or through your Advocate on 9/1/2026 at 11:00 AM before the above court, failing which you will be placed exparte and the case will be proceeded with as per law.

By order of the Court
Sd/- Chief ministirial officer
Civil judge and JMFC COURT
Virajpet

MT Kariappa BA LLB
Advocate for the Petitioner.
Lawnest coorg, Ponnampet.
Virajpet, Dt. 11-12-2025

IN THE COURT OF SENIOR CIVIL JUDGE AND MACT AT VIRAJPET.
MVC No. 5/2024


Petitioner : Abhijith R
V/s
Respondent:
Chethan Kumar TR & others
R1: Chethan Kumar TR
aged 33 Years
Son of Ramesh PV, House No. 1521/5 Near SV Regency Apartment, HT Main Road, Hinkal Ring Road Mysore -570017

COURT NOTICE TO THE RESPONDNET NO. 1

Whereas the Petitioner filed the above case and you being as Respondent No. 1 have been avoiding service of Court summons. Therefore take notice that the above case is posted for your appearance either in person or through your Advocate on 9/1/2026 at 11:00 AM before the above court, failing which you will be placed exparte and the case will be proceeded with as per law.

By order of the Court
Sd/- Chief ministirial officer
Civil judge and JMFC COURT
Virajpet

MT Kariappa BA LLB
Advocate for the Petitioner.
Lawnest coorg, Ponnampet.
Virajpet, Dt. 11-12-2025



ಮಳವಳ್ಳಿಯಲ್ಲಿ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಯಂತ್ಯೋತ್ಸವ

ವಿವಿಧೆಡೆ ಭಾವೈಕ್ಯತಾ ಯಾತ್ರೆ ಸಂಚಾರ: ಭಕ್ತಿ ಸಮರ್ಪಣೆ

ತಾಯಿ ತಂದೆ, ಗುರುಗಳ ಋಣ ತೀರಿಸಲು ಸಾಧ್ಯವಿಲ್ಲ: ಶ್ರೀಗಂಗಾಧರ ಶಿವಾಚಾರ್ಯ ಸ್ವಾಮೀಜಿ

ಮಳವಳ್ಳಿ, ಡಿ.19– ಸಮಾಜದಲ್ಲಿ ಎಷ್ಟೇ ದೊಡ್ಡವರಾದರೂ 9 ತಿಂಗಳು ಹೊಟ್ಟೆಯಲ್ಲಿ ಹೊತ್ತು ಹೆತ್ತು ಬೆಳೆಸಿದ ತಾಯಿ–ತಂದೆ ಹಾಗೂ ಗುರುಗಳ ಋಣ ತೀರಿಸಲು ಸಾಧ್ಯವಿಲ್ಲ ಎಂದು ತೆಂಡೆಕೆರೆ ಮತ್ತು ಗುತ್ತಲು ಜಂಗಮ ಮಠದ ಶ್ರೀಗಂಗಾಧರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಸಿದ್ಧಾರ್ಥ ನಗರದಲ್ಲಿ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ನಡೆದ ಆದಿ ಜಗದ್ಗುರು ಶ್ರೀಶಿವರಾತ್ರೀಶ್ವರ ಶಿವಯೋಗಿಗಳ 1066ನೇ ಜಯಂತಿ ಮಹೋತ್ಸವದ ಶಾಂತಿ ಸೌಹಾರ್ದತೆ ಸಂದೇಶ ನೀಡುವ ಭಾವೈಕ್ಯತಾ ಸದ್ಭಾವನಾ ಯಾತ್ರೆಯಲ್ಲಿ ಶುಭ ಸಂದೇಶ ನೀಡಿ ಮಾತನಾಡಿದ ಅವರು, ಇಂತಹ ಭಾವೈಕ್ಯತೆ ಯಾತ್ರೆಗಳ ಜನರಲ್ಲಿ ಶಾಂತಿ–ಸೌಹಾರ್ದತೆ ಸಾಮರಸ್ಯ ಜೀವನ ರೂಪಿಸಲು ಸರ್ವರಿಗೂ ದಾರಿದೀಪವಾಗಿದೆ ಎಂದರು.

ಭೂಮಿ ಮೇಲಿರುವ 84 ಲಕ್ಷ ಜೀವರಾಶಿಗಳಲ್ಲಿ ಬೇರೆ ಯಾವ ಪ್ರಾಣಿಗಳಿಗೂ ಇಂತಹ ಸದ್ಭಾವನೆ, ಸಹಬಾಳ್ವೆ ಹೇಳಿಕೊಡುವ ಅವಶ್ಯಕತೆ ಇಲ್ಲ. ಆದರೆ ಯೋಚನೆ ವಿವೇಚನಾಶೀಲರಾಗಿರುವ ಮನುಷ್ಯನಿಗೆ ಮಾತ್ರ ಧರ್ಮದ, ಸಹಬಾಳ್ವೆ ಹೇಳಿ ಕೊಡುವಂತಹ ಅವಶ್ಯಕತೆ ಇದೆ ಎಂದರು.

ಸಾಕಿದ ಪ್ರಾಣಿಗೆ ಹೊಡೆದರೆ ದ್ವೇಷ ಮಾಡುವುದಿಲ್ಲ. ಆದರೆ ಮನುಷ್ಯನಾದವನು ಅಪ್ಪಿತಪ್ಪಿ ಏನಾದರೂ ಅವಘಡ ನಡೆದರೆ ದ್ವೇಷ, ಅಸೂಯೆ ನೋವಿನಿಂದ ಬದುಕುತ್ತಿರುವುದು ವಿಪರ್ಯಾಸ ಸಂಗತಿ. ಮನುಷ್ಯನಾದವನು ವಿದ್ಯಾವಂತ, ಬುದ್ಧಿವಂತ, ಹಣವಂತನಾಗಿ ಹೇಗೆ ಬದುಕಬೇಕು ಎಂಬುದು ತಿಳಿಯದೇ ಆ ಬದುಕಿನಿಂದ ವಿಮುಖನಾಗುತ್ತಿದ್ದಾನೆ ಎಂದರು. ಇಂದು ಸುತ್ತೂರು ಶ್ರೀಗಳು ಸಿದ್ಧಾರ್ಥನಗರದ ಮನೆ–ಮನೆ ಬಾಗಿಲಿಗೆ ಬಂದು ಆಶೀರ್ವದಿಸುವ ಮೂಲಕ ಭಕ್ತರು, ಧರ್ಮದ ದಣಿವನ್ನು ತೀರಿಸಲು ಯಾತ್ರೆ ಮಾಡುತ್ತಿದ್ದಾರೆ. ಪೂಜ್ಯರ ದರ್ಶನ, ಆಶೀರ್ವಾದ ಪಡೆದ ನಾವೆಲ್ಲರೂ ಪುಣ್ಯವಂತರು, ಭಾಗ್ಯವಂತರು ಎಂದರು.



ಸುತ್ತೂರು ಶ್ರೀಗಳ ನೇತೃತ್ವದಲ್ಲಿ ಭಾವೈಕ್ಯತಾ ಸದ್ಭಾವನಾ ಯಾತ್ರೆ ನಡೆಯಿತು.

ಯಾತ್ರೆಯಲ್ಲಿ ಶ್ರೀಗಳ ಆಶೀರ್ವಾದ ಪಡೆದು ಮಾತನಾಡಿದ ಸಿದ್ಧಾರ್ಥ ನಗರದ ಮಂಗಳಮ್ಮ, ನಡೆದಾಡುವ ದೇವರು ನಮ್ಮ ಸ್ಥಳಕ್ಕೆ ಆಗಮಿಸಿ ದರ್ಶನ ನೀಡಿ ಆಶೀರ್ವಾದ ನೀಡುತ್ತಿರುವುದು ಇತಿಹಾಸ. ಅವರ ದರ್ಶನ ಪಡೆದಿದ್ದು ನಮ್ಮ ಸೌಭಾಗ್ಯ ಎಂದರು.

ಇದೇ ವೇಳೆ ರಾಜಕೀಯ ವ್ಯಸ್ತಯಿಂದ ದೂರಾಗಿದ್ದ ಇಬ್ಬರು ಯುವ ಮುಖಂಡರನ್ನು ಸುತ್ತೂರು ಶ್ರೀಗಳು ಕರೆದು ಆಶೀರ್ವದಿಸಿ ಒಂದುಗೂಡಿಸಿದರು. ಅಲ್ಲದೇ ನೂರು ವರ್ಷದ ವೃದ್ಧೆ ನಡೆಯಲಾಗದಿದ್ದರೂ ದೊಣ್ಣೆ ಹಿಡಿದುಕೊಂಡು ಬಂದು ಸುತ್ತೂರು ಶ್ರೀಗಳ ಪಾದಸ್ಪರ್ಶ ಮಾಡಿ ಭಕ್ತಿ ಸಮರ್ಪಿಸಿದ್ದು, ನೂರಾರು ವೃದ್ಧ ಮಹಿಳೆಯರು ಶ್ರೀಗಳ ದರ್ಶನ ಪಡೆದಿದ್ದು ಎಲ್ಲರ ಗಮನ ಸೆಳೆಯಿತು.

ತರಬೇತಿ ಕೇಂದ್ರ ತೆರೆಯಲು ನಿವೇದನೆ: ಯಾತ್ರೆಯಲ್ಲಿ ಭಾಗವಹಿಸಿದ್ದ ಮುಖಂಡ ಹೆಚ್.ಡಿ. ದೇವಪ್ರಸಾದ್ ಸುತ್ತೂರು ಶ್ರೀಗಳಿಗೆ ನಮಿಸಿ ಈ ಭಾಗದಲ್ಲಿ ಜೆಎಸ್ಎಸ್ ವತಿಯಿಂದ ವೃತ್ತಿ ತರಬೇತಿ ಕೇಂದ್ರ ತೆರೆಯುವಂತೆ ನಿವೇದನೆ ಮಾಡಿಕೊಂಡರು.

ಭಕ್ತಿ ಸಮರ್ಪಣೆ: ಶುಕ್ರವಾರ ಮುಂಜಾನೆ ಸಿದ್ಧಾರ್ಥನಗರದ ಪ್ರವೇಶ ದ್ವಾರದಲ್ಲಿರುವ ಶ್ರೀ ಚೌಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಹೊರಟ ಭಾವೈಕ್ಯತಾ ಯಾತ್ರೆ ಮೆರವಣಿಗೆ ಆಗಮಿಸುತ್ತಿದ್ದಂತೆ ಸಾವಿರಾರು ಜನರು, ಮಹಿಳೆಯರು ಬೀದಿ ಬೀದಿಯಲ್ಲೂ ನೀರು ಹಾಕಿ ಹಸಿರು ತೋರಣ, ರಂಗೋಲಿ, ಪುಷ್ಪಗಳನ್ನಿಟ್ಟು ಬರಮಾಡಿಕೊಂಡು ಆಶೀರ್ವಾದ ಪಡೆದು ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸಿ ಭಕ್ತಿ ಸಮರ್ಪಿಸಿದರು.

ಯಾತ್ರೆ ವೇಳೆ ಸುತ್ತೂರು ಶ್ರೀಗಳು ವಿವಿಧ ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿದರು. ತೊಣಚಿ ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ, ದೇಗುಲ ಮಠದ ಶ್ರೀ ಚನ್ನಬಸವ ಸ್ವಾಮೀಜಿ, ತಾಲೂಕಿನ ಹರಗುರು ಚರಮೂರ್ತಿಗಳು, ನೂರಾರು ಮುಖಂಡರು ಸಾವಿರಾರು ಭಕ್ತರು ಭಾಗವಹಿಸಿದ್ದರು.

ಧರ್ಮದ ಹೆಸರಲ್ಲಿ ಯಾರೂ ಬಡಿದಾಡಬಾರದು



ಕಾರ್ಯಕ್ರಮದಲ್ಲಿ ನಟ ಶಿವರಾಜ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಮಳವಳ್ಳಿ: ಧರ್ಮದ ಹೆಸರಿನಲ್ಲಿ ಬಡಿದಾಡದೇ, ನಮ್ಮ ಧರ್ಮ ಶ್ರೇಷ್ಠ ನಿಮ್ಮ ಧರ್ಮ ಕನಿಷ್ಠ ಎಂದು ಆಲೋಚಿಸದೆ, ಸತ್ಯದ ಕಡೆ ಕೊಂಡೊಯ್ಯುವ ಯಾವುದೇ ಧರ್ಮವಾದರೂ ಸರಿ ನಾವು ಅದನ್ನು ಗೌರವಿಸಬೇಕು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ತಿಳಿಸಿದರು.

ಪಟ್ಟಣದಲ್ಲಿ ನಡೆಯುತ್ತಿರುವ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1066ನೇ ಜಯಂತಿ ಮಹೋತ್ಸವದ ಸಾಮಾಜಿಕ ಭಾವೈಕ್ಯತೆ ಕುರಿತ ವಿಶೇಷ ಉಪನ್ಯಾಸದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಠಗಳ ಪರಂಪರೆ ಮತ್ತು ಸಂಪ್ರದಾಯ ಉಳಿಯಬೇಕೆಂದರೆ ಇಂತಹ ಕಾರ್ಯಕ್ರಮ ನಡೆಯಬೇಕಿದೆ, ದೇವರು ಮತ್ತು ಗ್ರಂಥಗಳ ವಿಚಾರದಲ್ಲಿ ಭೇದ ಸಲ್ಲದು ಎಂದು ಕರೆ ನೀಡಿದರು.

ದೇವರು ಮತ್ತು ಧರ್ಮದ ವಿಚಾರದಲ್ಲಿ ಕತ್ತಾಡಿಕೊಳ್ಳುವ ಮನಸ್ಥಿತಿಯಿಂದ ನಾವು ಹೊರಬರಬೇಕು. ಸುತ್ತೂರು ಮಠದ ಸ್ವಾಮೀಜಿ ಎಲ್ಲಾ ಸಮುದಾಯದವರನ್ನು ಸಮಾನವಾಗಿ ಕಾಣುವ ಮೂಲಕ ಎಲ್ಲರೂ ಒಂದೇ ಎಂಬ ಸಂದೇಶ ಸಾರುತ್ತಿದ್ದಾರೆ ಎಂದು ಶ್ಲಾಘಿಸಿದರು.

ಹಿರಿಯ ನಟ ಡಾ.ಶಿವರಾಜ್‌ಕುಮಾರ್ ಮಾತನಾಡಿ, ಸುತ್ತೂರು ಮಠದ ಸೇವೆ ಅನನ್ಯವಾಗಿದ್ದು, ನಮ್ಮ ಕುಟುಂಬ ಹಿಂದಿನಿಂದಲೂ ಮಠದೊಂದಿಗೆ ಬಾಂಧವ್ಯ ಹೊಂದಿದೆ. ಮಠದ ಸಾಮಾಜಿಕ ಕೈಂಕರ್ಯಗಳು ಹೀಗೆ ಮುಂದುವರಿಯಬೇಕು. ಮಠದ ಸದ್ಭಕ್ತರಾಗಿ ಮಠದ ಏಳ್ಗೆಗಾಗಿ ನಾವು ಶ್ರೀಗಳು ಮತ್ತು ಮಠದ ಪರ ಯಾವಾಗಲು ಇರುತ್ತೇವೆ ಎಂದರು.

ಜಮಾತ್ ಎ ಇಸ್ಲಾಮಿ ಹಿಂದ್ ಕಾರ್ಯದರ್ಶಿ ಅಕ್ಬರ್ ಅಲಿ ಮಾತನಾಡಿದರು. ವೇದಿಕೆಯಲ್ಲಿ ಸುತ್ತೂರುಶ್ರೀ, ಕನಕಪುರ ದೇಗುಲ ಮಠದ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮೀಜಿ, ವಾಟಾಳು ಶ್ರೀ, ಸಾಲೂರು ಮಠದ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಹೊಸಹಳ್ಳಿ ಓಂಕಾರ ಸ್ವಾಮೀಜಿ, ಬೇಲಾಡಿ ಮಠದ ಶ್ರೀ ಸರ್ಪಭೂಷಣ ಸ್ವಾಮೀಜಿ, ಶಾಸಕ ಪಿ.ಎಂ.ನರೇಂದ್ರಸ್ವಾಮಿ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮಾಜಿ ಸಚಿವರಾದ ಮುರುಗೇಶ್ ನಿರಾಣಿ, ಡಿ.ಸಿ.ತಮ್ಮಣ್ಣ, ಮಾಜಿ ಶಾಸಕರಾದ ಡಿ.ಎಸ್.ವೀರಯ್ಯ, ಡಾ.ಕೆ.ಅನ್ನದಾನಿ ಸೇರಿದಂತೆ ಹಲವರಿದ್ದರು.

ಸಾಹಿತ್ಯ ಸಮ್ಮೇಳನಕ್ಕೆ ಕವನಗಳು, ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ಮಂಡ್ಯ, ಡಿ.19– ಡಾ.ಜೀಶಂಪ ಸಾಹಿತ್ಯ ವೇದಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಯುವಸೇನೆ ವತಿಯಿಂದ ಸಂಕ್ರಾಂತಿ ಸಂಭ್ರಮ ಅಂಗವಾಗಿ 15ನೇ ಅಖಿಲ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನ 2026ರ ಜ.17 ರಂದು ನಗರದ ಕರ್ನಾಟಕ ಸಂಘದ ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಆಯೋಜಿಸಿದ್ದು, ಆಸಕ್ತರಿಂದ ಕವಿಗೋಷ್ಠಿಗೆ ಕವನ ಹಾಗೂ ಪ್ರಶಸ್ತಿಗೆ ಸಾಧಕರಿಂದ ಅರ್ಜಿ ಆಹ್ವಾನಿಸಿದೆ.



ಕೃಷ್ಣ ಸ್ವರ್ಣಸಂದ್ರ

ಆಸಕ್ತರು 20 ಸಾಲಿನ 2 ಕವನಗಳು, ಕಿರು ಪರಿಚಯ, ಫೋಟೋ, ಮೊಬೈಲ್ ಸಂಖ್ಯೆ ಹಾಗೂ ವಿಳಾಸವನ್ನು ಡಿ.31ರೊಳಗೆ ಕಳುಹಿಸಬೇಕು. ವ್ಯಾಟ್ಸಪ್‌ನಲ್ಲಿ ಮೊದಲು ನೋಂದಣಿ ಮಾಡಿಕೊಂಡು, ನಂತರ ಅಂಚೆ ಮೂಲಕ ಕಳುಹಿಸಬೇಕು. ಕವನಗಳು ಯಾವುದಾದರೂ ವಿಷಯ ಒಳಗೊಂಡಿರಬಹುದು. ಆಯ್ಕೆಯಾದ ಕವಿತೆಗಳನ್ನು ಪುಸ್ತಕ ರೂಪದಲ್ಲಿ ಹೊರ ತರಲಾಗುವುದು. ಐವತ್ತು ಕವಿಗಳಗೆ ಕವಿಗೋಷ್ಠಿಯಲ್ಲಿ ಅವಕಾಶ ಕಲ್ಪಿಸಲಾಗುವುದು. 20 ಉತ್ತಮ ಕವನಗಳಿಗೆ 'ಕಾವ್ಯಶ್ರೀ', 20 ಮಂದಿ ಸಾಧಕರಿಗೆ 'ಕನ್ನಡರತ್ನ', ಜೀವಮಾನ ಸಾಧನೆಗಾಗಿ 10 ಮಂದಿಗೆ 'ಕರ್ನಾಟಕ ಭೂಷಣ' ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುವುದು. ಅತ್ಯುತ್ತಮ ಸಾಹಿತ್ಯ ಸೇವೆ ಮಾಡಿದ ಸಾಧಕರನ್ನು 10ನೇ ಅಖಿಲ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಲಾಗುವುದು.

ಆಸಕ್ತರು, ಕವಿಗಳು, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರು ವಿವಿಧ ಪ್ರಶಸ್ತಿ ಹಾಗೂ ಕವಿಗೋಷ್ಠಿಗೆ ಡಿ.31ರೊಳಗೆ ಹೆಸರು ನೋಂದಾಯಿಸಿಕೊಳ್ಳಬಹುದು. ವಿಳಾಸ: ಎಸ್.ಕೃಷ್ಣಸ್ವರ್ಣಸಂದ್ರ, ಕವಿಮಿತ್ರ, ನಂ–767, ಸ್ವರ್ಣಸಂದ್ರ, ಮಂಡ್ಯ–2 ಕಳುಹಿಸಬೇಕು. ಹೆಚ್ಚಿನ ವಿವರ ಹಾಗೂ ವ್ಯಾಟ್ಸ್‌ಪ್ ನಂ.9448424380ಗೆ ಕಳುಹಿಸಬೇಕಾಗಿ ಸಾಹಿತ್ಯ ವೇದಿಕೆ ಅಧ್ಯಕ್ಷ ಎಸ್.ಕೃಷ್ಣ ಸ್ವರ್ಣಸಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಜಯ ಕಪ್ ಕಬಡ್ಡಿ ಪಂದ್ಯಾವಳಿಗೆ ಸಿಎಸ್‌ಪಿ ಚಾಲನೆ

ಕ್ರೀಡೆ ಉತ್ತೇಜಿಸಲು ಕ್ರೀಡಾ ಅಕಾಡೆಮಿ ಆರಂಭಿಸಲು ತೀರ್ಮಾನ

ಪಾಂಡವಪುರ, ಡಿ.19– ಕ್ರೀಡೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ವಿದ್ಯಾ ಪ್ರಚಾರ ಸಂಘದಲ್ಲಿ ಕ್ರೀಡಾ ಅಕಾಡೆಮಿ ಆರಂಭಿಸಿ ಅದಕ್ಕೆ ತಗುಲುವ ವೆಚ್ಚವನ್ನು ಎಸ್‌ಟಿಜಿ ಚಾರಿಟಬಲ್ ಟ್ರಸ್ಟ್‌ನಿಂದ ಭರಿಸಲಾಗುವುದು ಎಂದು ವಿದ್ಯಾ ಪ್ರಚಾರ ಸಂಘದ ಅಧ್ಯಕ್ಷ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಭರವಸೆ ನೀಡಿದರು.

ಪಟ್ಟಣದ ವಿಜಯ ಕಾಲೇಜಿನ ಆವರಣದಲ್ಲಿ ವಿದ್ಯಾ ಪ್ರಚಾರ ಸಂಘ, ವಿಜಯ ಪ್ರಥಮ ದರ್ಜೆ ಹಾಗೂ ಪದವಿ ಕಾಲೇಜಿನ ವತಿಯಿಂದ ನಡೆದ ಜಿಲ್ಲಾ ಮಟ್ಟದ ಪದವಿ ಪೂರ್ವ, ಪದವಿ, ಐಟಿಐ, ಡಿಪ್ಲೋಮಾ, ಇಂಜಿನಿಯರಿಂಗ್, ಬಿಇಡ್, ಬಿಪಿಇಡಿ ಕಾಲೇಜು ವಿದ್ಯಾರ್ಥಿಗಳ ವಿಜಯ ಕಬಡ್ಡಿ ಪ್ರೋ ಲೀಗ್–2025 ವಿಜಯ ಕಪ್ ಕಬಡ್ಡಿ ಪಂದ್ಯಾವಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ವಿದ್ಯಾ ಪ್ರಚಾರ ಸಂಘ ಆರಂಭವಾಗಿ 80 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಮುಂಬರುವ 2026ರಲ್ಲಿ ಸಂಭ್ರಮಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅದರ ಅಂಗವಾಗಿ ಇದೇ ಮೊದಲ ಬಾರಿಗೆ ವಿಜಯ ಕಪ್ ಪ್ರೋ ಕಬಡ್ಡಿ ಲೀಗ್ ಹಮ್ಮಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ದೊಡ್ಡಮಟ್ಟದ ಕಬಡ್ಡಿ ಪಂದ್ಯಾವಳಿಗಳು ನಡೆಯಲಿವೆ ಕ್ರೀಡೆ ಎಂದರೆ ಶಿಸ್ತು ಹೀಗಾಗಿ ಕ್ರೀಡಾಪಟುಗಳು ಶಿಸ್ತು ಬೆಳೆಸಿಕೊಳ್ಳಬೇಕು. ಕ್ರೀಡಾಕೂಟದಲ್ಲಿ ಭಾಗವಹಿಸಿರುವ ಎಲ್ಲಾ ಕ್ರೀಡಾಪಟುಗಳು ಉತ್ತಮವಾಗಿ ಆಟವಾಡುವ ಮೂಲಕ ಕ್ರೀಡಾಸ್ಫೂರ್ತಿ ಮೆರೆಯಬೇಕು. ಮುಂದಿನ ದಿನಗಳಲ್ಲಿ ಇದೇ ಕ್ರೀಡಾಂಗಣದಲ್ಲಿ ರಾಷ್ಟ್ರ ಮಟ್ಟದ ಕ್ರೀಡಾಕೂಟ ಆಯೋಜಿಸಲಾಗುವುದು ಎಂದರು. ಕ್ರಿಕೆಟ್‌ಗೆ ಮಾರು ಹೋಗುತ್ತಿರುವ ಪ್ರಸ್ತುತ ದಿನಗಳಲ್ಲಿ ಕಬಡ್ಡಿಯೂ ಸಹ ಕ್ರಿಕೆಟ್‌ಗೆ ಸರಿಸಮಾನವಾಗಿ ರಾಜ್ಯ, ರಾಷ್ಟ್ರ ಹಾಗೂ ವಿಶ್ವಮಟ್ಟದಲ್ಲಿ ಬೆಳೆದು ದಾಪುಗಾಲು ಹಾಕುತ್ತಿದೆ. ಹೀಗಾಗಿ ಮಕ್ಕಳು ಕಬಡ್ಡಿ, ಖೋಖೋ ಸೇರಿದಂತೆ ಎಲ್ಲಾ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವ ಉದ್ದೇಶದಿಂದ ನಮ್ಮ ಆಡಳಿತ ಮಂಡಳಿ ಚರ್ಚಿಸಿ ಮಕ್ಕಳಿಗೆ ಕ್ರೀಡಾ ತರಬೇತಿ ನೀಡಲು ವಿದ್ಯಾ ಪ್ರಚಾರ ಸಂಘದಿಂದ ಕ್ರೀಡಾ ಅಕಾಡೆಮಿ ಆರಂಭಿಸುತ್ತಿದೆ ಎಂದರು.



ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿದರು.

ಸಂಸ್ಥೆ ಗೌರವ ಕಾರ್ಯದರ್ಶಿ ಕೆ.ವಿ.ಬಸವರಾಜು ಮಾತನಾಡಿದರು. ಇದೇ ವೇಳೆ ಸಂಸ್ಥೆ ಅಧ್ಯಕ್ಷ ಸಿ.ಎಸ್.ಪುಟ್ಟರಾಜು, ಗೌರವ ಕಾರ್ಯದರ್ಶಿ ಕೆ.ವಿ.ಬಸವರಾಜು ಹಾಗೂ ಆಡಳಿತ ಮಂಡಳಿ, ತಂಡಗಳ ಮಾಲೀಕರು, ತೀರ್ಪುಗಾರರು, ಉಪನ್ಯಾಸಕ ವರ್ಗ ಸೇರಿದಂತೆ ಎಲ್ಲರನ್ನು ಗೌರವಿಸಲಾಯಿತು.

2 ದಿನ ನಡೆಯುವ ಟೂರ್ನಿಯಲ್ಲಿ 8 ತಂಡಗಳು ಭಾಗವಹಿಸಲಿದ್ದು ಗೆಲುವಿಗಾಗಿ ಸೆಣಸಾಟ ನಡೆಸಲಿವೆ. ಈ ವೇಳೆ ಸಂಸ್ಥೆ ಉಪಾಧ್ಯಕ್ಷೆ ಶಾಂತಮ್ಮ, ಖಜಾಂಚಿ ಎನ್.ರಾಮೇಗೌಡ, ಸಹ ಕಾರ್ಯದರ್ಶಿ ಗೋಪಾಲ್, ನಿರ್ದೇಶಕರಾದ ಪಿ.ಎಸ್.ಲಿಂಗರಾಜು, ಕೆ.ಸೋಮೇಗೌಡ, ಎಂ.ಎಸ್.ಮರಿಸ್ವಾಮಿಗೌಡ, ನಿವೃತ್ತ ಪ್ರಾಂಶುಪಾಲ ಪ್ರಕಾಶ್, ಬಿಇಡಿ ಪ್ರಾಂಶುಪಾಲ ಡಾ.ಎನ್.ಕೆ.ವೆಂಕಟೇಗೌಡ, ಪ್ರೊ.ಎಂ.ಕೃಷ್ಣಮೂರ್ತಿ, ಕೆ.ಆರ್.ಮಹದೇವಯ್ಯ, ಪ್ರೌಢಶಾಲೆ ಮುಖ್ಯಶಿಕ್ಷಕ ಚಂದ್ರಶೇಖರ್, ಭೀಮೇಶ್ ಬಾಬು, ದೈ.ಶಿ.ಉಪನ್ಯಾಸಕ ಎಸ್.ಎಂ.ಗುರುಸ್ವಾಮಿ, ದೈ.ಶಿ.ನಿರ್ದೇಶಕರಾದ ಎಸ್.ನದೀಶ್, ಡಿ.ಆರ್.ನದೀಶ್, ನಿವೃತ್ತ ದೈ.ಶಿ.ನಿ.ಮಂಜುನಾಥ್ ಇತರರಿದ್ದರು.

ಮೂರನೇ ಪುಟದಿಂದ

ಮುಂದೂ ನಾನೇ ಮುಖ್ಯಮಂತ್ರಿ

ಮುಂದೆಯೂ ನಾನೇ ಮುಖ್ಯಮಂತ್ರಿ, ನನ್ನ ಪ್ರಕಾರ ವರಿಷ್ಠರು ನನ್ನ ಬೆನ್ನ ಹಿಂದಿದ್ದಾರೆ. ಜನರ ಆಶೀರ್ವಾದದ ಜೊತೆಗೆ ವರಿಷ್ಠರ ಬೆಂಬಲ ಇರುವವರೆಗೂ ನನ್ನನ್ನು ಅಧಿಕಾರದಿಂದ ಇಳಿಸಲು ಸಾಧ್ಯವಿಲ್ಲ. ನನಗೆ ಯಾರೂ ನಿರ್ದೇಶನ ನೀಡುವವರಿಲ್ಲ. ನಾನೇ ಸೂತ್ರಧಾರ ಎನ್ನುವ ಮೂಲಕ ಅಧಿಕಾರ ಹಂಚಿಕೆ ಗೊಂದಲಕ್ಕೆ ಸಿದ್ದರಾಮಯ್ಯ ತೆರೆ ಎಳೆದರು. ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ನಿನ್ನೆ ರಾತ್ರಿ ತಮ್ಮ ಮನೆಯಲ್ಲಿ ಏರ್ಪಡಿಸಿದ್ದ ಭೋಜನಕೂಟದಲ್ಲಿ ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆಯೇ ಆಪ್ತ ಸಚಿವರೊಂದಿಗೆ ಸುದೀರ್ಘ ಸಮಾಲೋಚನೆ ನಡೆಸಿದ್ದರು. ಇಂದು ಅಧಿವೇಶನ ಕಲಾಪ ವೇಳೆಯೇ ಅಧಿಕಾರ ಹಂಚಿಕೆ ಗೊಂದಲಕ್ಕೆ ಸ್ಪಷ್ಟನೆ ನೀಡಿದರು.

ಒಪ್ಪಂದ ಆಗಿದೆ: ಅದರಂತೆ ನಡಿತ್ತೇವೆ!

ಅವರ ತೀರ್ಮಾನದಂತೆ ನಾವು ನಡೆದುಕೊಳ್ಳುತ್ತೇವೆ. ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ನಮ್ಮ ನಡುವೆ ಹಾಗೂ ಹೈಕಮಾಂಡ್ ಮುಂದೆಯೂ ಒಪ್ಪಂದ ಆಗಿದೆ ಎಂದು ಮತ್ತೊಮ್ಮೆ ಸ್ಪಷ್ಟಪಡಿಸಿದರು.

ಒಟ್ಟಿಗೆ ಸೇರಿ ಊಟ ಮಾಡುವುದು ತಪ್ಪಾ!: ಒಟ್ಟಿಗೆ ಸೇರಿ ಊಟ ಮಾಡುವುದನ್ನು ಬೇಡ ಎನ್ನಲು ಆಗುತ್ತದೆಯೇ, ನನಗೇಕೆ ಅದೆಲ್ಲಾ, ಹೊರಗಡೆಯಿಂದ ಬಂದಿದ್ದೀವಿ. ಎಲ್ಲಾ ಸೇರಿ ಊಟ ಮಾಡುವುದರಲ್ಲಿ ತಪ್ಪೇನಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲರೂ ಸೇರಿ ಊಟ ಮಾಡುವುದರಲ್ಲಿ ತಪ್ಪು ಹುಡುಕಬೇಡಿ. ಅದು ನನಗ್ಯಾಕೆ ಬೇಕು. ನನ್ನನ್ಯಾಕೆ ಈ ಪ್ರಶ್ನೆ ಕೇಳ್ತೀರಿ ಎಂದರು. ತಮ್ಮನ್ನು ಭ್ರಷ್ಟಾಚಾರದ ಪಿತಾಮಹ ಎಂದಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಸೂಕ್ತ ಸಮಯದಲ್ಲಿ ಉತ್ತರ ನೀಡುವೆ. ನಾವು ಸರ್ಕಾರ ದಿವಾಳಿ ಮಾಡಿ ದುಡ್ಡು ತೆಗೆದುಕೊಂಡು ಹೋಗಿ ಹೈಕಮಾಂಡ್‌ಗೆ ಕೊಡುತ್ತಿದ್ದು, ನಮ್ಮನ್ನು ಎಟಿಎಂ ಎಂದಿದ್ದಾರೆ. ಇದನ್ನು ಸಾಬೀತು ಮಾಡಬೇಕು. ಯಾವ ಲೆಕ್ಕಾಚಾರದ ಮೇಲೆ ಈ ಆರೋಪ ಮಾಡಿದ್ದಾರೆ.

ಈಗ ಏನು ಹೇಳಬೇಕೋ ಅದನ್ನು ಹೇಳಿದ್ದೇನೆ, ಉಳಿದ ಉತ್ತರಕ್ಕೆ ಸಮಯ ಬರುತ್ತದೆ. ಕಾಲವೇ ಉತ್ತರ ನೀಡುತ್ತದೆ. ಅವರಿಗೆ ಏನು ಬೇಕೋ ಆ ಉತ್ತರ ಈಗಾಗಲೇ ನೀಡಿದ್ದೇನೆ ಎಂದರು.

ತಮ್ಮ ಆಪ್ತ ಕಾರ್ಯದರ್ಶಿ ರಾಜೇಂದ್ರ ಪ್ರಸಾದ್ ಕಾರು ಅಪಘಾತದ ಬಗ್ಗೆ ಯಾವುದೇ ಆತಂಕ ಪಡಬೇಕಿಲ್ಲ, ಒಂದೆರಡು ದಿನ ವಿಶ್ರಾಂತಿಗೆ ವೈದ್ಯರು ಸಲಹೆ ನೀಡಿದ್ದಾರೆ, ಘಟನೆಯಲ್ಲಿ ಒಬ್ಬ ಯುವಕನ ಸಾವಾಗಿದೆ, ಮೃತನ ಕುಟುಂಬದವರಿಗೆ ಸೂಕ್ತ ಪರಿಹಾರ ನೀಡಲಾಗುವುದು ಎಂದರು.

ಮೈಸೂರಲ್ಲಿ ಭಕ್ತಿಪೂರ್ವಕ ಸ್ವಾಗತ

ವೇದಾಂತ ಭಾರತೀ ಸಹ ಯೋಗದಲ್ಲಿ ಶೃಂಗೇರಿ ಮಠದ ಹಿರಿಯ ಶ್ರೀಗಳಾದ ಭಾರತೀತೀರ್ಥ ಮಹಾಸನ್ನಿಧಾನಂಗಳವರು ಸಂನ್ಯಾಸ ಸ್ವೀಕಾರದ ಸುವರ್ಣ ಮಹೋತ್ಸವ(50 ವರ್ಷ ಪೂರೈಸಿದ ಹಿನ್ನಲೆಯಲ್ಲಿ) ನಿಮಿತ್ತ ಶನಿವಾರ ಅರಮನೆ ಆವರಣದಲ್ಲಿ 'ಸ್ತುತಿಶಂಕರ' ಕಾರ್ಯಕ್ರಮ ಜರುಗಲಿದೆ. ಈ ಸಮಾರಂಭದಲ್ಲಿ ಕೆ.ಆರ್.ನಗರ ಯಡತೊರೆ ಮಠದ ಶ್ರೀ ಶಂಕರಭಾರತೀ ಸ್ವಾಮೀಜಿ, ಶ್ರೀ ಬ್ರಹ್ಮನಂದ ಭಾರತೀ ಸ್ವಾಮೀಜಿ ಅವರ ದಿವ್ಯ ಉಪಸ್ಥಿತಿಯಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮದಲ್ಲಿ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉಪಸ್ಥಿತರಿರುತ್ತಾರೆ.

'ದ್ವೇಷ ಭಾಷಣ' ಮಸೂದೆಗೆ ಅಂಗೀಕಾರ

ಪ್ರಸ್ತಾಪಿಸಲಾಗಿದೆ. ಪುನರಾವರ್ತಿತ ಅಪರಾಧಗಳಿಗೆ, ಗರಿಷ್ಠ ಏಳು ವರ್ಷಗಳ ಜೈಲು ಶಿಕ್ಷೆ ಮತ್ತು 1 ಲಕ್ಷ ರೂ. ದಂಡ ವಿಧಿಸಲಾಗುತ್ತದೆ.

ಬಿಜೆಪಿಯ ಆರೋಪಗಳನ್ನು ನಿರಾಕರಿಸಿದ ಗೃಹ ಸಚಿವರು, ಬಿಜೆಪಿ ಸರ್ಕಾರವಿರುವ ಮಹಾರಾಷ್ಟ್ರದಲ್ಲಿರುವಂತೆ ಕಾನೂನು ಜಾರಿಗೆ ತರಲಾಗುತ್ತಿದೆ ಎಂದು ತಿಳಿಸಿದರು.

ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ವಿಧಾನಪರಿಷತ್ ಸದಸ್ಯ ಸಿ.ಟಿ ರವಿ, ವಿಧೇಯಕ ಕಾನೂನು ಆಗಿ ಜಾರಿಗೆ ಬಂದರೆ ರಾಜಕೀಯ ದ್ವೇಷಕ್ಕೆ ಅಪಾಯಕಾರಿ ಅಸ್ತ್ರವಾಗುತ್ತದೆ. ಕಾಂಗ್ರೆಸ್ ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದ ಇತಿಹಾಸವಿದೆ. ಪೊಲೀಸ್ ರಾಜ್ಯವನ್ನಾಗಿಸುವ ಪ್ರಯತ್ನ ನಡೆದಿದೆ ಎಂದು ಆರೋಪಿಸಿದರು.

ಮಸೂದೆಯನ್ನು ಕಾನೂನಾಗಿ ಅಂಗೀಕರಿಸಿದಾಗ ರಾಜಕೀಯ ವಿರೋಧಿಗಳ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಲು ಬಳಸಲಾಗುತ್ತದೆ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು. ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರ ಗದ್ದಲದ ನಡುವೆ ಮಸೂದೆಯನ್ನು ಸಭಾಪತಿ ಬಸವರಾಜ ಹೊರಟ್ಟಿ ಮತಕ್ಕೆ ಹಾಕಿದಾಗ ಧ್ವನಿ ಮತದಿಂದ ವಿಧೇಯಕ ಅಂಗೀಕಾರವಾಯಿತು.

8 ಕೋಟಿ ಆಸ್ತಿ ಜಪ್ತಿ

ಅಪರಾಧದ ಉಳಿದ ಆದಾಯವನ್ನು ಪತ್ತೆ ಹಚ್ಚಲು ಸಾಧ್ಯವಾಗಲಿಲ್ಲ. ಅವುಗಳಿಗೆ ಬಿ.ನಾಗೇಂದ್ರ ಈಗಾಗಲೇ ಬೇರೆ ವ್ಯವಸ್ಥೆ ಮಾಡಿರಬಹುದು ಅಥವಾ ಮರೆಮಾಡಿರಬಹುದು ಎಂದು ಇಡಿ ತಿಳಿಸಿದೆ. ಜಾರಿ ನಿರ್ದೇಶನಾಲಯದ ಪ್ರಕಾರ ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿರುವ ಆಸ್ತಿಗಳ ಮೌಲ್ಯ 8.07 ಕೋಟಿ ರೂ. ಆಗಿದೆ.

ಕರ್ನಾಟಕ ಮಹರ್ಷಿ ವಾಲ್ಮೀಕಿ ಎಸ್‌ಟಿ ಅಭಿವೃದ್ಧಿ ನಿಗಮದ ಖಾತೆಗಳಿಂದ ಕೋಟ್ಯಂತರ ರೂಪಾಯಿಗಳನ್ನು ಬೇರೆಡೆಗೆ ತಿರುಗಿಸಿ, ನಕಲಿ ಖಾತೆಗಳಿಗೆ ವರ್ಗಾವಣೆ ಮಾಡಲಾಗಿತ್ತು. ನಂತರ ಶೆಲ್ ಘಟಕಗಳ ಮೂಲಕ ಅಕ್ರಮವಾಗಿ ವರ್ಗಾಯಿಸಲಾಗಿತ್ತು ಎಂಬ ಆರೋಪ ಕೇಳಿಬಂದಿತ್ತು ಆ ಸಂಬಂಧ ರಾಜ್ಯ ಪೊಲೀಸರು ಮತ್ತು ಸಿಬಿಐ ಎಫ್‌ಐಆರ್ ದಾಖಲಿಸಿದ್ದವು. ಅವುಗಳ ತನಿಖೆ ವೇಳೆ ಹಣ ಅಕ್ರಮ ವರ್ಗಾವಣೆ ಪ್ರಕರಣ ಉದ್ಭವಿಸಿದೆ.

ಡಿಸಿಎಂ ಡಿಕೆಶಿ ಮೊರೆ

ಶಿವಕುಮಾರ್ ಜೊತೆ ಆಗಮಿಸಿದ ಸಚಿವ ಮಾಂಕಾಳ ವೈದ್ಯ, ಶಾಸಕ ಸತೀಶ್ ಸೈಲ್ ಅವರಿಗೂ ಒಳಹೋಗಲು ಅನುಮತಿ ನಿರಾಕರಿಸಲಾಗಿತ್ತು. ದೇವಿಯ ಮುಂದೆ ಕೇಳುವ ಪ್ರಶ್ನೆಗಳು ಯಾರಿಗೂ ಕೇಳಿಸಬಾರದು ಎಂಬ ಕಾರಣಕ್ಕೆ ದೇವಸ್ಥಾನದ ಪ್ರಾಂಗಣದಲ್ಲಿ ಯಾರೂ ಇರದಂತೆ ಖಡಕ್ ಸೂಚನೆ ನೀಡಲಾಗಿತ್ತು ಎಂದು ಅರ್ಚಕರು ತಿಳಿಸಿದ್ದಾರೆ. ವಿಶೇಷ ಪೂಜೆ ಸಲ್ಲಿಸಿದ ಶಿವಕುಮಾರ್ ದೇವಿಯ ಮುಂದೆ ಐದು ರೀತಿಯ ಪ್ರಶ್ನೆಗಳನ್ನು ಇರಿಸಿದ್ದಾರೆ. ಆದರೆ ಯಾವ ಪ್ರಶ್ನೆಗಳನ್ನು ಕೇಳಿದರು ಎಂದು ಬಹಿರಂಗವಾಗಿ ಹೇಳುವಂತಿಲ್ಲ ಎಂದರು.

ಇಂದು ಮೈಸೂರು ಅರಮನೆ ಆವರಣದಲ್ಲಿ ಸ್ತುತಿ ಶಂಕರ ಸ್ತೋತ್ರ ಮಹಾ ಸಮರ್ಪಣೆ ಕಾರ್ಯಕ್ರಮ

• ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಶ್ರೀ ವಿಧುಶೇಖರ ಭಾರತೀ ಶ್ರೀಗಳ ಸಾನ್ನಿಧ್ಯ • 20 ಸಾವಿರಕ್ಕೂ ಅಧಿಕ ಮಂದಿ ಪಾಲ್ಗೊಳ್ಳುವ ನಿರೀಕ್ಷೆ

ಮೈಸೂರು, ಡಿ.19(ಜಿಎ)–ಮೈಸೂರು ಅರಮನೆ ಆವರಣದಲ್ಲಿ ಡಿ.20ರಂದು ಸಂಜೆ 4 ಗಂಟೆಗೆ ಸ್ತುತಿ ಶಂಕರ– ಸ್ತೋತ್ರ ಮಹಾ ಸಮರ್ಪಣೆ ಕಾರ್ಯಕ್ರಮ ಆಯೋಜಿಸಲಾಗಿದ್ದು, ಇದರಲ್ಲಿ ಸುಮಾರು 20 ಸಾವಿರಕ್ಕೂ ಅಧಿಕ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಸ್ತುತಿ ಶಂಕರ ಸಂಚಾಲನ ಸಮಿತಿ ಕಾರ್ಯಾಧ್ಯಕ್ಷ ಸುಧಾಕರಶೆಟ್ಟಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶೃಂಗೇರಿ ಶಾರದಾ ಪೀಠದ ಜಗದ್ಗುರು ಶಂಕರಾಚಾರ್ಯ ಭಾರತೀ ತೀರ್ಥ ಸ್ವಾಮೀಜಿಯವರ ಸನ್ಯಾಸ ಸ್ವೀಕಾರದ 50ನೇ ವರ್ಷದ ಅಂಗವಾಗಿ ಸುವರ್ಣ ಭಾರತೀ ಶೀರ್ಷಿಕೆ ಅಡಿಯಲ್ಲಿ ಈ ಕಲ್ಯಾಣ ವೃಷ್ಟಿ ಮಹಾಭಿಯಾನ ಸ್ತೋತ್ರ ಸಮರ್ಪಣಾ ಕಾರ್ಯ ಕ್ರಮವನ್ನು ಸ್ತುತಿ ಶಂಕರ ಹೆಸರಿನಡಿಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದರು.

ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಸಾನ್ನಿಧ್ಯದಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಕೆ.ಆರ್.ನಗರ ಯಡತೊರೆ ಯೋಗಾನಂದೇಶ್ವರ ಸರಸ್ವತಿ ಮಠದ ಪೀಠಾಧೀಶರಾದ ಶಂಕರ ಭಾರತೀ ಸ್ವಾಮೀಜಿ, ಬ್ರಹ್ಮಾನಂದ ಭಾರತೀ ಸ್ವಾಮೀಜಿ ಉಪಸ್ಥಿತರಿರುವರು ಎಂದರು.

ಈ ಒಂದು ಪವಿತ್ರ ಕಾರ್ಯಕ್ಕೆ ರಾಜವಂಶಸ್ಥರಾದ ಡಾ. ಪ್ರಮೋದಾ ದೇವಿ ಒಡೆಯರ್ ಹಾಗೂ ಸಂಸದ ಯದುವೀರ್ ಒಡೆಯರ್ ಸಹಕಾರ ನೀಡುತ್ತಿದ್ದಾರೆ. ಜಿಲ್ಲೆಯಾದ್ಯಂತ ಕಳೆದ ಒಂದು ವರ್ಷದಿಂದ ಮಾತೆಯರು, ಮಹನೀಯರು, ವಿದ್ಯಾರ್ಥಿಗಳು ಸೇರಿ ಶ್ರೀ ಶಂಕರಾಚಾರ್ಯ ವಿರಚಿತ ಕಲ್ಯಾಣವೃಷ್ಟಿಸ್ತವ, ಶಿವ ಪಂಚಾಕ್ಷರಿ ನಕ್ಷತ್ರ ಮಾಲಾ ಹಾಗೂ ಲಕ್ಷ್ಮಿ ನೃಸಿಂಹಕರುಣಾರಸ ಸ್ತೋತ್ರ ಅಭ್ಯಾಸ ಮಾಡಿದ್ದು, ನಾಳಿನ ಕಾರ್ಯಕ್ರಮದಲ್ಲಿ 20 ಸಾವಿರಕ್ಕೂ ಅಧಿಕ ಮಂದಿ ಅರಮನೆ ಆವರಣದಲ್ಲಿ ಪಠಿಸಲಿದ್ದಾರೆ. ಇವರಿಗೆ ಮ್ಯಾಟ್, ಕುರ್ಚಿ ವ್ಯವಸ್ಥೆ ಮಾಡಲಾಗಿದೆ. ಅರಮನೆ ಪೂರ್ವ ಮುಖ್ಯ ದ್ವಾರ, ಉತ್ತರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ದ್ವಾರ, ದಕ್ಷಿಣದ ವರಾಹ ದ್ವಾರಗಳ ಮೂಲಕ ಪ್ರವೇಶವಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಸಂಸ್ಕೃತಿ ಚಿಂತಕ ಕೌಟಿಲ್ಯ ರಘು, ಶ್ರೀಹರಿ ದ್ವಾರಕಾನಾಥ್, ಮಂಜುನಾಥ್ ಶ್ರೀವತ್ಸಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸ್ತುತಿ ಶಂಕರ ಸಂಚಾಲನ ಸಮಿತಿ ಕಾರ್ಯಾಧ್ಯಕ್ಷ ಸುಧಾಕರ ಶೆಟ್ಟಿ ಮಾತನಾಡಿದರು.

ಇಂದು ಮೈಸೂರು ಅರಮನೆಗೆ ಪ್ರವಾಸಿಗರ ಪ್ರವೇಶಕ್ಕೆ ನಿರ್ಬಂಧ

ಮೈಸೂರು, ಡಿ.19(ಜಿಎ)–ಮೈಸೂರು ಅರಮನೆಗೆ ಶೃಂಗೇರಿ ಮಠದ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಡಿ.20ರಂದು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಅಂದು ಮಧ್ಯಾಹ್ನ 2 ಗಂಟೆಯಿಂದ ಸಂಜೆ 5.30ರವರೆಗೆ ಅರಮನೆಗೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ. ಅರಮನೆ ಆವರಣದಲ್ಲಿ ಶೃಂಗೇರಿ ಮಠದ ಪುರೋಹಿತರಿಂದ ಸ್ತುತಿ ಶಂಕರ ಸ್ತೋತ್ರ ಪಠಣ ಮತ್ತು ಗುರುಗಳ ಆಶೀರ್ವಚನ ಕಾರ್ಯ ಕ್ರಮ ನಡೆಯುವುದರಿಂದ ಅಂದು 2 ಗಂಟೆಯಿಂದ ಸಂಜೆ 5.30ರವರೆಗೆ ಅರಮನೆಗೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಮಣ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸತೀಶ್ ಜಾರಕಿಹೊಳಿ ಔತಣಕೂಟದಲ್ಲಿ ಸಿದ್ದರಾಮಯ್ಯ ಭಾಗಿ!

ಬೆಳಗಾವಿ, ಡಿ.19– ಬೆಳಗಾವಿ ಚಳಿಗಾಲದ ಅಧಿವೇಶನದ ನಡುವಲ್ಲೇ ಬಣ ರಾಜಕೀಯ ಡಿನ್ನರ್ ಪಾರ್ಟಿ ಜೋರಾಗಿದ್ದು, ಈ ನಡುವೆ ಸಚಿವ ಸತೀಶ್ ಜಾರಕಿಹೊಳಿಯವರು ಆಯೋಜಿಸಿದ್ದ ಔತಣಕೂಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾಗಿಯಾಗಿರುವುದು ಕುತೂಹಲ ಹೆಚ್ಚಾಗುವಂತೆ ಮಾಡಿದೆ.



ಬೆಳಗಾವಿಯ ತಮ್ಮ ನಿವಾಸದಲ್ಲಿ ಗುರುವಾರ ರಾತ್ರಿ ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರು ಔತಣಕೂಟ ಆಯೋಜನೆ ಮಾಡಿದ್ದು, ಔತಣಕೂಟದಲ್ಲಿ ಸಿದ್ದರಾಮಯ್ಯ ಅವರು ಭಾಗಿಯಾಗಿದ್ದಾರೆ.

ಸಿದ್ದರಾಮಯ್ಯ ಅವರಷ್ಟೇ ಅಲ್ಲದೆ ಅವರ ಆಪ್ತ ಸಚಿವರಾದ ಡಾ.ಜಿ.ಪರಮೇಶ್ವರ್, ಡಾ.ಹೆಚ್.ಸಿ.ಮಹದೇವಪ್ಪ, ಜಮೀರ್ ಅಹ್ಮದ್ ಖಾನ್, ಡಾ. ಎಂ.ಸಿ. ಸುಧಾಕರ್ ಮತ್ತು ಶಾಸಕ ಎ.ಎಸ್.ಪೊನ್ನಣ್ಣ ಹಾಜರಿದ್ದರು ಎಂದು ತಿಳಿದುಬಂದಿದೆ.

ಡಿ.17ರಂದೂ ಸತೀಶ್ ಜಾರಕಿಹೊಳಿ ಯವರು ಹೋಟೆಲ್‌ವೊಂದರಲ್ಲಿ ಔತಣಕೂಟ ಆಯೋಜಿಸಿದ್ದರು. ಅದರಲ್ಲಿ 30ಕ್ಕೂ ಹೆಚ್ಚು ಶಾಸಕರು ಭಾಗಿಯಾಗಿದ್ದರು. ಈ ಔತಣಕೂಟದಲ್ಲಿ ಸಿದ್ದರಾಮಯ್ಯ ಅವರು ಭಾಗಿಯಾಗದಿದ್ದರೂ, ಅವರ ಪುತ್ರ ಯತೀಂದ್ರ ಸಿದ್ದರಾಮಯ್ಯ ಹಾಗೂ ಶಾಸಕ ಕೆ.ಎನ್.ರಾಜಣ್ಣ ಪಾಲ್ಗೊಂಡಿದ್ದರು.

ಬೆಳಗಾವಿಯ ಹೊರವಲಯದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಕೆಲವು ಸಚಿವರು ಸೇರಿದಂತೆ 30 ಕ್ಕೂ ಹೆಚ್ಚು ಕಾಂಗ್ರೆಸ್ ಶಾಸಕರು ಔತಣಕೂಟದಲ್ಲಿ ಸೇರಿದ ಒಂದು ವಾರದ ನಂತರ ಈ ಬೆಳವಣಿಗೆಗಳು ಕಂಡು ಬಂದಿದೆ. ರಾಜ್ಯ ವಿಧಾನಸಭೆ ಚಳಿಗಾಲ ಅಧಿವೇಶನ ಬೆಳಗಾವಿಯಲ್ಲಿ ನಡೆಯುತ್ತಿರುವುದರಿಂದ ಶಾಸಕರಿಗೆ ಭೋಜನಕೂಟವನ್ನು ನಡೆಸಲಾಗಿದೆ ಎಂದು ಹೇಳಲಾಗುತ್ತಿದ್ದರು. ಈ ನೆಪದಲ್ಲಿ ರಾಜ್ಯ ರಾಜಕೀಯ ಬೆಳವಣಿಗೆಗಳ ಕುರಿತು ನಾಯಕರು ಚರ್ಚೆ ನಡೆಸುತ್ತಿದ್ದಾರೆಂದು ಹೇಳಲಾಗುತ್ತಿದೆ.

ಅಧಿವೇಶನದ ಮುಕ್ತಾಯದ ನಂತರ ಸಿಎಂ ಮತ್ತು ಡಿಸಿಎಂ ಅವರು ದೆಹಲಿ ವರಿಷ್ಠರ ಭೇಟಿಯಾಗುವ ಸಾಧ್ಯತೆ ಹಿನ್ನೆಲೆಯಲ್ಲಿ ಈ ಡಿನ್ನರ್ ಪಾರ್ಟಿ ಕೂಡ ತೀವ್ರ ಕುತೂಹಲ ಮೂಡಿಸಿದೆ.

ರೌಡಿ ಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣ

ಬಿಜೆಪಿ ಶಾಸಕ ಭೈರತಿ ಬಸವರಾಜು ನಿರೀಕ್ಷಣಾ ಜಾಮೀನು ಅರ್ಜಿ ವಜಾ

ಬೆಂಗಳೂರು, ಡಿ.19– ರೌಡಿ ಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಶಾಸಕ ಬೈರತಿ ಬಸವರಾಜು ಅವರಿಗೆ ಹೈಕೋರ್ಟ್‌ನಲ್ಲಿ ಹಿನ್ನಡೆಯಾಗಿದೆ. ಒಂದು ಕಡೆ ಕಠಿಣ ಕಾಯ್ದೆಯಿಂದ ಮುಕ್ತಿ ಸಿಕ್ಕರೂ, ಮತ್ತೊಂದೆಡೆ ನಿರೀಕ್ಷಣಾ ಜಾಮೀನು ಸಿಗದೆ ಬಂಧನದ ತೂಗುಗತ್ತಿ ಅವರ ತಲೆ ಮೇಲೆ ತೂಗಲಾರಂಭಿಸಿದೆ.



ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ತಮ್ಮನ್ನು ಬಂಧಿಸುವ ಸಾಧ್ಯತೆಯಿದೆ ಎಂದು ಆತಂಕ ವ್ಯಕ್ತಪಡಿಸಿ, ಬೈರತಿ ಬಸವರಾಜು ಅವರು ಸಲ್ಲಿಸಿದ್ದ ಮಧ್ಯಂತರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಹೈಕೋರ್ಟ್ ಏಕಸದಸ್ಯ ಪೀಠ ವಜಾ ಗೊಳಿಸಿದೆ. ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಪೀಠವು ಈ ಮಹತ್ವದ ಆದೇಶ ನೀಡಿದೆ. ಪ್ರಕರಣದ ತನಿಖೆ ಮತ್ತು ವಿಚಾರಣೆ ಇನ್ನೂ ಪೂರ್ಣಗೊಳ್ಳದ ಹಂತದಲ್ಲಿ ನಿರೀಕ್ಷಣಾ ಜಾಮೀನು ನೀಡಲು ಸಾಧ್ಯವಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

ಆದೇಶ ಪ್ರಕಟವಾಗುತ್ತಿದ್ದಂತೆ ಬೈರತಿ ಬಸವರಾಜು ಪರ ವಾದ ಮಂಡಿಸಿದ ಹಿರಿಯ ವಕೀಲ ಸಂದೇಶ್ ಚೌಟ ಅವರು, ನಾವು ವಿಚಾರಣಾಧೀನ ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ಸಲ್ಲಿಸುವವರೆಗೆ ಶಾಸಕರಿಗೆ ಬಂಧನದಿಂದ ರಕ್ಷಣೆ ನೀಡಬೇಕು ಎಂದು ಕೋರಿದರು. ಆದರೆ, ಇದಕ್ಕೆ ನಿರಾಕರಿಸಿದ ನ್ಯಾಯಮೂರ್ತಿಗಳು, ಎಲ್ಲವನ್ನೂ ಆದೇಶದಲ್ಲಿ ವಿವರಿಸಲಾಗಿದೆ ಎಂದು ಹೇಳುವ ಮೂಲಕ ರಕ್ಷಣೆ ಅವಧಿಯನ್ನು ವಿಸ್ತರಿಸಲು ಒಪ್ಪಲಿಲ್ಲ. ಇದರಿಂದಾಗಿ ಶಾಸಕರಿಗೆ ಸದ್ಯ ಬಂಧನದ ಭೀತಿ ಎದುರಾಗಿದೆ.

ಇದೇ ಪ್ರಕರಣದಲ್ಲಿ ಬೈರತಿ ಬಸವರಾಜು ಹಾಗೂ ಇತರ ಆರೋಪಿಗಳ ವಿರುದ್ಧ ಸಿಐಡಿ ಮುಖ್ಯಸ್ಥರು 'ಕರ್ನಾಟಕ ಸಂಘಟಿತ ಅಪರಾಧಗಳ ನಿಯಂತ್ರಣ ಕಾಯ್ದೆ' (ಕೋಕಾ) ಅನ್ವಯಿಸಿ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿದೆ. ಕೊಲೆ ಪ್ರಕರಣದ ಎಫ್‌ಐಆರ್ ರದ್ದು ಕೋರಿ ಬೈರತಿ ಬಸವರಾಜು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಈ ಮಹತ್ವದ ತೀರ್ಪು ನೀಡಲಾಗಿದೆ. ಕೋಕಾ ಕಾಯ್ದೆ ರದ್ದಾಗಿರುವುದರಿಂದ ಪ್ರಕರಣದ ಗಂಭೀರತೆ ಕೊಂಚ ಕಡಿಮೆಯಾದಂತಾಗಿದೆ. ಅಲ್ಲದೆ, ಈಗಾಗಲೇ ಜೈಲಿನಲ್ಲಿರುವ ಇತರ ಆರೋಪಿಗಳಿಗೆ ಜಾಮೀನು ಪಡೆಯಲು ಇದು ಹಾದಿ ಸುಗಮ ಮಾಡಿಕೊಟ್ಟಂತಾಗಿದೆ.

ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಮತ್ತೆ 30 ಮೊಬೈಲ್ ಜಪ್ತಿ

ಬೆಂಗಳೂರು, ಡಿ.19– ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವಿವಿಧ ಬ್ಯಾರಕ್‌ಗಳಲ್ಲಿ ಗುರುವಾರ ರಾತ್ರಿ ನಡೆದ ತಪಾಸಣೆ ವೇಳೆ ಇನ್ನು 30 ಮೊಬೈಲ್ ಫೋನ್‌ಗಳು ಪತ್ತೆಯಾಗಿವೆ ಎಂದು ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆಯ ಮಹಾನಿರ್ದೇಶಕ ಅಲೋಕ್ ಕುಮಾರ್ ತಿಳಿಸಿದ್ದಾರೆ. ಕಳೆದ ಕೆಲವು ದಿನಗಳಿಂದ ಜೈಲಿನ ವಿವಿಧ ಬ್ಯಾರಕ್‌ಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಲಾಗುತ್ತಿದೆ. ಎಸ್‌ಪಿ ಅಂಶುಕುಮಾರ್ ಹಾಗೂ ಜೈಲರ್ ಶಿವಕುಮಾರ್ ನೇತೃತ್ವದ ತಂಡವು ಗುರುವಾರ ರಾತ್ರಿಯೂ ತಪಾಸಣೆ ನಡೆಸಿತು. ಮುಂದಿನ ದಿನಗಳಲ್ಲೂ ಇದೇ ರೀತಿಯ ಕಾರ್ಯಾಚರಣೆ ನಡೆಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಾವಳಿಗೆ ಗ್ರೀನ್ ಸಿಗ್ನಲ್

17 ಅಂಶಗಳ ಮಾರ್ಗಸೂಚಿ ಸಿದ್ಧ

ಬೆಂಗಳೂರು, ಡಿ.19–ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಗಳನ್ನು ಪುನರಾರಂಭಿಸಲು ಅಂತಿಮವಾಗಿ ಗ್ರೀನ್ ಸಿಗ್ನಲ್ ದೊರೆತಿದೆ. ಆರ್‌ಸಿಬಿ ತಂಡದ ವಿಜಯೋತ್ಸವದ ಸಂದರ್ಭದಲ್ಲಿ ಉಂಟಾದ ಕಾಲ್ತುಳಿತದ ಘಟನೆಯ ನಂತರ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಾವಳಿಗಳನ್ನು ಆಯೋಜಿಸುವುದಕ್ಕೆ ಅನುಮತಿ ನಿರಾಕರಿಸಲಾಗಿತ್ತು. ಇದೀಗ ನಗರ ಪೊಲೀಸರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಕಟ್ಟುನಿಟ್ಟಾದ 17 ಅಂಶಗಳ ಮಾರ್ಗಸೂಚಿಯನ್ನು ಸಿದ್ಧಪಡಿಸಿ ಕ್ರಿಕೆಟ್ ಪಂದ್ಯಗಳ ಆಯೋಜನೆಗೆ ಅನುಮತಿ ನೀಡಲು ಸಜ್ಜಾಗಿದ್ದಾರೆ.

ಗೃಹ ಇಲಾಖೆ ಸಿದ್ಧಪಡಿಸಿರುವ ಷರತ್ತುಗಳ ಕುರಿತು ಕೆಎಸ್‌ಸಿಎ ಪದಾಧಿಕಾರಿಗಳು ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಅವರ ನೇತೃತ್ವದಲ್ಲಿ ಗೃಹ ಸಚಿವರನ್ನು ಭೇಟಿ ಮಾಡಿ ಚರ್ಚಿಸಲಿದ್ದಾರೆ. ನಗರ ಪೊಲೀಸ್ ಆಯುಕ್ತರು ಸಮಿತಿ ವರದಿಯ ಶಿಫಾರಸ್ಸುಗಳನ್ನು ಆಧರಿಸಿ



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ

ಕಾಲ್ತುಳಿತದಂತಹ ಘಟನೆಗಳು ಪುನರಾವರ್ತನೆಯಾಗದಂತೆ ತಡೆಯಲು 17 ಮಾರ್ಗಸೂಚಿಗಳನ್ನು ಸಿದ್ದಪಡಿಸಿದ್ದಾರೆ. ಕೆಎಸ್‌ಸಿಎ ಈ ಷರತ್ತುಗಳನ್ನು ಈಡೇರಿಸಿದ ತಕ್ಷಣವೇ ಪಂದ್ಯಗಳನ್ನು ಆಯೋಜಿಸಲು ಅನುಮತಿ ನೀಡಲಾಗುವುದು.

ಮಾರ್ಗಸೂಚಿಯಲ್ಲಿ ಏನಿದೆ: 33 ಸಾವಿರ ಸಾಮರ್ಥ್ಯದ ಕ್ರೀಡಾಂಗಣದ ಸುತ್ತ ಪಾರ್ಕಿಂಗ್ ಪಿಕ್ ಅಂಡ್ ಡ್ರಾಪ್‌ಗೆ ವ್ಯವಸ್ಥೆ ಮಾಡಬೇಕು. ಪ್ರವೇಶ ದ್ವಾರಗಳು ಫುಟ್‌ಪಾತ್‌ಗಳ ಮೇಲೆಯೇ ಇರುವುದರಿಂದ ಪ್ರೇಕ್ಷಕರು ಕ್ಯೂ ನಿಲ್ಲಲು ಕೆಎಸ್‌ಸಿಎ ಸ್ವತ್ತಿನಲ್ಲಿ ಪ್ರತ್ಯೇಕ ವ್ಯವಸ್ಥೆ ಮಾಡಬೇಕು. ಕಿರಿದಾದ ಗೇಟ್‌ಗಳನ್ನು ಕನಿಷ್ಠ 6 ಅಡಿ ಅಗಲ, ಉಬ್ಬು ತಗ್ಗು, ಮೆಟ್ಟಿಲುಗಳನ್ನು ಸರಿಪಡಿಸಿ, ಎಂಟ್ರಿ–ಎಕ್ಸಿಟ್ ಸುಗಮಗೊಳಿಸಬೇಕು. ಅಂತರಾಷ್ಟ್ರೀಯ ಪಂದ್ಯಾವಳಿಗಳ ವೇಳೆ ಮಹಿಳೆಯರು, ಮಕ್ಕಳ ಪ್ರವೇಶ ನಿರ್ಗಮನಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಬೇಕು. ತುರ್ತು ಪರಿಸ್ಥಿತಿ ನಿಯಮಗಳಂತೆ ಆಂಬುಲೆನ್ಸ್‌ಗೆ ಪ್ರತ್ಯೇಕ ಮಾರ್ಗ, ಮೆಡಿಕಲ್ ಎಮರ್ಜೆನ್ಸಿ ತಂಡಗಳ ಶಾಶ್ವತ ವ್ಯವಸ್ಥೆ ಮಾಡಬೇಕು. ಅಗ್ನಿಶಾಮಕ ದಳ, ವಿದ್ಯುತ್ ಇಲಾಖೆಯಿಂದ ಆಡಿಟ್ ಮಾಡಿಸಿ, ವರದಿ ಪಡೆಯಬೇಕು. ಸುರಕ್ಷತೆ ದೃಷ್ಟಿಯಿಂದ ಯೂನಿಕ್ ಐಡಿ ಚೆಕಿಂಗ್, ಬಾಂಬ್ ನಿಷ್ಕ್ರಿಯ ದಳ, ಮೆಟಲ್ ಡಿಟೆಕ್ಟರ್ ಅಳವಡಿಸಿ ನುರಿತ ಸಿಬ್ಬಂದಿ ತರಬೇತಿ ಸಿಬ್ಬಂದಿ ನೇಮಕ ಮಾಡಬೇಕು. ಆಟಗಾರರಿಗೆ ಪ್ರತ್ಯೇಕವಾಗಿ ಪ್ರವೇಶ ಮತ್ತು ನಿರ್ಗಮನ ಮಾರ್ಗಗಳನ್ನು ಕಾಯ್ದಿರಿಸಬೇಕು. ತುರ್ತು ಪರಿಸ್ಥಿತಿ ವೇಳೆ ಸಾರ್ವಜನಿಕರಿಗೆ ಸೇಫ್ಟಿ ಪಾಯಿಂಟ್, ಸೇಫ್ಟಿ ಎಕ್ಸಿಟ್‌ಗೆ ಅಂತರಾಷ್ಟ್ರೀಯ ಮಾನದಂಡಗಳ ಯೋಜನೆ ತಯಾರಿಸಬೇಕು. ಪ್ರವೇಶ ದ್ವಾರಗಳ ಬಳಿ ಬ್ಯಾಗೇಜ್ ಸ್ಕ್ಯಾನರ್‌ಗಳನ್ನು ಅಳವಡಿಸಿ, ಸಿಸಿಟಿವಿ ಕಣ್ಗಾವಲಿನಲ್ಲಿ ದೀರ್ಘಾವಧಿ ಸ್ಟೋರೇಜ್ ವ್ಯವಸ್ಥೆ ಮಾಡಬೇಕು. ಕೆಲಸಗಾರರು, ಸೆಕ್ಯೂರಿಟಿ ಗಾರ್ಡ್, ಮಳಿಗೆ ಇಡುವವರ ಬಗ್ಗೆ ಪೊಲೀಸ್ ವೆರಿಫಿಕೇಷನ್ ಸರ್ಟಿಫಿಕೇಟ್ ಜೊತೆ ಸೆಕ್ಯೂರಿಟಿ ಏಜೆನ್ಸಿಗಳ ಲೈಸೆನ್ಸ್ ಪಡೆಯಬೇಕು. ಪಂದ್ಯದ ವೇಳೆ ಒಳಗಡೆ ಮಾರಾಟ ಮಾಡುವ ತಿಂಡಿ, ತಿನಿಸುಗಳ ಪರಿಶೀಲನೆಗೆ ನಿರ್ದಿಷ್ಟ ಮಾನದಂಡ ನಿಗದಿಪಡಿಸಬೇಕು. ಸಾರ್ವಜನಿಕ ಸಾರಿಗೆ ಮೂಲಕ ಬರುವ ಪ್ರೇಕ್ಷಕರ ಪ್ರವೇಶ ಮತ್ತು ನಿರ್ಗಮನಕ್ಕೆ ಸರಿಯಾದ ವ್ಯವಸ್ಥೆ ಮಾಡಬೇಕು. ಅಂತರಾಷ್ಟ್ರೀಯ ಗುಣಮಟ್ಟದ ಗುಂಪು ನಿರ್ವಹಣೆ ಮೂಲಭೂತ ಸೌಕರ್ಯಗಳ ವ್ಯವಸ್ಥೆ ಮಾಡಬೇಕು. ಪ್ರೇಕ್ಷಕರ ಪ್ರವೇಶ ಸಂಖ್ಯೆ ನಿಖರತೆಗಾಗಿ ವ್ಯವಸ್ಥೆ ಮಾಡಬೇಕು. ಟಿಕೆಟ್ ವಿಚಾರಣೆ, ಮಾರಾಟ, ವೇಟಿಂಗ್ ಮಾಡುವವರಿಗೆ ಪ್ರತ್ಯೇಕ ಸ್ಥಳಗಳನ್ನು ವ್ಯವಸ್ಥೆ ಮಾಡಬೇಕು ಹಾಗೂ ಇನ್ನಿತರ ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗಿದೆ

ಪೊಲೀಸ್ ಠಾಣೆಯಲ್ಲಿ ದಾಖಲಾಗುವ ಪ್ರಕರಣಗಳಲ್ಲಿ ಸಾಕ್ಷಿದಾರರನ್ನಾಗಿ ಪರಿಗಣಿಸಲು ಮಾನದಂಡವಿಲ್ಲ

ಎಂಎಲ್‌ಸಿ ವಿವೇಕಾನಂದರಿಗೆ ಗೃಹ ಸಚಿವರ ಉತ್ತರ

ಬೆಳಗಾವಿ, ಡಿ.19– ಪೊಲೀಸ್ ಠಾಣೆಗಳಲ್ಲಿ ದಾಖಲಾಗುವ ಪ್ರಕರಣಗಳಿಗೆ ಸಾಕ್ಷಿದಾರರಾಗಿ ಪರಿಗಣಿಸಲು ಪ್ರತ್ಯೇಕ ಮಾನದಂಡವಿಲ್ಲ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ತಿಳಿಸಿದ್ದಾರೆ.



ವಿವೇಕಾನಂದ

ವಿಧಾನಪರಿಷತ್‌ನಲ್ಲಿ ಜೆಡಿಎಸ್ ಸದಸ್ಯ ಕೆ. ವಿವೇಕಾನಂದ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಪ್ರತ್ಯೇಕ ಮಾನದಂಡವಿಲ್ಲವಾದರೂ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023 ಕಲಂ 179 ಮತ್ತು 180ರ ಪ್ರಕಾರ ಪ್ರಕರಣದ ಘಟನೆಯ ಬಗ್ಗೆ ಮಾಹಿತಿ ಇರುವ ವ್ಯಕ್ತಿಗಳನ್ನು, ಪ್ರತ್ಯಕ್ಷ ಸಾಕ್ಷಿದಾರರನ್ನು, ಸಾಂದರ್ಭಿಕ ಸಂಗತಿಗಳನ್ನು ಅರಿತಿರುವ ವ್ಯಕ್ತಿಗಳನ್ನು ಸಾಕ್ಷಿಗಳನ್ನಾಗಿ ವಿಚಾರಿಸಲು ತನಿಖಾಧಿಕಾರಿಗಳಿಗೆ ಅವಕಾಶ ಮಾಡಿಕೊಡಲಾಗಿದೆ ಎಂದು ತಿಳಿಸಿದ್ದಾರೆ.

ವಿಧಾನಪರಿಷತ್ ಸದಸ್ಯ ವಿವೇಕಾನಂದ ಅವರು, ರಾಜ್ಯದ ಪೊಲೀಸ್ ಠಾಣೆಗಳಲ್ಲಿ ದಾಖಲಾಗುವ ಪ್ರಕರಣಗಳಿಗೆ ಸಾಕ್ಷಿಗಳನ್ನಾಗಿ ಪರಿಗಣಿಸಲು ಪ್ರತ್ಯೇಕ ಮಾನದಂಡಗಳೇನು? ಪಂಚನಾಮೆ ಮಾಡಿಸಲು ಸರ್ಕಾರಿ ಅಧಿಕಾರಿಗಳನ್ನೇ ಪರಿಗಣಿಸಲು ನಿಯಮವಿದೆಯೇ? ಎಂದು ಕೇಳಿದರು. ಅದೇ ವೇಳೆ ಪಂಚನಾಮೆ ಮಾಡಲು ಶಾಲಾ–ಕಾಲೇಜು ಅವಧಿಯಲ್ಲಿ ಕರ್ತವ್ಯನಿರತ ಬೋಧಕರನ್ನು ಕರೆದುಕೊಂಡು ಹೋಗುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂಬ ಪ್ರಶ್ನೆಗೆ, ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಗೃಹ ಸಚಿವರು ಉತ್ತರಿಸಿದ್ದಾರೆ.

ಪೌರಕಾರ್ಮಿಕನ ಮೇಲೆ ಉದ್ಯಮಿಯಿಂದ ಹಲ್ಲೆ ಆರೋಪ

ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು, ಡಿ.19– ನಿಗದಿತ ಕೆಲಸದ ನಂತರ ಉದ್ದಿಮೆ ಪರವಾನಗಿ ಬಗ್ಗೆ ಮಾಹಿತಿ ನೀಡುತ್ತಿದ್ದ ಪೌರಕಾರ್ಮಿಕರೊಬ್ಬರಿಗೆ ಅಂಗಡಿಯೊಂದರ ಮಾಲೀಕ ಹಲ್ಲೆ ನಡೆಸಿರುವ ಘಟನೆ ಮೈಸೂರಿನ ಜನತಾನಗರದಲ್ಲಿ ಶುಕ್ರವಾರ ನಡೆದಿದೆ.



ವೆಂಕಟೇಶ್

ವಲಯ ಕಚೇರಿ 3ರ ವ್ಯಾಪ್ತಿಯ 44ನೇ ವಾರ್ಡ್‌ನಲ್ಲಿ ಓಓಡಿ ಮೇಸ್ತ್ರಿ(ಪೌರಕಾರ್ಮಿಕ)ಯಾಗಿ ಕಾರ್ಯನಿರ್ವಹಿಸುವ ವೆಂಕಟೇಶ್ ಮೇಲೆ ಹಲ್ಲೆ ನಡೆಸಿದ ಆರೋಪದಡಿ ಜನತಾನಗರ ಎಸ್‌ಸಿ ರಸ್ತೆಯ ಮೆಟ್ರೋ ಹೋಂ ಅಪ್ಲೇಯನ್ಸ್ ಮಾಲೀಕ ರವ್‌ಜಾನ್ ಸಾಬ್ ವಿರುದ್ಧ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಗದಿತ ಕಾರ್ಯದ ಬಳಿಕ ಬೆಳಗ್ಗೆ 11.55ರ ಸುಮಾರಿಗೆ ಅಂಗಡಿಗಳ ಬಳಿ ಹೋಗಿ ಉದ್ದಿಮೆ ಪರವಾನಗಿ ಬಗ್ಗೆ ಮಾಹಿತಿ ನೀಡುತ್ತಿದ್ದೆ. ಹಾಗೆಯೇ ಮೆಟ್ರೋ ಹೋಂ ಅಪ್ಲೇಯನ್ಸ್ ಬಳಿ ಹೋಗಿ ಉದ್ದಿಮೆ ರಹದಾರಿ ಬಗ್ಗೆ ಮಾಹಿತಿ ಕೇಳಿದೆ. ಅಷ್ಟಕ್ಕೆ ಅಂಗಡಿ ಮಾಲೀಕ, ಏಕಾಏಕಿ ನನ್ನ ಮೇಲೆ ಹಲ್ಲೆ ನಡೆಸಿದರು. ಪರಿಣಾಮ ಮೂಗು, ಬಾಯಿ, ತುಟಿಗೆ ಗಾಯವಾಗಿದೆ. ನಂತರ ಮತ್ತೆ ನನ್ನನ್ನು ಕೆಳಗೆ ಬೀಳಿಸಿ, ಕಾಲಿನಿಂದ ಒದ್ದು ಹಲ್ಲೆ ನಡೆಸಿದರು. ಅವಾಚ್ಯ ಶಬ್ಧಗಳಿಂದ ನಿಂದಿಸಿ, ಕೊಲೆ ಬೆದರಿಕೆ ಹಾಕಿದರು ಎಂದು ವೆಂಕಟೇಶ್, ಪೊಲೀಸರಿಗೆ ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ.

ಬೆಳಗಾವಿ ಅಧಿವೇಶನಕ್ಕೆ ತೆರೆ: ದ್ವೇಷ ಭಾಷಣದ ವಿರುದ್ಧ ಮಸೂದೆ ಸೇರಿ 22 ವಿಧೇಯಕಗಳಿಗೆ ಅನುಮೋದನೆ

ಬೆಳಗಾವಿ, ಡಿ.19– ಬೆಳಗಾವಿಯ ಸುವರ್ಣ ಸೌಧದಲ್ಲಿ 10 ದಿನಗಳ ಕಾಲ ನಡೆದ ಚಳಿಗಾಲದ ಅಧಿವೇಶನ ಶುಕ್ರವಾರ ಮುಕ್ತಾಯಗೊಂಡಿದ್ದು, ಉತ್ತರ ಕರ್ನಾಟಕದ ಚರ್ಚೆ, ಗದ್ದಲ, ಆರೋಪ ಪ್ರತ್ಯಾರೋಪ, ಕಾಲೆಳೆಯುವ ಪ್ರಸಂಗ, ನಾಯಕತ್ವ ಬದಲಾವಣೆ ಗೊಂದಲ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಚರ್ಚೆ ನಡೆದಿದೆ. ಜೊತೆಗೆ ದ್ವೇಷ ಭಾಷಣ, ಸಾಮಾಜಿಕ ಬಹಿಷ್ಕಾರ ವಿರೋಧಿ ಮಸೂದೆ ಸೇರಿ 22 ವಿಧೇಯಕಗಳು ಅಂಗೀಕಾರಗೊಂಡವು.

ಬೆಳಗಾವಿ ಅಧಿವೇಶನದ ಕೊನೆಯ ದಿನ ಸಿಎಂ ಸಿದ್ದರಾಮಯ್ಯ ಉತ್ತರ ನೀಡಿದರು. ಆದರೆ ಯಾವುದೇ ವಿಶೇಷ ಪ್ಯಾಕೇಜ್ ಘೋಷಣೆ ಆಗದೆ ಇರುವುದು ಆ ಭಾಗದ ಶಾಸಕರಲ್ಲೂ ನಿರಾಶೆ ಮೂಡಿಸಿದಂತಿತ್ತು.

10 ದಿನಗಳ ಅಧಿವೇಶನದಲ್ಲಿ ಗಮನ ಸೆಳೆದಿದ್ದು ನಾಯಕತ್ವ ಬದಲಾವಣೆ ಗದ್ದಲ. ಸಿಎಂ ಸಿದ್ದರಾಮಯ್ಯ ಅವರ ಕಾಲೆಳೆಯುತ್ತಾ ನಾಯಕತ್ವ ಬದಲಾವಣೆ ವಿಚಾರವನ್ನು ಬಿಜೆಪಿ ನಾಯಕರು ಪ್ರಸ್ತಾಪ ಮಾಡಿದರು. ಈ ವೇಳೆ ಇಂದು, ಮುಂದೂ ನಾನೇ ಸಿಎಂ ಎಂದು ಸಿದ್ದರಾಮಯ್ಯ ಘೋಷಣೆ ಮಾಡುವ ಮೂಲಕ ಗಮನ ಸೆಳೆದರು. ಕೊನೆಯ ದಿನವಾದ ಶುಕ್ರವಾರದಂದೂ ಸದನದಲ್ಲಿ ನಾಯಕತ್ವ ಚರ್ಚೆ ನಡೆಯಿತು. ಈ ಸಂದರ್ಭದಲ್ಲಿ ಹೈಕಮಾಂಡ್ ನನ್ನ ಪರವಾಗಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಬೆಳಗಾವಿ ಅಧಿವೇಶನದಲ್ಲಿ ಒಟ್ಟು 22 ವಿಧೇಯಕ ಮಂಡನೆ ಮಾಡಿ ಅನುಮೋದನೆ ಪಡೆಯಲಾಯಿತು. ಅಲ್ಲದೆ ಪೂರಕ ಅಂದಾಜು ಕೂಡ ಮಂಡನೆ ಮಾಡಲಾಯಿತು. ಧನ ವಿನಿಯೋಗ ಸಂಪುಟ 1 ಮತ್ತು ಸಂಪುಟ 2 ಎರಡನ್ನೂ ಮಂಡಿಸಲಾಗಿದೆ. 134 ಲಿಖಿತ ಮೂಲಕ ಪ್ರಶ್ನೆಗೆ ಉತ್ತರ, 1750 ಗಮನ ಸೆಳೆಯುವ ಪ್ರಶ್ನೆಗೆ ಉತ್ತರ ನೀಡಲಾಗಿದೆ. ಏಮ್ಸ್ ಸಂಸ್ಥೆ ಉತ್ತರ ಕರ್ನಾಟಕ ಭಾಗದಲ್ಲಿ ಸ್ಥಾಪನೆಗೆ ಕೇಂದ್ರಕ್ಕೆ ಒತ್ತಾಯಿಸುವ ಬಗ್ಗೆ ಚರ್ಚೆಯಾಗಿದೆ.

ಚಪ್ಪಲಿ ಹೊರಗೆ ಬಿಡಿ ಎಂದಿದ್ದಕ್ಕೆ ತಂದೆ–ಮಗನಿಂದ ವೈದ್ಯರ ಮೇಲೆ ಹಲ್ಲೆ ಆರೋಪ

ಎರಡೂ ಕಡೆಯಿಂದ ದೂರು–ಪ್ರತಿದೂರು ದಾಖಲು

ಮೈಸೂರು, ಡಿ.19– ಕ್ಷುಲ್ಲಕ ಕಾರಣಕ್ಕೆ ವೈದ್ಯರ ಮೇಲೆ ಹಲ್ಲೆ ನಡೆಸಿರುವ ಘಟನೆ ಮೈಸೂರಿನ ಸಾತಗಳ್ಳಿಯಲ್ಲಿ ಗುರುವಾರ ನಡೆದಿದೆ.

ಸಾತಗಳ್ಳಿಯಲ್ಲಿರುವ ಶಿಶು ಆಸ್ಪತ್ರೆಯ ವೈದ್ಯ ಡಾ.ಅನೂಪ್ ಅವರ ಮೇಲೆ ಹಲ್ಲೆ ನಡೆಸಿರುವ ಆರೋಪದಡಿ ರುಬಿಯಾಜ್ ಷರೀಫ್ ಹಾಗೂ ಆತನ ತಂದೆ ವಿರುದ್ಧ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರುಬಿಯಾಜ್ ಷರೀಫ್ ಅವರ ಮೂರು ವರ್ಷದ ಮಗುವನ್ನು ಶಿಶು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಗುರುವಾರ ಬೆಳಗ್ಗೆ 11.45ರ ಸಮಯದಲ್ಲಿ ರುಬಿಯಾಜ್ ಷರೀಫ್ ತನ್ನ ತಂದೆಯೊಂದಿಗೆ ಆಸ್ಪತ್ರೆಗೆ ಬಂದಿದ್ದರು. ಈ ವೇಳೆ ಸಿಬ್ಬಂದಿ, ಮಧ್ಯಾಹ್ನ 12.30ಕ್ಕೆ ಸಂದರ್ಶಕರ ಭೇಟಿಯ ಸಮಯದಲ್ಲಿ ಬನ್ನಿ, ನಿಮ್ಮ ಪಾದರಕ್ಷೆಗಳನ್ನು ಹೊರಗೆ ಬಿಟ್ಟು ಬನ್ನಿ ಎಂದಿದ್ದಾರೆ. ಇದರಿಂದ ಕುಪಿತಗೊಂಡ ರುಬಿಯಾಜ್ ಹಾಗೂ ಅವರ ತಂದೆ ಆಸ್ಪತ್ರೆ ಸಿಬ್ಬಂದಿ ಹಾಗೂ ಡಾ.ಅನೂಪ್ ಅವರೊಂದಿಗೆ ವಾಗ್ವಾದ ನಡೆಸಿದ್ದಾರೆ.

ಇದು ಮಕ್ಕಳ ಆಸ್ಪತ್ರೆ ಆಗಿರುವುದರಿಂದ ಸುರಕ್ಷತೆ ದೃಷ್ಟಿಯಿಂದ ಪಾದರಕ್ಷೆಗಳನ್ನು ಹೊರಗೆ ಬಿಟ್ಟು ಬರಬೇಕು ಎಂದು ಹೇಳಿದೆವು. ಹಾಗಾದರೆ ನೀವು ಏಕೆ ಪಾದರಕ್ಷೆ ಹಾಕಿಕೊಂಡಿದ್ದೀರಿ ಎಂದು ಮಗುವಿನ ತಂದೆ ಹಾಗೂ ತಾತ ಪ್ರಶ್ನಿಸಿದರು. ಇವು ಆಸ್ಪತ್ರೆಯೊಳಗೆ ಮಾತ್ರ ಧರಿಸುವ ಪಾದರಕ್ಷೆ, ಹೊರಗಿನಿಂದ ಹಾಕಿಕೊಂಡು ಬಂದಿದ್ದಲ್ಲ ಎಂದು ತಿಳಿಸಿದೆವು. ಹಾಗಾದರೆ ಹೊರಗಿನಿಂದ ಧರಿಸಿಕೊಂಡು ಬಂದಿದ್ದ ಪಾದರಕ್ಷೆ ಎಲ್ಲಿವೆ ತೋರಿಸಿ ಎಂದರು. ನಾನು ಹೊರಗೆ ಕರೆದೊಯ್ದು, ಸ್ಟ್ಯಾಂಡ್‌ನಲ್ಲಿದ್ದ ನನ್ನ ಪಾದರಕ್ಷೆ ಕೈಯಲ್ಲಿಡಿದು ತೋರಿಸಿದೆ. ಅಷ್ಟಕ್ಕೆ ಮಗುವಿನ ತಂದೆ ಹಲ್ಲೆ ನಡೆಸಿದರು ಎಂದು ಡಾ.ಅನೂಪ್ ಆರೋಪಿಸಿದ್ದಾರೆ.

ಡಾ.ಅನೂಪ್ ಅವರ ಮೇಲೆ ಹಲ್ಲೆ ನಡೆಸಿರುವ ದೃಶ್ಯ, ಆಸ್ಪತ್ರೆ ಹೊರಗಿನ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಈ ಸಂಬಂಧ ವೈದ್ಯರು ನೀಡಿದ ದೂರಿನಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಗಳಿಗೆ ನೋಟೀಸ್ ನೀಡಿದ್ದಾರೆ. ಇನ್ನು ಆರೋಪಿ ರುಬಿಯಾಜ್ ಕೂಡ ಪ್ರತಿದೂರು ದಾಖಲಿಸಿದ್ದು, ವೈದ್ಯ ಡಾ.ಅನೂಪ್ ಪಾದರಕ್ಷೆ ತೋರಿಸಿ, ಅನುಚಿತವಾಗಿ ವರ್ತಿಸಿದ್ದಾಗಿ ಆರೋಪಿಸಿದ್ದಾರೆ.

ಒಳಮೀಸಲಾತಿ ಸಂಬಂಧ ಮಸೂದೆ ಅಂಗೀಕರಿಸಿದರೂ ಯಾವುದರಲ್ಲೂ ಸ್ಪಷ್ಟತೆ ಇಲ್ಲ

ಸರ್ಕಾರದಿಂದಲೇ ಗೊಂದಲ ಸೃಷ್ಟಿ: ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ, ಹಿರಿಯ ವಕೀಲ ಅರುಣ್‌ಕುಮಾರ್ ಆರೋಪ

ಮೈಸೂರು, ಡಿ.19– ಪರಿಶಿಷ್ಟ ಜಾತಿ ಒಳಮೀಸಲಾತಿ ವಿಚಾರವಾಗಿ ಸ್ಪಷ್ಟತೆಯೇ ಇಲ್ಲ. ಈ ನಡುವೆ ಇದನ್ನು ಜಾರಿಗೊಳಿಸುವ ಬಿಲ್ ಅನ್ನು ವಿಧಾನಸಭೆಯಲ್ಲಿ ಅಂಗೀಕರಿಸಿರುವುದು ಸರಿಯಲ್ಲ ಎಂದು ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷರೂ ಆದ ಮೈಸೂರಿನ ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ಅಭಿಪ್ರಾಯಿಸಿದ್ದಾರೆ.



ಈ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಪ್ರತಿಕ್ರಿಯಿಸಿರುವ ಅವರು, ಹೊಸ ಬ್ಯಾಕ್‌ಲಾಗ್ ನೇಮಕಾತಿಯಲ್ಲಿ ಒಳಮೀಸಲಾತಿ ಅನ್ವಯಿಸಿರುವುದಾಗಿ ಸರ್ಕಾರ ತಿಳಿಸಿದ್ದು, ಇನ್ನುಳಿದಂತೆ ಹುದ್ದೆಗಳಲ್ಲಿ ಬಡ್ತಿ, ಉನ್ನತ ಶಿಕ್ಷಣ ದಾಖಲಾತಿ, ಉನ್ನತ ಹುದ್ದೆಗಳು, ಕೆನೆಪದರದ ಸ್ಥಾನಗಳು ಸೇರಿದಂತೆ ಯಾವುದಕ್ಕೆಲ್ಲಾ ಇದು ಅನ್ವಯವಾಗುತ್ತದೆ ಎಂಬ ಸ್ಪಷ್ಟತೆಯನ್ನೇ ನೀಡಿಲ್ಲ. ಹೀಗಿರುವಾಗ ವಿಧಾನಸಭೆಯಲ್ಲಿ ಬಿಲ್ ಅಂಗೀಕರಿಸಿರುವುದು ಕಾನೂನು ಬಾಹಿರವೆನಿಸುತ್ತದೆ ಎಂದಿದ್ದಾರೆ.

ಎಲ್ಲಾ ಕ್ಷೇತ್ರಗಳಿಗೂ ಒಳಮೀಸಲಾತಿ ಅನ್ವಯವಾಗುತ್ತದೆ ಎಂದು ನಿಖರವಾಗಿ ಘೋಷಿಸಿದ್ದರೆ ಯಾವುದೇ ಗೊಂದಲ ಇರುತ್ತಿರಲಿಲ್ಲ. ಆದರೆ ಸರ್ಕಾರ ನಾವು ಹೋರಾಟ ಮಾಡಿದಂತೆಲ್ಲಾ ಆಯಾಯ ವಿಚಾರಕ್ಕೆ ಸಂಬಂಧಪಟ್ಟಂತೆ ಮಾತ್ರ ನಿರ್ಣಯ ತೆಗೆದುಕೊಳ್ಳುವ ಮೂಲಕ ರಾಜಕೀಯ ಲಾಭಕ್ಕೆ ಮುಂದಾಗಿದೆ. ಮಾದಿಗ ಸಮಾಜವನ್ನು ಇನ್ನೆಷ್ಟು ತುಳಿಯುತ್ತೀರಿ. ಸಮಸಮಾಜದ ನಿರ್ಮಾಣ ಎನ್ನುವುದು ಕೇವಲ ಭಾಷಣಕ್ಕಷ್ಟೇ ಮೀಸಲಾಗಿದೆಯೇ ಎಂದು ಪ್ರಶ್ನಿಸಿದ್ದಾರೆ.

ಹಿಂದುತ್ವವೇ ಅಸ್ಪೃಶ್ಯತೆಗೆ ಪ್ರಮುಖ ಕಾರಣ ಎಂದು ಗಂಭೀರವಾಗಿ ಆರೋಪಿಸುತ್ತಿದ್ದ ನೀವು ಮಾಡುತ್ತಿರುವುದು ಮತ್ತೇನು?. ಎಕೆ, ಎಡಿ ಹಾಗೂ ಎಎ ಸಮುದಾಯಗಳು ಎರಡೂ ಕಡೆ ಮೀಸಲಾತಿ ಅನುಕೂಲ ಪಡೆಯುತ್ತಿದ್ದರು ಎಂದು ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರೇ ವಿಧಾನಸಭೆಯಲ್ಲಿ ಹೇಳಿದ್ದರು. ಆದರೆ ಈಗಲೂ ಅದನ್ನು ತಡೆಯುವ ನಿಟ್ಟಿನಲ್ಲಿ ಕ್ರಮವಾಗಿರುವ ಬಗ್ಗೆ ಸ್ಪಷ್ಟತೆ ಇಲ್ಲ. ಮಾದಿಗ ಸಮಾಜಕ್ಕೆ ಕಟ್ಟಕಡೆಯ ಸೌಲಭ್ಯ ಹಾಗೂ ಸವಲತ್ತುಗಳು ಸಿಗುವವರೆಗೂ ನಮ್ಮ ಹೋರಾಟ ಮುಂದುವರೆಯುತ್ತದೆ ಎಂದಿದ್ದಾರೆ.

ಹಾರ್ದಿಕ್–ತಿಲಕ್ ಅಬ್ಬರ, ವರುಣ್ ಕಮಾಲ್; ಭಾರತಕ್ಕೆ ಟಿ20 ಸರಣಿ

ಅಹಮದಾಬಾದ್, ಡಿ.19(ವಿವಿಹೆಚ್)– ಹಾರ್ದಿಕ್ ಪಾಂಡ್ಯ ಹಾಗೂ ತಿಲಕ್ ವರ್ಮಾ ಅವರ ಅಮೋಘ ಬ್ಯಾಟಿಂಗ್ ಬಲ ಹಾಗೂ ವರುಣ್ ಚಕ್ರವರ್ತಿ ಅವರ ಸ್ಪಿನ್ ಮೋಡಿಯಿಂದ ಹರಿಣ ಪಡೆಯನ್ನು 30 ರನ್‌ಗಳಿಂದ ಮಣಿಸಿದ ಭಾರತ 3–1 ಅಂತರದಿಂದ ಸರಣಿ ವಶಪಡಿಸಿಕೊಂಡಿತು.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂ ಗಣದಲ್ಲಿ ನಡೆದ 5ನೇ ಟಿ20 ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಿಲಕ್ ವರ್ಮಾ ಹಾಗೂ ಹಾರ್ದಿಕ್ ಪಾಂಡ್ಯ ಅಬ್ಬರದ ಬ್ಯಾಟಿಂಗ್ ನೆರವಿನಿಂದ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 231 ರನ್ ಕಲೆಹಾಕಿತು. ಈ ಸವಾಲಿನ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ದ.ಆಫ್ರಿಕಾ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 201 ರನ್ ಗಳಿಸಿ, ಸೋಲೊಪ್ಪಿಕೊಂಡಿತು.



ಟ್ರೋಫಿಯೊಂದಿಗೆ ಟೀಂ ಇಂಡಿಯಾ ಆಟಗಾರರ ಸಂಭ್ರಮ

ಭಾರತದ ಪರ ಸಂಜು ಸ್ಯಾಮ್ಸನ್ ಹಾಗೂ ಅಭಿಷೇಕ್ ಶರ್ಮಾ ಆರಂಭಿಕರಾಗಿ ಕಣಕ್ಕಿಳಿದು 63 ರನ್ ಜೊತೆಯಾಟವಾಡಿದರು. ಸ್ಯಾಮ್ಸನ್ 37 ರನ್ ಬಾರಿಸಿದರೆ, ಅಭಿಷೇಕ್ ಶರ್ಮಾ 34 ರನ್‌ಗಳಿಸಿ ಔಟಾದರು.

ನಾಯಕ ಸೂರ್ಯಕುಮಾರ್ ಯಾದವ್ 5 ರನ್ ಗಳಿಸಿ ಮತ್ತೊಮ್ಮೆ ನೆಲಕಚ್ಚಿದರು. ಬಳಿಕ ನಾಲ್ಕನೇ ವಿಕೆಟ್‌ಗೆ ಜೊತೆಯಾದ ತಿಲಕ್ ವರ್ಮಾ ಹಾಗೂ ಹಾರ್ದಿಕ್ ಪಾಂಡ್ಯ ಅಬ್ಬರಿಸಿ 105 ರನ್ ಜೊತೆಯಾಟವಾಡಿದರು. ತಿಲಕ್ ವರ್ಮಾ 42 ಎಸೆತಗಳಲ್ಲಿ 73 ರನ್ ಬಾರಿಸಿದರೆ, ಹಾರ್ದಿಕ್ ಪಾಂಡ್ಯ 25 ಎಸೆತಗಳಲ್ಲಿ 5 ಸಿಕ್ಸರ್ ಹಾಗೂ 5 ಬೌಂಡರಿ ಸಹಿತ 63 ರನ್ ಚಚ್ಚಿದರು. ಶಿವಂ ದುಬೆ ಅಜೇಯ 10 ರನ್ ಹಾಗೂ ಯಾವುದೇ ಎಸೆತ ಎದುರಿಸದ ಜಿತೇಶ್ ಶರ್ಮಾ ಅಜೇಯರಾಗಿ ಉಳಿದರು.

ದಕ್ಷಿಣ ಆಫ್ರಿಕಾ ಪರ ಕಾರ್ಬಿನ್ ಬಾಷ್ 2 ವಿಕೆಟ್, ಬಾರ್ಟ್ ಮನ್ ಹಾಗೂ ಜಾರ್ಜ್ ಲಿಂಡೆ ತಲಾ ಒಂದೊಂದು ವಿಕೆಟ್ ಪಡೆದರು.

ಭಾರತ ನೀಡಿದ ಬೃಹತ್ ಗುರಿ ಬೆನ್ನತ್ತಿದ ಹರಿಣ ಪಡೆ ವರುಣ್ ಚಕ್ರವರ್ತಿ ದಾಳಿಗೆ ತತ್ತರಿಸಿತು. ವರುಣ್ 4 ಓವರ್‌ನಲ್ಲಿ 53 ರನ್ ಕೊಟ್ಟು ಪ್ರಮುಖ 4 ವಿಕೆಟ್ ಕಿತ್ತು, ಎದುರಾಳಿ ತಂಡವನ್ನು ಕಾಡಿದರು. ಇವರಿಗೆ 2 ವಿಕೆಟ್ ಕಿತ್ತು ಬುಮ್ರಾ ಸಾಥ್ ನೀಡಿದರು.

ಇತ್ತ 35 ಎಸೆತಗಳಲ್ಲಿ 65ರನ್ ಗಳಿಸಿದ ಡಿಕಾಕ್ ತಂಡದ ಪರವಾಗಿ ಅತ್ಯಧಿಕ ಸ್ಕೋರರ್ ಆದರು. ಉಳಿದಂತೆ ಡುವಾಲ್ಡ್ ಬ್ರೇವಿಸ್ 31, ಡೇವಿಡ್ ಮಿಲ್ಲರ್ 18, ಲಿಂಡೆ 16, ಮಾರ್ಕೊ ಯಾನ್ಸನ್ 14 ರನ್ ಗಳಿಸಿದರು. ಭಾರತದ ಆಲ್‌ರೌಂಡರ್ ಆಟದ ಮುಂದೆ ದಿಟ್ಟ ಹೋರಾಟ ನೀಡಲಾಗದೇ ದಕ್ಷಿಣ ಆಫ್ರಿಕಾ ಸರಣಿ ಸೋಲನುಭವಿಸಿತು. ಟೀಂ ಇಂಡಿಯಾ ಪರ ಚಕ್ರವರ್ತಿ 4, ಬುಮ್ರಾ 2, ಅರ್ಶದೀಪ್ ಹಾಗೂ ಹಾರ್ದಿಕ್ ತಲಾ ಒಂದೊಂದು ವಿಕೆಟ್ ಪಡೆದರು.

ಕೊನೆಯ ಪಂದ್ಯದಲ್ಲಿ ಆಲ್‌ರೌಂಡರ್ ಪ್ರದರ್ಶನ ತೋರಿದ ಹಾರ್ದಿಕ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರೆ, ಸರಣಿಯುದ್ದಕ್ಕೂ ಉತ್ತಮ ಪ್ರದರ್ಶನ ತೋರಿದ ವರುಣ್ ಚಕ್ರವರ್ತಿ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಬಸವಮಾರ್ಗದಲ್ಲಿ 'ವಚನಗಳಲ್ಲಿ ವ್ಯಸನಮುಕ್ತ ಜೀವನ' ಕುರಿತು ವಿಶೇಷ ಉಪನ್ಯಾಸ

ಮೈಸೂರು, ಡಿ.19– ಶರಣ ಸಾಹಿತ್ಯ ತಾಲೂಕು ಪರಿಷತ್ತು ಮತ್ತು ಬಸವ ಮಾರ್ಗ ಫೌಂಡೇಷನ್ ವತಿಯಿಂದ ನಗರದ ಶ್ರೀರಾಂಪುರದಲ್ಲಿ ಇರುವ ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದಲ್ಲಿ ಶುಕ್ರವಾರ 'ವಚನಗಳಲ್ಲಿ ವ್ಯಸನಮುಕ್ತ ಜೀವನ' ಕುರಿತು ಎರಡನೇ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿತ್ತು.



ಶರಣ ಸಾಹಿತ್ಯ ತಾಲೂಕು ಪರಿಷತ್ತು ಮತ್ತು ಬಸವಮಾರ್ಗ ಫೌಂಡೇಷನ್ ವತಿಯಿಂದ ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದಲ್ಲಿ 'ವಚನಗಳಲ್ಲಿ ವ್ಯಸನಮುಕ್ತ ಜೀವನ' ಕುರಿತು ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಎಂ.ಆರ್.ಸತ್ಯನಾರಾಯಣ ಅವರು ಉದ್ಘಾಟಿಸಿದರು. ಪ್ರೊ.ಕೆ.ಅನಂತರಾಮು, ಎಸ್.ಬಸವರಾಜು, ಡಾ.ಹೆಳವರಹುಂಡಿ ಸಿದ್ದಪ್ಪ, ಎಂ.ಚಂದ್ರಶೇಖರ್, ಶರಣ ದೇವರಾಜು ಪಿ.ಚಿಕ್ಕಹಳ್ಳಿ(ದೇಚಿ) ಇತರರಿದ್ದರು.

ವಿಷಯ ಕುರಿತು ಹಿರಿಯ ವಿದ್ವಾಂಸ ಪ್ರೊ.ಕೆ.ಅನಂತರಾಮು ಮಾತನಾಡಿ, ಯಾರು ತಮಗಾಗಿ ಬದುಕುತ್ತಾರೋ ಅವರು ಸತ್ತಂತೆ, ಯಾರು ಇತರರಿಗಾಗಿ ಬದುಕುತ್ತಾರೋ ಅವರು ಮಾತ್ರ ಬದುಕುತ್ತಾರೆ. ಮಾನವ ಜನ್ಮದ ದೊಡ್ಡದು, ಪವಿತ್ರವಾದದ್ದು. ಇದನ್ನು ಸಾರ್ಥಕ ಪಡಿಸಿಕೊಳ್ಳಬೇಕು. ಅದಕ್ಕಾಗಿ ವ್ಯಸನಮುಕ್ತ ಜೀವನ ಮಾಡಬೇಕು ಎಂದು ಸಲಹೆ ನೀಡಿದರು.

ಯಾವುದೇ ವ್ಯಸನಕ್ಕೆ ನಾವು ಸಿಲುಕಿಕೊಳ್ಳಬಾರದು ಎಂದು ಬಸವಣ್ಣ ಅವರು ದೇವರು ಹತ್ತಿರ ಕೇಳಿಕೊಳ್ಳುತ್ತಾರೆ. ಲಿಂಗ ಪೂಜೆ, ದಾಸೋಹ, ಜಂಗಮ ಸಂಗದ ವ್ಯಸನಿಯನ್ನಾಗಿ ಮಾಡು ಎಂದು ಪರಿಪರಿಯಾಗಿ ಶಿವನನ್ನು ಬೇಡುತ್ತಾರೆ. ಹಾಗೆ ನಾವು ಕೂಡ ಒಳ್ಳೆಯ ವ್ಯಸನವನ್ನು ಮೈಗೂಡಿಸಿಕೊಳ್ಳಬೇಕು. ಅದರ ಹೊರತು ವ್ಯರ್ಥವಾದ ವ್ಯಸನಕ್ಕೆ ಬಲಿಯಾಗಬಾರದು ಎಂದು ಕಿವಿಮಾತು ಹೇಳಿದರು.

ಹಿರಿಯ ಪತ್ರಕರ್ತ ಎಂ.ಆರ್.ಸತ್ಯನಾರಾಯಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಬಸವಾದಿ ಶರಣರು ವ್ಯಸನಮುಕ್ತ ಜೀವನಕ್ಕೆ ದೊಡ್ಡ ಸಂದೇಶ ಸಾರಿದರು. ಅವರ ಆಶಯಗಳನ್ನು ಪಾಲಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ವ್ಯಸನಗಳು ಸಮಾಜದ ದಿಕ್ಕನ್ನು ತಪ್ಪಿಸುತ್ತಿದೆ. ಯುವ ಸಮುದಾಯ ದಾರಿತಪ್ಪುತ್ತಿದೆ. ಯುವಕರು ದುಶ್ಚಟಕ್ಕೆ ಬಲಿಯಾಗುತ್ತಿದ್ದಾರೆ. ಅವರನ್ನು ದಾರಿ ತಪ್ಪಿಸಲು ಹಲವು ಮಾರ್ಗಗಳು ಇಂದು ವೈವಿಧ್ಯಮಯವಾಗಿ ಬದಲಾಗಿದೆ

ಶರಣ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಜಿಲ್ಲಾ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, ಅಣ್ಣ ಬಸವಣ್ಣ ಹೇಳಿದ ಮಾತು ಪ್ರಸ್ತುತ. ವ್ಯಸನಕ್ಕೆ ದಾಸರಾದ ನಿಮ್ಮಿಂದ ಹಲವಾರು ಉಪಯುಕ್ತ ಕೆಲಸಗಳು ಸಮಾಜ ಮತ್ತು ಕುಟುಂಬಕ್ಕೆ ಆಗಬೇಕು. ಈ ದಿಕ್ಕಿನಲ್ಲಿ ಚಿಂತನೆ ಮಾಡಿ, ನಡೆಯಬೇಕು. ವ್ಯಸನ ದೂರವಾಗಬೇಕು ಎಂದು ಸಲಹೆ ನೀಡಿದರು.

ಬಸವಮಾರ್ಗ ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಎಸ್. ಬಸವರಾಜು ಮಾತನಾಡಿ, ಸತತ 17 ವರ್ಷಗಳ ಕಾಲ ನಾನು ಕುಡಿತದ ವ್ಯಸನಕ್ಕೆ ದಾಸನಾಗಿದೆ. ಅದರಿಂದ ಹೊರ ಬಂದ ನಂತರ ವ್ಯಸನಕ್ಕೆ ದಾಸರಾದವರನ್ನು ವ್ಯಸನದಿಂದ ಹೊರತರಬೇಕು ಎಂದು ಮನಗಂಡು ಬಸವಮಾರ್ಗ ಸಂಸ್ಥೆ ಪ್ರಾರಂಭಮಾಡಲಾಯಿತು. ಅದಕ್ಕೆ ನನಗೆ ಪ್ರೇರಣೆ ನೀಡಿದವರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು. ಅವರು ಹಾಕಿಕೊಟ್ಟ ಮಾರ್ಗ, ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವಾದಿಂದ ಸಂಸ್ಥೆ ನಡೆಯುತ್ತಿದೆ. ಇದುವರೆಗೆ 15 ಸಾವಿರ ವ್ಯಸನಿಗಳು ಸಂಸ್ಥೆಯಿಂದ ಸೇವೆ ಪಡೆದು ಪರಿವರ್ತನೆಯಾಗಿದ್ದಾರೆ. ಇದರಿಂದ ಅವರ ಕುಟುಂಬದಲ್ಲಿ ನೆಮ್ಮದಿಯ ವಾತಾವರಣ ನಿರ್ಮಾಣವಾಗಿದೆ ಎಂದು ತಿಳಿಸಿದರು.

ದೇಶ - ವಿದೇಶ

ಗುಂಡೇಟಿಗೆ ವಿದ್ಯಾರ್ಥಿ ನಾಯಕ ಉಸ್ಮಾನ್ ಹಾದಿ ಸಾವು: ಬಾಂಗ್ಲಾದಲ್ಲಿ ಮತ್ತೆ ಭುಗಿಲೆದ್ದ ಹಿಂಸಾಚಾರ

ಢಾಕಾ: ಬಾಂಗ್ಲಾದೇಶದ ವಿದ್ಯಾರ್ಥಿ ನಾಯಕ ಷರೀಫ್ ಉಸ್ಮಾನ್ ಹಾದಿ ಸಾವಿನ ಬಳಿಕ ಬಾಂಗ್ಲಾದೇಶದ ರಾಜಧಾನಿ ಢಾಕಾದಲ್ಲಿ ಶುಕ್ರವಾರ ಬೆಳಗಿನ ಜಾವ ಹಿಂಸಾಚಾರ ಭುಗಿಲೆದ್ದಿದೆ.



ಹತ್ಯೆ ಯತ್ನದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಉಸ್ಮಾನ್ ಹಾದಿ, ಸಿಂಗಾಪುರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಗುರುವಾರ ಮೃತಪಟ್ಟಿದ್ದಾನೆ. ಈ ಸುದ್ದಿ ಹರಡುತ್ತಿದ್ದಂತೆ ಬಾಂಗ್ಲಾದೇಶದಲ್ಲಿ ಪ್ರತಿಭಟನೆ ಮತ್ತೆ ಭುಗಿಲೆದ್ದಿದೆ. ಪ್ರತಿಭಟನೆ ವೇಳೆ ಅವಾಮಿ ಲೀಗ್ ಪಕ್ಷದ ಕಚೇರಿ, ದೇಶದ ಎರಡು ಪ್ರಮುಖ ಪತ್ರಿಕೆಗಳಾದ ಡೈಲಿ ಸ್ಟಾರ್ ಮತ್ತು ಪ್ರಥಮ್ ಆಲೋ ಕಚೇರಿಗಳಿಗೆ ಬೆಂಕಿ ಹಚ್ಚಿದ್ದು, ಕಚೇರಿಗಳೊಳಗೆ ಸಿಬ್ಬಂದಿಗಳು ಸಿಲುಕಿಕೊಂಡಿದ್ದಾರೆ.

ಷರೀಫ್ ಉಸ್ಮಾನ್ ಹಾದಿ ಅವರು ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ಸರ್ಕಾರ ಉರುಳಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದರು. ಕಳೆದ ವಾರದ ಪ್ರಾರ್ಥನೆ ಮುಗಿಸಿ ಮಸೀದಿಯಿಂದ ಹೊರಬರುತ್ತಿದ್ದಾಗ ಅವರ ಮೇಲೆ ಗುಂಡಿನ ದಾಳಿ ನಡೆದಿತ್ತು.

ವಿಮಾನ ಅಪಘಾತ; ಗ್ರೆಗ್ ಬಿಫಲ್, ಕುಟುಂಬ ಸದಸ್ಯರು ಸಜೀವ ದಹನ


ವಾಷಿಂಗ್ಟನ್: ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾದ ಪಶ್ಚಿಮ ಉತ್ತರ ಕೆರೊಲಿನಾದಲ್ಲಿ ವಿಮಾನ ಅಪಘಾತಕ್ಕೀಡಾಗಿ ಬೆಂಕಿ ಹೊತ್ತಿಕೊಂಡ ಪರಿಣಾಮ ನಿವೃತ್ತ NASCAR ಚಾಲಕ ಗ್ರೆಗ್ ಬಿಫಲ್, ನಿಕಟ ಕುಟುಂಬ ಸದಸ್ಯರು ಮತ್ತು ಬ್ಯುಸ್‌ನೆಸ್ ಜೆಟ್‌ನಲ್ಲಿದ್ದ 7 ಮಂದಿ ಮೃತಪಟ್ಟಿದ್ದಾರೆ.



ಸ್ಥಳೀಯ ಅಧಿಕಾರಿಗಳು ಮತ್ತು ಫೆಡರಲ್ ವಿಮಾನಯಾನ ಆಡಳಿತದ ಪ್ರಕಾರ ಷಾರ್ಲೆಟ್‌ನಿಂದ ಸುಮಾರು 40 ಮೈಲುಗಳ ಉತ್ತರಕ್ಕೆ ಇರೆಡೆಲ್ ಕೌಂಟಿಯಲ್ಲಿರುವ ಸ್ಟೇಟ್ಸ್‌ವಿಲ್ಲೆ ಪ್ರಾದೇಶಿಕ ವಿಮಾನ ನಿಲ್ದಾಣದಲ್ಲಿ ಇಳಿಯುವಾಗ ವಿಮಾನ ನೆಲಕ್ಕೆ ಡಿಕ್ಕಿ ಹೊಡೆದು ಬೆಂಕಿ ಹೊತ್ತಿಕೊಂಡಿತು. ಅಪಘಾತದ ಕಾರಣ ಇನ್ನೂ ಸ್ಪಷ್ಟವಾಗಿಲ್ಲ. ಗ್ರೆಗ್ ಬಿಫಲ್ ಅವರ ಪತ್ನಿ ಕ್ರಿಸ್ಟಿನಾ, ಐದು ವರ್ಷದ ಮಗ ರೈಡರ್ ಮತ್ತು 14 ವರ್ಷದ ಮಗಳು ಎಮ್ಮಾ ಅವರೊಂದಿಗೆ ವಿಮಾನದಲ್ಲಿದ್ದರು. ಡೆನ್ನಿಸ್ ಡಟ್ಟನ್, ಅವರ ಮಗ ಜ್ಯಾಕ್ ಮತ್ತು ಕ್ರೇಗ್ ವ್ಯಾಡ್ಸ್‌ವರ್ತ್ ಕೂಡ ವಿಮಾನದಲ್ಲಿದ್ದರು.

ಬಾಂಗ್ಲಾದಲ್ಲಿ ಬೆಂಕಿ ಹಚ್ಚಿ ಹಿಂದೂ ವ್ಯಕ್ತಿಯ ಕೊಲೆ


ಢಾಕಾ: ಬಾಂಗ್ಲಾದೇಶದಲ್ಲಿ ಹಿಂದೂ ವ್ಯಕ್ತಿಯ ಮೇಲೆ ಗುಂಪು ಹಿಂಸಾಚಾರ ನಡೆದಿದೆ. ಬಾಂಗ್ಲಾದೇಶದಲ್ಲಿ ಭಾರತ ವಿರೋಧಿ ಪ್ರತಿಭಟನೆಗಳ ನಡುವೆ, ಇಸ್ಲಾಂ ಧರ್ಮವನ್ನು ಅವಮಾನಿಸಿದ ಆರೋಪದ ಮೇಲೆ ಮೈಮೆನ್ಸಿಂಗ್ ಜಿಲ್ಲೆಯ ಭಾಲುಕಾ ಉಪಜಿಲ್ಲಾದಲ್ಲಿ ನಡೆದ ಗುಂಪು ಹಲ್ಲೆಯಲ್ಲಿ ಹಿಂದೂ ವ್ಯಕ್ತಿಯೊಬ್ಬರನ್ನು ಹತ್ಯೆ ಮಾಡಲಾಗಿದೆ. ಪ್ರತಿಭಟನಾಕಾರರು 30 ವರ್ಷದ ದೀಪು ಚಂದ್ರ ದಾಸ್ ಅವರ ಮೃತದೇಹವನ್ನು ಸುಟ್ಟುಹಾಕಿದರು ಎಂದು ಬಾಂಗ್ಲಾದೇಶದ ಮಾಧ್ಯಮ ವರದಿಗಳು ತಿಳಿಸಿವೆ.



ಜುಲೈ ದಂಗೆಯ ಪ್ರಮುಖ ನಾಯಕ ಷರೀಫ್ ಉಸ್ಮಾನ್ ಹಾದಿ ಅವರ ಮರಣದ ನಂತರ ಬಾಂಗ್ಲಾದೇಶದಲ್ಲಿ ಹಿಂಸಾತ್ಮಕ ಪ್ರತಿಭಟನೆಗಳು ನಡೆದಾಗ ಈ ಘಟನೆ ಸಂಭವಿಸಿದೆ. ಮುಹಮ್ಮದ್ ಯೂನಸ್ ನೇತೃತ್ವದ ಮಧ್ಯಂತರ ಸರ್ಕಾರ ಹಿಂದೂ ವ್ಯಕ್ತಿಯ ಹತ್ಯೆಯನ್ನು ಬಲವಾಗಿ ಖಂಡಿಸಿದೆ.

ರಕ್ತದಾನ ಪಡೆದ 6 ಮಕ್ಕಳಲ್ಲಿ ಹೆಚ್‌ಐವಿಸೋಂಕು: ಮೂವರು ಅಧಿಕಾರಿಗಳು ಅಮಾನತು

ಭೋಪಾಲ್ (ಮಧ್ಯಪ್ರದೇಶ): ತಲೆಸ್ಸೇಮಿಯಾದಿಂದ ಬಳಲುತ್ತಿದ್ದ 6 ಮಕ್ಕಳು ಜೀವರಕ್ಷಕ ಚಿಕಿತ್ಸೆಗಾಗಿ ರಕ್ತ ಪಡೆದ ಬಳಿಕ ಅವರಲ್ಲಿ ಹೆಚ್‌ಐವಿ ಸೋಂಕು ಪತ್ತೆಯಾಗಿದ್ದು, ಈ ಘಟನೆ ಮಧ್ಯಪ್ರದೇಶದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ವೈಫಲ್ಯವನ್ನು ಬಹಿರಂಗಪಡಿಸಿದೆ.



ಸಾತ್ನಾದ ಸರ್ಕಾರಿ ಆರೋಗ್ಯ ಕೇಂದ್ರದಲ್ಲಿ ಜೀವ ರಕ್ಷಣೆಗಾಗಿ ನಿರಂತರ ರಕ್ತ ಮರುಪೂರಣ ಚಿಕಿತ್ಸೆ ಪಡೆಯುತ್ತಿದ್ದ ತಲೆಸ್ಸೇಮಿಯಾ ಮಕ್ಕಳಿಗೆ ವಿವಿಧ ಬ್ಲಡ್ ಬ್ಯಾಂಕ್‌ಗಳಿಂದ ತಂದ ಒಟ್ಟು 189 ಯುನಿಟ್ ರಕ್ತ ನೀಡಲಾಗಿತ್ತು. 150 ದಾನಿಗಳಿಂದ ಸಂಗ್ರಹಿಸಿದ ರಕ್ತವನ್ನು ನೀಡಲಾಗಿತ್ತು ಎನ್ನಲಾಗಿದೆ. 6 ಮಕ್ಕಳಿಗೆ ಹೆಚ್‌ಐವಿ ಸೋಂಕು ಇರುವುದು ಪತ್ತೆಯಾಗಿದ ಹಿನ್ನೆಲೆಯಲ್ಲಿ ಜಿಲ್ಲಾಮಟ್ಟದ ತನಿಖೆ ನಡೆಸಲಾಗಿದ್ದು, ತನಿಖೆಯಲ್ಲಿ ದಾನಿಗಳ ಮೂಲಕ ಪಡೆದ ರಕ್ತದಾನದಿಂದ ಎಚ್‌ಐವಿ ಸೋಂಕು ತಗುಲಿರುವುದು ದೃಢಪಟ್ಟಿದೆ. ಇದರ ಬೆನ್ನಲ್ಲೇ ಬ್ಲಡ್‌ಬ್ಯಾಂಕ್‌ನ ಹೊಣೆ ಹೊಂದಿದ್ದ ಸರ್ಕಾರಿ ರಕ್ತ ನಿಧಿಯ ಉಸ್ತುವಾರಿ ಸೇರಿದಂತೆ ಮೂವರು ಅಧಿಕಾರಿಗಳನ್ನು ಅಮಾನತುಗೊಳಿಸಿದೆ.

ವೈದ್ಯೆಯ ಹಿಜಾಬ್ ಎಳೆದ ಬಿಹಾರದ ಸಿಎಂ ನಿತೀಶ್ ಕುಮಾರ್‌ಗೆ ಪಾಕಿಸ್ತಾನದ ಗ್ಯಾಂಗ್‌ಸ್ಟರ್‌ನಿಂದ ಬೆದರಿಕೆ

ಪಾಟ್ನಾ: ಬಿಹಾರ ಮುಖ್ಯಮಂತ್ರಿಯಾಗಿ ನಿತೀಶ್ ಕುಮಾರ್ ಸರ್ಕಾರಿ ಸಮಾರಂಭವೊಂದರಲ್ಲಿ ಮುಸ್ಲಿಂ ಮಹಿಳೆಯ ವೈದ್ಯೆಯ ಹಿಜಾಬ್ ಅನ್ನು ಕಿತ್ತುಹಾಕುತ್ತಿರುವ ವಿಡಿಯೋ ರಾಜಕೀಯ ವಿವಾದಕ್ಕೆ ಕಾರಣವಾಗಿತ್ತು. ನಿತೀಶ್ ಕುಮಾರ್ ಹೊಸದಾಗಿ ನೇಮಕಗೊಂಡ ಆಯುಷ್ ವೈದ್ಯೆಗೆ ನೇಮಕಾತಿ ಪತ್ರವನ್ನು ನೀಡುವಾಗ ಅವರ ಮುಖದಿಂದ ಹಿಜಾಬ್ ಅನ್ನು ಎಳೆದಿದ್ದರು. ಈ ಘಟನೆಗೆ ಸಂಬಂಧಿಸಿದಂತೆ ಅವರಿಗೆ ಪಾಕಿಸ್ತಾನದಿಂದ ಬೆದರಿಕೆ ಬಂದಿದೆ. ಪಾಕಿಸ್ತಾನ ಮೂಲದ ಗ್ಯಾಂಗ್‌ಸ್ಟರ್ ಶಹಜಾದ್ ಭಟ್ಟಿ ಎಂಬುವವರು ಇನ್‌ಸ್ಟಾಗ್ರಾಮ್‌ನಲ್ಲಿ ಬಿಹಾರದ ಮುಖ್ಯಮಂತ್ರಿಗೆ ಬೆದರಿಕೆ ಹಾಕಿದ್ದು, ಹಿಜಾಬ್‌ಗೆ ಕೈ ಹಾಕಿದ ನೀವು ಅದಕ್ಕೆ ಸೂಕ್ತವಾದ ಬೆಲೆ ತೆರಬೇಕಾಗುತ್ತದೆ. ಮೊದಲೇ ಎಚ್ಚರಿಕೆ ನೀಡಲಿಲ್ಲ ಎನ್ನಬೇಡಿ. ಅದಕ್ಕಾಗಿಯೇ ಮೊದಲೇ ಹೇಳುತ್ತಿದ್ದೇನೆ. ಹಿಜಾಬ್ ಎಳೆದ ಆ ವ್ಯಕ್ತಿಗೆ ಆ ಮುಸ್ಲಿಂ ಯುವತಿಯ ಬಳಿ ಕ್ಷಮೆ ಯಾಚಿಸಲು ಇನ್ನೂ ಸಮಯವಿದೆ. ಮುಂದೆ ಏನಾದರೂ ತೊಂದರೆಯಾದರೆ ಎಚ್ಚರಿಕೆ ನೀಡಿರಲಿಲ್ಲ ಎಂದು ಹೇಳಬೇಡಿ ಎಂದು ಆ ವ್ಯಕ್ತಿ ವೀಡಿಯೊದಲ್ಲಿ ಹೇಳಿದ್ದಾರೆ.



ಮೈಸೂರು ಮಿತ್ರ ಶನಿವಾರ 20 ಡಿಸೆಂಬರ್ 2025

ಪರಿವರ್ತನೆಗಾಗಿ ಅಧ್ಯಯನಕ್ಕೆ ಮಹತ್ವ ನೀಡಿ

ಮಡಿಕೇರಿ, ಡಿ.19–ವ್ಯಕ್ತಿ ನಿರ್ಮಾಣದಿಂದ ರಾಷ್ಟ್ರ ನಿರ್ಮಾಣ ಎನ್ನುವ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಧ್ಯೇಯ ವಾಕ್ಯ ಸಾಕಾರವಾಗಬೇಕಿದ್ದಲ್ಲಿ ನಮ್ಮಲ್ಲಿ ನಾವು ಪರಿವರ್ತನೆಯನ್ನು ಕಾಣುವುದು ಅವಶ್ಯಕ. ಇಂತಹ ಪರಿವರ್ತನೆಗಾಗಿ ಅಧ್ಯಯನಕ್ಕೆ ಮಹತ್ವವನ್ನು ನೀಡುವಂತೆ ಖ್ಯಾತ ವಾಗ್ಮಿ, ಎಂ.ಎಸ್. ರಾಘವೇಂದ್ರ ಯುವ ಸಮೂಹಕ್ಕೆ ತಿಳಿಸಿದ್ದಾರೆ.


ಮನೋಜ್ ನಂದೀಶಪ್ಪ ಅವರಿಗೆ ಯುವ ಪುರಸ್ಕಾರ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ 45ನೇ ದಕ್ಷಿಣ ಪ್ರಾಂತ ಸಮ್ಮೇಳನದ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬ್ರಿಟಿಷರ ಆಳ್ವಿಕೆಯಲ್ಲಿ ಜಾರಿಗೆ ಬಂದ ಮೆಕಾಲೆ ಶಿಕ್ಷಣ ಪದ್ಧತಿ ನಮ್ಮಲ್ಲಿ ಪ್ರಶ್ನಿಸುವ ಮನೋಭಾವವನ್ನು ಮರೆಸಿತು. ಸ್ವಾತಂತ್ರ್ಯ ಬಂದು ಇಲ್ಲಿಯವರೆಗೂ ನಾವು ಅಂದಿನ ಶಿಕ್ಷಣ ಪದ್ಧತಿಗಳಡಿಯಲ್ಲೇ ಸಾಗುತ್ತಿದ್ದೇವೆ ಎಂದು ವಿಷಾದಿಸಿದರು.

ಸ್ವಾತಂತ್ರ್ಯ ಬಂದ ಅವಧಿಯಲ್ಲಿಯೂ ಹಿಂಜರಿಕೆಯ ಮನೋಭಾವ ನಮ್ಮನ್ನು ಆವರಿಸಿತ್ತು. ಇವುಗಳ ನಡುವೆ ಕೆಲವರು ಯುವ ಸಮೂಹದಲ್ಲಿ ರಾಷ್ಟ್ರಾಭಿಮಾನ, ಸ್ವಾಭಿಮಾನವನ್ನು ಬೆಳೆಸುವ ಮೂಲಕ 'ವ್ಯಕ್ತಿಯಿಂದ ರಾಷ್ಟ್ರ ನಿರ್ಮಾಣ' ಎನ್ನುವ ಚಿಂತನೆಗಳನ್ನು ಯುವ ಸಮೂಹದಲ್ಲಿ ತುಂಬುವ ಪ್ರಯತ್ನಕ್ಕೆ ಮುಂದಾದರು. ಅದರ ಸ್ವರೂಪವಾಗಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಅಸ್ತಿತ್ವಕ್ಕೆ ಬಂದಿತು ಎಂದು ಹೇಳಿದರು.

ಎಬಿವಿಪಿ ಕಾರ್ಯಕರ್ತರು ತಮ್ಮ ಊರು, ಗ್ರಾಮ, ಬಡಾವಣೆಗಳಲ್ಲಿ ರಾಷ್ಟ್ರ ಹಿತಕ್ಕೆ ಪೂರಕವಾದ ಚಿಂತನೆಗಳನ್ನು ದಿನಕ್ಕೆ ಕನಿಷ್ಠ ಅರ್ಧ ಗಂಟೆ ಕಾಲ ಯುವ ಜನರಿಗೆ ತಲುಪಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಇದು ನಿರಂತರ ಪ್ರಕ್ರಿಯೆಯಾದಾಗ ರಾಷ್ಟ್ರ ನಿರ್ಮಾಣದ ಕನಸು ನನಸಾಗುತ್ತದೆ ಎಂದರು.

ಯುವ ಪುರಸ್ಕಾರ ಪ್ರದಾನ: ಮಹಾನಗರಿಯ ಮರಗಳ ಸಂರಕ್ಷಣೆಗಾಗಿ 'ಬೆಂಗಳೂರು ಹುಡುಗರು' ಸಂಸ್ಥೆಯನ್ನು ಕಟ್ಟಿ ಶ್ರಮಿಸುತ್ತಿರುವ ಮನೋಜ್ ನಂದೀಶಪ್ಪ ಯುವ ಪುರಸ್ಕಾರ ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ಮರಗಳ ಸಂರಕ್ಷಣೆಗಾಗಿ 'ಮೊಳೆ ಮುಕ್ತ ಮರ', 'ಬಂಧನ ಮುಕ್ತ ಬೆಂಗಳೂರು' ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಆ ಮೂಲಕ ಮಹಾನಗರಿಯಲ್ಲಿ ಇರುವ ಮರಗಳ ಸಂರಕ್ಷಣೆ ನಮ್ಮ ಚಿಂತನೆಯಾಗಿದೆ ಎಂದು ತಿಳಿಸಿದರು.

ತುಮಕೂರು ವಿಭಾಗದ ಪ್ರಮುಖ್ ಅಜಯ್ ಕುಮಾರ್ ಸಂಘಟನೆಯ ಕುರಿತು ಮಾಹಿತಿ ನೀಡಿದರು.

ಎಬಿವಿಪಿ ದಕ್ಷಿಣ ಪ್ರಾಂತದ ಅಧ್ಯಕ್ಷ ಡಾ. ರವಿ ಮಂಡ್ಯ, ದಕ್ಷಿಣ ಪ್ರಾಂತದ ಕಾರ್ಯದರ್ಶಿ ಗೋಪಿ ರಂಗಸ್ವಾಮಿ ಉಪಸ್ಥಿತರಿದ್ದರು.

ನಾಟಕ ಪ್ರದರ್ಶನಕ್ಕೆ ದಸಂಸ ವಿರೋಧ

ವಿರಾಜಪೇಟೆ, ಡಿ.19– ಕುಂದಾಪುರ ತಾಲೂಕಿನ ಗಂಗೊಳ್ಳಿ ಮೀನುಗಾರಿಕಾ ಪ್ರದೇಶದ ಕಡಲ ತೀರದ ಶ್ರೀ ವೀರ ವಿಠಲ ಸಭಾಗೃಹದಲ್ಲಿ ಡಿ.23ರಂದು ವೀರ ಸಾವರ್ಕರ್ ದೇಶಪ್ರೇಮಿಗಳ ಬಳಗದವರು ನಿಜಮಹಾತ್ಮ ಬಾಬ ಸಾಹೇಬ ಎಂಬ ಅವಿ ತಿಟ್ಟ ಸತ್ಯಗಳ ಸ್ಫೋಟಕ ನಾಟಕ ಪ್ರದರ್ಶನವನ್ನು ತೀವ್ರವಾಗಿ ಖಂಡಿಸಿ ನಾಟಕ ಪ್ರದರ್ಶನವನ್ನು ರದ್ದುಗೊಳಿಸಬೇಕು ಎಂದು ದಲಿತ ಸಂಘರ್ಷ ಸಮಿತಿ(ಸಂಯೋಜಕ) ಜಿಲ್ಲಾ ಸಂಯೋಜಕ ಬೆಳ್ಳೂರು ಕೃಷ್ಣಪ್ಪ ಕುಂದಾಪುರ ಆಡಳಿತವನ್ನು ಆಗ್ರಹಿಸಿದ್ದಾರೆ.

ಕುಂದಾಪುರ ತಾಲೂಕಿನ ಗಂಗೋಳ್ಳಿ ಮೀನುಗಾರಿಕಾ ಪ್ರದೇಶ ಸೂಕ್ಷ್ಮ ಪ್ರದೇಶವಾಗಿದೆ. ಈ ನಾಟಕದಲ್ಲಿ ಅನಗತ್ಯವಾಗಿ ಹಿಂದೂ ಧರ್ಮದ ವಕ್ತಾರನಂತೆ, ಮುಸ್ಲಿಂ ವಿರೋಧಿ ಎಂಬಂತೆ ಬಿಂಬಿಸಲಾಗಿದೆ. ಅಸ್ಪೃಶ್ಯತೆಯ ಬಗ್ಗೆ ಇಲ್ಲಸಲ್ಲದ ಕಾಲ್ಪನಿಕ ಕತೆ ಕಟ್ಟಿ ಪ್ರದರ್ಶನ ಮಾಡುತ್ತಿರುವುದರಿಂದ ಸಮಾಜಕ್ಕೆ ಅಪಾಯವಿದೆ. ಒಂದು ವೇಳೆ ನಾಟಕ ಪ್ರದರ್ಶನಕ್ಕೆ ಅನುಮತಿ ನೀಡಿದಲ್ಲಿ ಸಾಕಷ್ಟು ಅನಾಹುತಕ್ಕೆ ಕಾರಣವಾಗಬಹುದು ಅದರಿಂದ ನಾಟಕ ಪ್ರದರ್ಶನವನ್ನು ರದ್ದುಗೊಳಿಸುವಂತೆ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಜಿಲ್ಲಾ ಸಂಘಟನಾ ಸಂಯೋಜಕ ರಜನಿ ಕಾಂತ್ ಮಾತನಾಡಿ ಈ ನಾಟಕದ ಸತ್ಯಾಸತ್ಯತೆಯನ್ನು ಅರಿತು ಎಲ್ಲಾ ದಲಿತ ಸಂಘಟನೆಗಳು ಈ ನಾಟಕವನ್ನು ತಡೆಹಿಡಿಯುವಂತೆ ಸರ್ಕಾರಕ್ಕೂ ಹಾಗು ಜಿಲ್ಲಾಡಳಿತಕ್ಕೂ ಮನವಿ ಮಾಡಿದ್ದೇವೆ. ಒಂದು ವೇಳೆ ಈ ನಾಟಕವನ್ನು ಪ್ರದರ್ಶನ ಮಾಡಲೇಬೇಕು ಎಂದಾದರೆ ಎಲ್ಲಾ ದಲಿತ ಸಂಘರ್ಷ ಸಮಿತಿಗಳು ಹಾಗೂ ಸಮಾನ ಮನಸ್ಕರನ್ನು ಕರೆದು ನಾಟಕ ಪ್ರದರ್ಶನ ಮಾಡಿ ನಾವುಗಳು ಒಪ್ಪಿಗೆ ಕೊಟ್ಟ ಮೇಲೆ ನಿಮ್ಮ ಪ್ರದರ್ಶನವನ್ನು ಮುಂದುವರೆಸಬಹುದು ಎಂದರು.

ಗೋಷ್ಠಿಯಲ್ಲಿ ತಾಲೂಕು ಸಂಘಟನಾ ಸಂಚಾಲಕ ವಸಂತ್, ನಾಗೇಶ್ ವಿರಾಜಪೇಟೆ, ಹೆಚ್.ಜಿ.ನಿತೇಶ್ ಉಪಸ್ಥಿತರಿದ್ದರು.

ಬೇತು ಗ್ರಾಮದ ಮಕ್ಕಿ ಶ್ರೀ ಶಾಸ್ತಾವು ಉತ್ಸವ ಶ್ರದ್ಧಾ ಭಕ್ತಿಯಿಂದ ಸಂಪನ್ನ


ಶ್ರೀ ವಿಷ್ಣು ಮೂರ್ತಿ ಮೇಲೇರಿ (ಚೌಂಡಿ ಅಗ್ನಿ ಪ್ರವೇಶ) ಬೆಂಕಿಗೆ ಬೀಳುವ ದೃಶ್ಯ.

ನಾಪೋಕ್ಲು, ಡಿ.19(ದುಗ್ಗಳ)–ಇಲ್ಲಿಗೆ ಸಮೀಪದ ಬೇತು ಗ್ರಾಮದ ಮಕ್ಕಿ ಶ್ರೀ ಶಾಸ್ತಾವು ದೇವಾಲಯದ ಆವರಣದಲ್ಲಿ ಶುಕ್ರವಾರ ನಡೆದ ಎರಡು ಪ್ರಮುಖ ಕೋಲಗಳೊಂದಿಗೆ ಉತ್ಸವ ಶ್ರದ್ಧಾಭಕ್ತಿಯಿಂದ ವಿಜೃಂಭಣೆಯಿಂದ ಸಂಪನ್ನಗೊಂಡಿತು.

ಊರಿನ ಮತ್ತು ಪರ ಊರಿನ ಭಕ್ತರು ಉತ್ಸವಕ್ಕೆ ತಂಡೋಪತಂಡವಾಗಿ ಆಗಮಿಸಿದರು. ಮಕ್ಕಿ ಶಾಸ್ತಾವು ಸನ್ನಿಧಿಯಲ್ಲಿ ಬೆಳಗ್ಗಿನಿಂದಲೇ ವಿವಿಧ ಕೋಲಗಳು ಶಾಸ್ತಾವು ದೇವರಿಗೆ ಸೇವೆ ಸಲ್ಲಿಸಿದವು. ಬೆಳಿಗ್ಗೆ ಅಜ್ಜಪ್ಪ ಕೋಲ ಹಾಗೂ ಮಧ್ಯಾಹ್ನ ವಿಷ್ಣುಮೂರ್ತಿ ಕೋಲಗಳು ಗಮನ ಸೆಳೆದವು. ಭಕ್ತರು ಅಧಿಕ ಸಂಖ್ಯೆಯಲ್ಲಿ ಉತ್ಸವದಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ವೀಕ್ಷಿಸಿದರು. ಭಕ್ತರಿಂದ ದೇವರಿಗೆ ವಿವಿಧ ರೀತಿಯ ಹರಕೆಗಳನ್ನು ಸಲ್ಲಿಸಲಾಯಿತು. ಅಪರಾಹ್ನ ಜರುಗಿದ ವಿಷ್ಣುಮೂರ್ತಿ ಕೋಲವನ್ನು ಭಕ್ತರು ವೀಕ್ಷಿಸಿದರು.

ಉತ್ಸವದ ಅಂಗವಾಗಿ ಗುರುವಾರ ರಾತ್ರಿ ದೀಪಾರಾಧನೆ ನಡೆಯಿತು. ರಾತ್ರಿ ನಡೆದ ಅಂದಿಬೊಳಕ್ ಕಾರ್ಯ ಕ್ರಮದಲ್ಲೂ ಭಕ್ತರು ಅಧಿಕಸಂಖ್ಯೆಯಲ್ಲಿ ಹಾಜರಾಗಿದ್ದರು. ಕೇರಳದ ಚಂಡೆಯೊಂದಿಗೆ ತಿರುವಾಳ ನೃತ್ಯ ಭಕ್ತರನ್ನು ಸೆಳೆಯಿತು. ಶುಕ್ರವಾರ ಸಂಜೆ ಬೆಳ್ಳಿಯ ಮುಖವಾಡ ಧರಿಸಿ ವಿಷ್ಣುಮೂರ್ತಿ ಕೋಲ ದೇವಾಲಯದ ಪ್ರಾಂಗಣದಲ್ಲಿ ಪ್ರದಕ್ಷಿಣೆ ಬರುವುದರೊಂದಿಗೆ ಸಂಭ್ರಮದ ಉತ್ಸವಕ್ಕೆ ತೆರೆ ಬಿತ್ತು. ಉತ್ಸವದಲ್ಲಿ ದೇವಾಲಯದ ತಕ್ಕ ಮುಖ್ಯಸ್ಥರು, ಆಡಳಿತ ಮಂಡಳಿ ಪದಾಧಿಕಾರಿಗಳು ಹಾಗೂ ಊರ ಮತ್ತು ಪರವೂರಿನ ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಮಕ್ಕಿ ಶ್ರೀಶಾಸ್ತವು ದೇವರ ಹಬ್ಬದ ವಿಶೇಷತೆ ಎಂದರೆ ಕೊಡಗಿನ ಎಲ್ಲಾ ದೇವಳದಲ್ಲೂ ವಾರ್ಷಿಕವಾಗಿ ಒಂದು ಉತ್ಸವವಾದರೆ ಬೇತು ಗ್ರಾಮದ ಶ್ರೀ ಮಕ್ಕಿ ಶಾಸ್ತವು ದೇವಳದಲ್ಲಿ ಪೂರ್ವ ಪದ್ಧತಿಯಂತೆ ವಾರ್ಷಿಕವಾಗಿ ಎರಡು ಹಬ್ಬಗಳು ಅಂದರೆ ಮೇ ತಿಂಗಳಲ್ಲಿ ಮತ್ತು ಡಿಸೆಂಬರ್ ತಿಂಗಳಲ್ಲಿ ಜರುಗುತ್ತದೆ

ಕ್ರೀಡೆಯಿಂದ ಶಾರೀರಿಕ, ಮಾನಸಿಕ ಆರೋಗ್ಯ ವೃದ್ಧಿ


ರಾಷ್ಟ್ರೀಯ ಹಾಕಿ ಪಟು ಮೇಕೇರಿರ ನಿತಿನ್ ತಿಮ್ಮಯ್ಯ ಕ್ರೀಡಾಜ್ಯೋತಿ ಬೆಳಗುವುದರೊಂದಿಗೆ ಉದ್ಘಾಟಿಸಿದರು.

ವಿರಾಜಪೇಟೆ,ಡಿ.19– ಕ್ರೀಡಾಕೂಟಗಳು ವಿದ್ಯಾರ್ಥಿಗಳಲ್ಲಿ ಶಾರೀರಿಕ ಆರೋಗ್ಯದೊಂದಿಗೆ ಮಾನಸಿಕ ಆರೋಗ್ಯ ಮತ್ತು ಶಿಸ್ತುಬದ್ಧ ನಾಯಕತ್ವದ ಗುಣಗಳನ್ನು ಬೆಳೆಸುತ್ತದೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಭಾರತೀಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಚೆಪ್ಪುಡಿರ ಎಸ್.ಅರುಣ್ ಮಾಚಯ್ಯ ಹೇಳಿದ್ದಾರೆ.

ವಿರಾಜಪೇಟೆ ಕೊಡವ ಸಮಾಜದ ಪೂಮಾಲೆ ಮಂದ್ ಮೈದಾನದಲ್ಲಿ ತ್ರಿವೇಣಿ ಶಾಲೆಯ ವಾರ್ಷಿಕ ಕ್ರೀಡಾ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು ವಿದ್ಯಾರ್ಥಿಗಳನ್ನು ಸಾಮಾಜಿಕ ಜಾಲತಾಣದ ಹಾವಳಿಯಿಂದ ಒಂದು ಹಂತದವರೆಗೆ ತಡೆಗಟ್ಟಲು ಕ್ರೀಡೆಗಳು ಸಹಕಾರಿಯಾಗುತ್ತದೆ. ವಿದ್ಯಾರ್ಥಿಗಳಲ್ಲಿ ಉಂಟಾಗುತ್ತಿರುವ ನೈತಿಕ ಮೌಲ್ಯಗಳ ಕುಸಿತದ ಬಗ್ಗೆ ಶಿಕ್ಷಕರು ಹಾಗೂ ಪೋಷಕರು ಸದಾ ಜಾಗೃತರಾಗಿರಬೇಕು ಎಂದರು.

ರಾಷ್ಟ್ರೀಯ ಹಾಕಿ ಪಟು ಮೇಕೇರಿರ ನಿತಿನ್ ತಿಮ್ಮಯ್ಯ ಕ್ರೀಡಾಜ್ಯೋತಿ ಬೆಳಗುವುದರೊಂದಿಗೆ ಕಾರ್ಯಕ್ರಮ ಉದ್ಘಾಟಿಸಿದರು. ಸಂಸ್ಥೆ ಅಧ್ಯಕ್ಷ ಅಪಾಡಂಡ ಕಾರ್ಯಪ್ಪ ಅಧ್ಯಕ್ಷತೆ ವಹಿಸಿದ್ದರು. ಕೊಡವ ಸಮಾಜದ ಅಧ್ಯಕ್ಷ ಅಮ್ಮಣಿ ಚಂಡರವಿ ಉತ್ತಪ್ಪ, ಉಪಾಧ್ಯಕ್ಷ ಕಾಣತಂಡ ಜಗದೀಶ್, ಗೌರವ ಕಾರ್ಯದರ್ಶಿ ಮಾಳೇಟಿರ ಎ.ಶ್ರೀನಿವಾಸ್, ಕಾರ್ಯದರ್ಶಿ ಮೇರಿಯಂಡ ಅರಸು ಅಚ್ಚಮ್ಮ ವೇದಿಕೆಯಲ್ಲಿದ್ದರು.

ಸಂಸ್ಥೆಯ ಪೂರ್ವ ವಿದ್ಯಾರ್ಥಿ ಮಿಸ್ಟರ್ ಇಂಡಿಯಾ, ಮಿಸ್ಟರ್ ಯೂನಿವರ್ಸ್ ಪ್ರಶಸ್ತಿ ವಿಜೇತ ಕರಿನರವಂಡ ಬಿಷನ್ ಮಾದಪ್ಪ ಅವರನ್ನೂ ಸನ್ಮಾನಿಸಲಾಯಿತು. ಮುಖ್ಯ ಶಿಕ್ಷಕಿ ಕೋಣೇರಿರ ಕಾವೇರಮ್ಮ ಸ್ವಾಗತಿಸಿದರು. ಕೆ.ಪ್ರತಿಮಾ ಶಾಲಾ ವರದಿ ಮಂಡಿಸಿದರು. ಕಾರ್ಯಕ್ರಮದಲ್ಲಿ ಪೂರ್ವ ವಿದ್ಯಾರ್ಥಿಗಳಿಗಾಗಿ ಆಟೋಟ ಸ್ಪರ್ಧೆ ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಡಿ.23ರಿಂದ ಮಹದೇಶ್ವರ ಜಾತ್ರೆ

ಮಡಿಕೇರಿ,ಡಿ.19–ತಾಲೂಕು ಕಟ್ಟೆಮಾಡು ಗ್ರಾಮದ ಶ್ರೀ ಮಹಾಮೃತ್ಯುಂಜಯ ಮಹದೇಶ್ವರ ಕ್ಷೇತ್ರದ ವಾರ್ಷಿಕ ಜಾತ್ರಾ ಮಹೋತ್ಸವ ಡಿ.23ರಿಂದ 28ರವರೆಗೆ ವಿವಿಧ ಧಾರ್ಮಿಕ ಕೈಂಕರ್ಯಗಳೊಂದಿಗೆ ಶ್ರದ್ಧಾಭಕ್ತಿಯಿಂದ ಜರುಗಲಿದೆ ಎಂದು ದೇವಾಲಯದ ಆಡಳಿತ ಮಂಡಳಿ ಅಧ್ಯಕ್ಷ ಕಟ್ಟೆಮನೆ ಶಶಿ ಜನಾರ್ಧನ ತಿಳಿಸಿದ್ದಾರೆ.

6 ದಿನಗಳ ಕಾಲ ನಡೆಯುವ ಜಾತ್ರಾ ಮಹೋತ್ಸವದ ವಿವಿಧ ಪೂಜಾ ವಿಧಿವಿಧಾನಗಳ ಕುರಿತು ಮಾಹಿತಿ ನೀಡಿ ಡಿ.23ರಂದು ಗಣಪತಿ ಹೋಮ, ಬ್ರಹ್ಮರಾಕ್ಷಸನಿಗೆ ನೈವೇದ್ಯ ಸಮರ್ಪಣೆ, ದುರ್ಗಾಪೂಜೆ, ಹೊರೆಕಾಣಿಕೆ ಸಮರ್ಪಣೆ, ಮಹಾಪೂಜೆ ಮತ್ತು ಧ್ವಜಾರೋಹಣ, ಡಿ.24 ಮತ್ತು 25ರಂದು ನೈರ್ಮಲ್ಯ ಬಲಿ, ಧ್ವಜಸ್ತಂಭ ಪೂಜೆ, ಭೂತಬಲಿ ಹಾಗೂ ಮಹಾಪೂಜೆ ಜರುಗಲಿದೆ ಎಂದು ಸುದ್ದಿಗಾರರಿಗೆ ಹೇಳಿದರು

ಡಿ.26ರಂದು ತುಲಾಭಾರ ಸೇವೆ, ಧ್ವಜಸ್ತಂಭ ಪೂಜೆ, ನೃತ್ಯ ಬಲಿ, ವಸಂತ ಪೂಜೆ, ದೇವರ ಶಯನೋತ್ಸವ ಮತ್ತು ಮಹಾಪೂಜೆ ನಡೆಯಲಿದೆ. ಡಿ.27 ರಂದು ಕವಟ ಪೂಜೆ, ತೈಲಾಭ್ಯಂಜನ, ಪಂಚಭೂತ ಅಭಿಷೇಕ, ಧ್ವಜಸ್ತಂಭ ಪೂಜೆ, ದೇವರು ಜಳಕಕ್ಕೆ ಹೊರಡುವುದು, ದೇವಾಲಯದ ಆವರಣದಲ್ಲಿ ನೃತ್ಯ ಬಲಿ, ನಡೆ ಭಂಡಾರ, ಧ್ವಜಾರೋಹಣ ಮತ್ತು ಮಹಾಪೂಜೆ ಜರುಗಲಿದೆ.

ಡಿ.28ರಂದು ನವಕ ಕಲಶ ಪೂಜೆ, ಅಭಿಷೇಕ, ಪಂಚಾಮೃತ ಅಭಿಷೇಕ, ಮಹಾಪೂಜೆ, ತೀರ್ಥ ಪ್ರಸಾದ ಹಾಗೂ ಮಂತ್ರಾಕ್ಷತೆ ವಿತರಣೆಯಾಗಲಿದೆ. ಜಾತ್ರಾ ಮಹೋತ್ಸವದಲ್ಲಿ ಕ್ರೈಸ್ತರು, ಮುಸಲ್ಮಾನರು ಸೇರಿದಂತೆ ಎಲ್ಲಾ ಜನಾಂಗದ ಭಕ್ತರು ಪಾಲ್ಗೊಳ್ಳುವರು.

ಕಟ್ಟುಪಾಡುಗಳು ಜಾರಿಗೆ: ದೇವರ ಜಳಕ, ದೇವರ ಬಲಿ ಮತ್ತು ವಿವಿಧ ಧಾರ್ಮಿಕ ವಿಧಿವಿಧಾನಗಳು ನಡೆಯುವ ಸಂದರ್ಭ ಗರ್ಭಗುಡಿಗೆ ತಂತ್ರಿಗಳು ಹಾಗೂ ಅರ್ಚಕರನ್ನು ಹೊರತುಪಡಿಸಿದಂತೆ ಇತರರಿಗೆ ಪ್ರವೇಶ ಇರುವುದಿಲ್ಲ. ದೇವರ ಧಾರ್ಮಿಕ ಆಚರಣೆಗಳು ಅಡಚಣೆ ಇಲ್ಲದೆ ಶ್ರದ್ಧಾಭಕ್ತಿಯಿಂದ ನಡೆಯಬೇಕು ಎಂಬ ಉದ್ದೇಶದಿಂದ ಮುಖ್ಯ ದ್ವಾರದ ಮೂಲಕ ಗರ್ಭಗುಡಿಯ ಪ್ರವೇಶವನ್ನು ನಿರಾಕರಿಸಲಾಗಿದೆ. ಪೂಜಾ ಕೈಂಕರ್ಯಗಳನ್ನು ವೀಕ್ಷಿಸಲು ಎಲ್ಇಡಿ ಪರದೆಯ ವ್ಯವಸ್ಥೆ ಮಾಡಲಾಗಿದೆ ಎಂದು ಕಾರ್ಯದರ್ಶಿ ತೋರೆರ ಕಾಶಿ ಕಾರ್ಯಪ್ಪ ತಿಳಿಸಿದರು.

ಉಲುಗುಲಿ ಗ್ರಾಮದಲ್ಲಿ ಹುಲಿ ಹೆಜ್ಜೆ ಗುರುತು ಪತ್ತೆ



ಸುಂಟಿಕೊಪ್ಪ, ಡಿ.19–ಸಮೀಪದ ಉಲುಗುಲಿ ಗ್ರಾಮದ ಯಂಕನ ಜೋತು ಕುಮಾರ್ ಅವರ ಕಾಫಿ ಒಣಗಿಸುವ ಕಣದಲ್ಲಿ ಹುಲಿ ಹೆಜ್ಜೆ ಗುರುತು ಕಂಡು ಬಂದಿದೆ.

ಈ ಸಂಬಂಧ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಅರಣ್ಯ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ದ್ದಾರೆ. ಹುಲಿ ಹೆಜ್ಜೆ ಪತ್ತೆಯಾಗಿರುವ ಕಾರಣ ಸುತ್ತಮುತ್ತಲಿನ ಗ್ರಾಮಸ್ಥರು ಎಚ್ಚರಿಕೆ ವಹಿಸುವಂತೆ ಯಂಕನ ಜೋತು ಕುಮಾರ್ ಮನವಿ ಮಾಡಿದ್ದಾರೆ.

ಚೋಕಿರ ಬೊಳ್ಳವ್ವ ಪಾರ್ವತಿ ನಿಧನ



ನಾಪೋಕ್ಲು, ಡಿ.19–ಇಲ್ಲಿಗೆ ಸಮೀಪದ ಬೇತು ಗ್ರಾಮದ ನಿವಾಸಿ ದಿ.ಚೋಕಿರ ಸೋಮಣ್ಣ ಅವರ ಧರ್ಮಪತ್ನಿ ಬೊಳ್ಳವ್ವ ಪಾರ್ವತಿ (84) ಶುಕ್ರವಾರ ನಿಧನರಾದರು. ಮೃತರು ಪುತ್ರಿ, ಇಬ್ಬರು ಪುತ್ರರು, ಬಂಧು–ಬಾಂಧವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಶನಿವಾರ ಬೇತು ಗ್ರಾಮದ ಚೋಕಿರ ಕುಟುಂಬದ ರುದ್ರಭೂಮಿಯಲ್ಲಿ ನಡೆಯಲಿದೆ.

ಅನಂತ



ನಾಪೋಕ್ಲು: ಮೂಲತಃ ಬಲಮುರಿ ಗ್ರಾಮದವರಾಗಿದ್ದು ಗುಡ್ಡೆ ಹೊಸೂರಿನಲ್ಲಿ ವಾಸವಾಗಿದ್ದ ಗುಡ್ಡೆಮನೆ ದಿ. ಬೆಳ್ಳಿಯಪ್ಪ ಅವರ ಮಗ ಅನಂತ(65) ಅನಾರೋಗ್ಯದಿಂದ ಶುಕ್ರವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಬಂದು ಬಾಂಧವರನ್ನು ಅಗಲಿದ್ದಾರೆ. ನಿವೃತ್ತ ಪಂಚಾಯತ್ ಕಾರ್ಯದರ್ಶಿ ಗುಡ್ಡೆಮನೆ ಅನಂತ ಅವರ ಅಂತ್ಯಕ್ರಿಯೆ ಶನಿವಾರ ಗುಡ್ಡೆಹೊಸೂರಿನಲ್ಲಿ ನಡೆಯಲಿದೆ.

ಯಳಂದೂರನ್ನು ಮಲೆನಾಡು ಅಭಿವೃದ್ಧಿ ಮಂಡಳಿಗೆ ಸೇರಿಸಲು ಆಗ್ರಹ

ಯಳಂದೂರು, ಡಿ.19– ಯಳಂದೂರು ತಾಲೂಕನ್ನು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಸೇರಿಸಲು ಬೆಳಗಾವಿ ವಿಧಾನಸಭೆ ಅಧಿವೇಶನದಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ಆಗ್ರಹಿಸಿದರು.


ಶಾಸಕ ಎ.ಆರ್.ಕೃಷ್ಣಮೂರ್ತಿ

ಇದಕ್ಕೆ ಪ್ರತಿಕ್ರಿಯಿಸಿದ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್, ಮಂಡಳಿಯ ಸರ್ವ ಸದಸ್ಯರ ಸಭೆಯ ನಿರ್ಣಯದಂತೆ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕು ಹಾಗೂ ಮಂಡಳಿ ವ್ಯಾಪ್ತಿಯಲ್ಲಿ ಹೊಸದಾಗಿ ಸೃಜನಗೊಂಡಿರುವ 11 ತಾಲೂಕುಗಳು ಒಳಗೊಂಡಂತೆ ಮಂಡಳಿಯ ವ್ಯಾಪ್ತಿಗೆ ಸೇರ್ಪಡೆಗೊಳಿಸಲು ಪ್ರಸ್ತಾವನೆ ಸ್ವೀಕೃತಗೊಂಡಿದ್ದು, ಸದರಿ ತಾಲೂಕಿನ ವಾರ್ಷಿಕ ಮಳೆ, ವಾಡಿಕೆ ಮಳೆ, ಅರಣ್ಯ ಪ್ರದೇಶ, ಭೂಮಿ ತೇವಾಂಶ ಮುಂತಾದ ಅಂಶಗಳನ್ನು ಅವಲೋಕಿಸಿ ಸಚಿವ ಸಂಪುಟದ ಅನುಮೋದನೆ ಪಡೆದು ಮಂಡಳಿಗೆ ಸೇರ್ಪಡೆ ಮಾಡಲು ಕ್ರಮ ವಹಿಸಲಾಗುವುದು. ಜೊತೆಗೆ 2026–27ನೇ ಸಾಲಿನಲ್ಲಿ ಪ್ರತಿ ಕ್ಷೇತ್ರಕ್ಕೆ 1 ಕೋಟಿ ರೂ. ಹಂಚಿಕೆ ಮಾಡಲು ಆಯವ್ಯಯ ವೇಳೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದರು.

ಶೀಘ್ರ ವಿದ್ಯುತ್ ಉಪಕೇಂದ್ರ ಸ್ಥಾಪನೆ: ತಾಲೂಕಿನ ಗೌಡಹಳ್ಳಿ ಗ್ರಾಮದಲ್ಲಿ 66/11 ಕೆವಿ ವಿದ್ಯುತ್ ವಿತರಣಾ ಕೇಂದ್ರ ಸ್ಥಾಪನೆಗೆ ಅನುಮೋದನೆಯಾಗಿದ್ದು, ತಾಲೂಕಿನ ಅಗರ ಹೋಬಳಿ ವ್ಯಾಪ್ತಿಯ ಮಲಾರಪಾಳ್ಯ ಗ್ರಾಮದಲ್ಲಿ 2 ಎಕರೆ ಸರ್ಕಾರಿ ಭೂಮಿ ಗುರುತಿಸಲಾಗಿದ್ದು, ಜಿಲ್ಲಾಧಿಕಾರಿಗಳಿಂದ ಮಂಜೂರಾಗಿರುತ್ತದೆ. ಭೂಮಿಗೆ ಹಣ ಪಾವತಿಸುವ ಪ್ರಕ್ರಿಯೆ ಜಾರಿಯಲ್ಲಿದ್ದು, ಉಪಕೇಂದ್ರದ ಸ್ಥಾಪನೆ 66 ಕೆವಿ ಮಾರ್ಗದ ಸರ್ವೇ ಕಾರ್ಯ ಪ್ರಗತಿಯಲ್ಲಿದೆ ಎಂದು ಉತ್ತರಿಸಿದರು.

ಪಪಂ ಎ ಮತ್ತು ಬಿ ಖಾತಾ ಮಾಹಿತಿ: ಯಳಂದೂರು ಪಪಂ ಇ–ಖಾತೆ ಕೋರಿ ಸ್ವೀಕೃತಗೊಂಡ ಅರ್ಜಿಗಳ, ವಿತರಿಸಿರುವ ಅರ್ಜಿಗಳ ಹಾಗೂ ಬಾಕಿ ಉಳಿದ ಅರ್ಜಿಗಳ ವಿವರಗಳನ್ನು ಸದನದಲ್ಲಿ ಕೇಳಿದ ಪ್ರಶ್ನೆಗೆ ಪಟ್ಟಣದಲ್ಲಿ ಎ–ಖಾತಾ ಅರ್ಜಿಗಳ ಒಟ್ಟು 1520ರಲ್ಲಿ 1491 ಖಾತಾ ವಿತರಿಸಲಾಗಿದೆ. 29 ಖಾತೆ ಬಾಕಿ ಇದೆ. ಜೊತೆಗೆ ಬಿ ಖಾತಾ ಅರ್ಜಿ 103 ಬಾಕಿ ಉಳಿದಿದೆ ಎಂದು ಪೌರಾಡಳಿತ ನಿರ್ದೇಶನ ಇಲಾಖೆ ಅಧಿಕಾರಿಗಳು ಶಾಸಕರಿಗೆ ಮಾಹಿತಿ ನೀಡಿದ್ದಾರೆ.

ಚಾ.ನಗರದಲ್ಲಿ ಆಹಾರ ಮೇಳ, ವಸ್ತುಪ್ರದರ್ಶನ ಆರಂಭ

ಪ್ರತಿಯೊಬ್ಬರೂ ಸಾಮಾಜಿಕ ಕಾರ್ಯ ಕೈಗೊಳ್ಳಿ: ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ


ಕಾರ್ಯಕ್ರಮವನ್ನು ಮರಿಯಾಲ ಮಠದ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ಚಾಮರಾಜನಗರ, ಡಿ.19– ನಗರದ ರೋಟರಿ ಸಿಲ್ಕ್ ಸಿಟಿ ವತಿಯಿಂದ ಶ್ರೀಸಿದ್ದಮಲ್ಲೇಶ್ವರ ವಿರಕ್ತ ಮಠದ ಶ್ರೀಸಿದ್ದಬಸವರಾಜ ಸ್ವಾಮೀಜಿಗಳ ಅನುಭವ ಮಂಟಪ ಹಾಗೂ ಆವರಣದಲ್ಲಿ ಆಯೋಜಿಸಿರುವ 3 ದಿನ ನಡೆಯುವ ಆಹಾರ ಮೇಳ, ವಸ್ತು ಪ್ರದರ್ಶನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಶುಕ್ರವಾರ ಆರಂಭವಾಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಮರಿಯಾಲ ಮಠದ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ ಅವರು, ಮಾನವ ಜೀವನದಲ್ಲಿ ಸೇವಾ ಕಾರ್ಯಗಳು ಅತೀ ಮುಖ್ಯ. ಹೀಗಾಗಿ ಮನುಷ್ಯರಾಗಿ ಹುಟ್ಟಿದ ಮೇಲೆ ಏನಾದರೂ ಸಾಮಾಜಿಕ ಸೇವೆ ಮಾಡಿದಾಗ ಜೀವನ ಸಾರ್ಥಕವಾಗುತ್ತದೆ. ಈ ನಿಟ್ಟಿನಲ್ಲಿ ನಗರದ ರೋಟರಿ ಸಿಲ್ಕ್ ಸಿಟಿ 3 ದಿನಗಳ ಕಾಲ ಆಹಾರ ಮೇಳ ವಸ್ತು ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿ ಜನರಿಗೆ ಮನರಂಜನೆ ನೀಡುತ್ತಿರುವುದು ಒಳ್ಳೆಯ ಸಾಮಾಜಿಕ ಸೇವೆಯಾಗಿದೆ ಎಂದರು.

ರೋಟರಿ ಸಿಲ್ಕ್ ಸಿಟಿ ಸಂಸ್ಥೆ ಪ್ರತಿ ವರ್ಷ ಜನರಿಗಾಗಿ ಹಲವು ಸಾಮಾಜಿಕ ಸೇವಾ ಕಾರ್ಯಗಳನ್ನು ಮಾಡುತ್ತಾ ಬಂದಿದೆ. ಶೈಕ್ಷಣಿಕವಾಗಿಯೂ ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಉಪಯೋಗವಾಗುವಂತಹ ಮಾರ್ಗದರ್ಶಿ ಪತ್ರಿಕೆಗಳನ್ನು ನೀಡುತ್ತಿದೆ. ರಕ್ತದಾನ ಶಿಬಿರದಂತಹ ಹಲವಾರು ಕಾರ್ಯಗಳನ್ನು ಹಮ್ಮಿಕೊಳ್ಳುವ ಮೂಲಕ ಇತರ ಸಂಘ ಸಂಸ್ಥೆಗಳಿಗೆ ಮಾದರಿಯಾಗಿದೆ ಎಂದರು.

ನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠದ ಚನ್ನಬಸವ ಸ್ವಾಮೀಜಿ ಮಾತನಾಡಿ, ಕಳೆದ ಒಂದು ವರ್ಷದಿಂದ ರೋಟರಿ ಸಿಲ್ಕ್ ಸಿಟಿ ನಮ್ಮ ಮಠದ ಆವರಣದಲ್ಲಿ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರ ಬಯಕೆಗಳನ್ನು ಈಡೇರಿಸಿ ಅವರಿಗೆ ಮನರಂಜನೆ ನೀಡುತ್ತಿದೆ ಎಂದರು.

ಈ ಕಾರ್ಯಕ್ರಮದಿಂದ ಬಂದ ಆದಾಯವನ್ನು ಸಮಾಜಮುಖಿ ಕಾರ್ಯಗಳಿಗೆ ವಿನಿಯೋಗಿಸುತ್ತಿದ್ದು, ಕಳೆದ ಬಾರಿ ಮೂಕನಪಾಳ್ಯ ಸರ್ಕಾರಿ ಶಾಲಾಭಿವೃದ್ಧಿಗೆ ವಿನಿಯೋಗಿಸಲಾಗಿದೆ. ಈ ಬಾರಿ ಮೂಲ ಸೌಕರ್ಯ ವಂಚಿತ ಸರ್ಕಾರಿ ಬಾಲಕಿಯರ ವಸತಿ ಶಾಲೆಗಳಿಗೆ ಮೂಲ ಸೌಕರ್ಯಕ್ಕಾಗಿ ನೀಡುತ್ತಿರುವುದು ಅವರ ಜನಪರ ಕಾಳಜಿಯಾಗಿದೆ ಎಂದರು.

ರೋಟರಿ ವಲಯ 9ರ ಸಹಾಯಕ ಗೌರ್ನರ್ ದೊಡ್ಡರಾಯಪೇಟೆ ಗಿರೀಶ್ ಮಾತನಾಡಿದರು. ಡಿ.20ರಂದು ಅಂತರರಾಷ್ಟ್ರೀಯ ಖ್ಯಾತಿಯ ಸ್ಯಾಕ್ಸೋಫೋನ್ ಕಲಾವಿದೆ ಅಂಜಲಿ ಶ್ಯಾನಭೋಗ್, ಮೈಸೂರಿನ ಕಥೆಗಳು ಖ್ಯಾತಿಯ ಪ್ರಖ್ಯಾತ ಇತಿಹಾಸ ಪ್ರಚಾರಕ ಧರ್ಮೇಂದರ್ ಕುಮಾರ್ ಅವರಿಂದ ಕಾರ್ಯಕ್ರಮ ನಡೆಯಲಿದೆ. ಡಿ.21ರಂದು ಅಂತರರಾಷ್ಟ್ರೀಯ ಪ್ರಶಸ್ತಿ ವಿಜೇತ ಮಿಸ್ಟರ್ ಮ್ಯಾಜಿಕ್ ಅವರಿಂದ ಜಾದೂ, ಪೃಥ್ವಿ ಪಿ.ಗೌಡ ಅವರಿಂದ ಸಮೂಹ ನೃತ್ಯ ಮತ್ತು ಮನರಂಜನೆ ನಡೆಯಲಿದೆ.

ಈ ವೇಳೆ ರೋಟರಿ ಸಿಲ್ಕ್ ಸಿಟಿ ಅಧ್ಯಕ್ಷ ಶಮಿತ್, ಮಾಜಿ ಅಧ್ಯಕ್ಷ ಡಿ.ಪಿ.ವಿಶ್ವಾಸ್, ಕಾರ್ಯದರ್ಶಿ ಸಂತೋಷ್, ಜಿ.ಆರ್. ಅಶ್ವಥ್‌ನಾರಾಯಣ್, ಕಾಗಲವಾಡಿ ಚಂದ್ರು, ಶರತ್, ಮುರುಗೇಂದ್ರಸ್ವಾಮಿ, ಚೇತನ್ ಹೆಗ್ಗಡೆ, ರವಿಶಂಕರ್, ಅಜಯ್, ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾನಿಲಯದ ದಾನೇಶ್ವರಿ ಅಕ್ಕ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸಿದ್ದಲಿಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್ ಸೇರಿದಂತೆ ಇತರರಿದ್ದರು.

ಹಾಡಹಗಲೇ ಹುಲಿ ದಾಳಿಗೆ ಹಸುಗಳು ಬಲಿ



ಗುಂಡ್ಲುಪೇಟೆ, ಡಿ.19– ಹಾಡಹಗಲೇ ಹುಲಿ ದಾಳಿಗೆ ಎರಡು ಹಸುಗಳು ಬಲಿಯಾಗಿರುವ ಘಟನೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಗುಂಡ್ಲುಪೇಟೆ ಬಫರ್ ವಲಯ ವ್ಯಾಪ್ತಿಯ ಮೂಡುಗೂರು ಗ್ರಾಮದಲ್ಲಿ ಗುರುವಾರ ಮಧ್ಯಾಹ್ನ ನಡೆದಿದೆ.

ಗ್ರಾಮದ ನಿವಾಸಿ ಸಿದ್ದೇಶ್ ಅವರಿಗೆ ಸೇರಿದ ಎರಡು ಹಸುಗಳು ಹುಲಿ ದಾಳಿಗೆ ಬಲಿಯಾಗಿರುವುದು. ಗ್ರಾಮದ ಬಾಣನಕೆರೆ ಏರಿ ಮೇಲೆ ಹಸುಗಳನ್ನು ಮೇಯಿಸುತ್ತಿದ್ದಾಗ ಏಕಾಏಕಿ ಹುಲಿ ದಾಳಿ ಮಾಡಿ ಎರಡು ಹಸುಗಳ ಕುತ್ತಿಗೆಗೂ ಬಾಯಿ ಹಾಕಿ ರಕ್ತ ಹೀರಿ ಕೊಂದಿದೆ. ಹುಲಿ ದಾಲಿ ಮಾಡುತ್ತಿದ್ದಂತೆ ಸುತ್ತಮುತ್ತಲು ರೈತರು ಕೂಗಾಡಿದ್ದರಿಂದ ಹಸುಗಳನ್ನು ಬಿಟ್ಟು ಹುಲಿ ಓಡಿ ಹೋಗಿದ್ದು, ಹಗಲಿನ ವೇಳೆಯೇ ಹುಲಿ ದಾಳಿ ಮಾಡಿದ್ದನ್ನು ಕಂಡ ರೈತರು ಬೆಚ್ಚಿ ಬಿದ್ದಿದ್ದಾರೆ ಎನ್ನಲಾಗಿದೆ.

ವಿಷಯ ತಿಳಿದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಗುಂಡ್ಲುಪೇಟೆ ಬಫರ್ ವಲಯ ವ್ಯಾಪ್ತಿಯ ಅರಣ್ಯಾಧಿಕಾರಿಗಳು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದರು. ಈ ವೇಳೆ ಇತ್ತೀಚೆಗೆ ಚಿರತೆ ಮತ್ತು ಹುಲಿ ಓಡಾಟ ಹೆಚ್ಚಾಗಿದ್ದು, ಅವುಗಳನ್ನು ಕೂಡಲೇ ಸೆರೆ ಹಿಡಿಯಬೇಕು. ಜೊತೆಗೆ ಹಸು ಕಳೆದುಕೊಂಡ ರೈತನಿಗೆ ಸೂಕ್ತ ಪರಿಹಾರ ಕೊಡಬೇಕೆಂದು ಸ್ಥಳೀಯ ರೈತ ಮುಖಂಡರು ಒತ್ತಾಯಿಸಿದರು. ನಂತರ ಮಾತನಾಡಿದ ಅಧಿಕಾರಿಗಳು ಹಸುಗಳನ್ನು ಕಳೆದುಕೊಂಡ ರೈತನಿಗೆ ಸೂಕ್ತ ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದರು.

ಹುಲಿ ತುಂಡರಿಸಿ ಕೊಂದವರಿಗೆ ಜಾಮೀನು

ಚಾಮರಾಜನಗರ: ಜಿಲ್ಲೆಯ ಹನೂರು ತಾಲೂಕಿನ ಮಲೆ ಮಹದೇಶ್ವರ ವನ್ಯಧಾಮದಲ್ಲಿ ಇತ್ತೀಚೆಗೆ ಹುಲಿಯನ್ನು 3 ತುಂಡುಗಳಾಗಿ ಕತ್ತರಿಸಿದ್ದ ಪ್ರಕರಣದಲ್ಲಿ ಬಂಧಿತರಾಗಿದ್ದ ಆರೋಪಿಗಳಿಗೆ ಕೊಳ್ಳೇಗಾಲ ಜೆಎಂಎಫ್‌ಸಿ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.

ಆರೋಪಿಗಳಾದ ಪಚ್ಚ ಮಲ್ಲು, ಸಂಪಿಗೆ ಮಾದೇವ, ಸಿದ್ದರಾಜು ಹಾಗೂ ಗಣೇಶ ಅವರಿಗೆ ಜಾಮೀನು ದೊರೆತಿದೆ. ಹುಲಿ ಕೊಂದ ಆರೋಪದಲ್ಲಿ ಅ.5 ರಂದು ಇವರನ್ನು ಬಂಧಿಸಲಾಗಿತ್ತು. ಪ್ರಕರಣ ಸಂಬಂಧ ತನಿಖೆ ನಡೆಸಿದ ಅಧಿಕಾರಿಗಳು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಕೆ ಮಾಡಲು ತಡ ಮಾಡಿದ್ದರಿಂದ ಆರೋಪಿಗಳ ಜಾಮೀನು ಕೋರಿಕೆ ಅರ್ಜಿಯನ್ನು ನ್ಯಾಯಾಲಯ ಪುರಸ್ಕರಿಸಿದೆ ಎನ್ನಲಾಗಿದೆ. ಅಲ್ಲದೇ ಪ್ರಕರಣದಲ್ಲಿ ಭಾಗಿಯಾಗಿರುವ ಪ್ರಮುಖ ಆರೋಪಿ ಗೋವಿಂದ ತಲೆಮರೆಸಿಕೊಂಡಿದ್ದು ಇದುವರೆಗೂ ಪತ್ತೆಯಾಗಿಲ್ಲ ಎನ್ನಲಾಗಿದೆ.

ಮನೆ ಮಾರುವುದಾಗಿ ವಂಚನೆ ಆರೋಪಿ ಬಂಧನ



ಕೊಳ್ಳೇಗಾಲ, ಡಿ.19– ಮನೆ ಮಾರುವುದಾಗಿ ಹಲವರಿಂದ ಕೋಟ್ಯಾಂತರ ರೂ. ಪಡೆದು ನಾಪತ್ತೆಯಾಗಿದ್ದ ಆರೋಪಿ ಬಂಧಿಸುವಲ್ಲಿ ಕೊಳ್ಳೇಗಾಲ ಗ್ರಾಮಾಂತರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಶರವಣ್ ಬಂಧಿತ ಆರೋಪಿ. ಈತ ನಗರದ ದಕ್ಷಿಣ ಬಡಾವಣೆಯ ಮನೆಯೊಂದನ್ನು ಮಾರಾಟ ಮಾಡುವುದಾಗಿ ಮಾಂಬಳ್ಳಿ ನಾಗರಾಜು, ನಿವೃತ್ತ ಯೋಧ ವಿಶ್ವನಾಥ್, ಮಾರುಕಟ್ಟೆ ಕೆ.ಕೆ.ಮೂರ್ತಿ, ಶಿವಕುಮಾರ್, ನಗರಸಭೆ ಮಾಜಿ ಸದಸ್ಯ ಕೆ.ಕೆ.ಮೂರ್ತಿ, ನಾಗರಾಜು ಸೇರಿದಂತೆ 15ಕ್ಕೂ ಹೆಚ್ಚು ಮಂದಿಯಿಂದ ಅಗ್ರಿಮೆಂಟ್ ಮಾಡಿಕೊಂಡು 2 ಕೋಟಿಗೂ ಹೆಚ್ಚು ಹಣ ಪಡೆದಿದ್ದ. ಬಳಿಕ ಮತ್ತೊಬ್ಬರಿಗೆ ಮನೆ ಮಾರಾಟ ಮಾಡಿ ಪರಾರಿಯಾಗಿದ್ದ. ಈ ಸಂಬಂಧ ಕೊಳ್ಳೇಗಾಲ ಪಟ್ಟಣ ಹಾಗೂ ಗ್ರಾಮಾಂತರ ಠಾಣೆಯಲ್ಲಿ ಶರವಣ ವಿರುದ್ಧ ಪ್ರಕರಣ ದಾಖಲಾಗಿತ್ತು.

ಶರವಣ ಕಳೆದ ಏಳೆಂಟು ವರ್ಷಗಳಿಂದ ತಲೆಮರೆಸಿಕೊಂಡು ಪ್ರಕರಣ ಸಂಬಂಧ ನ್ಯಾಯಾಲಯಕ್ಕೂ ಹಾಜರಾಗಿರಲಿಲ್ಲ. ಹೀಗಾಗಿ ಪೊಲೀಸರು ಆತನ ಪತ್ತೆಗೆ ಶೋಧ ಕಾರ್ಯ ಕೈಗೊಂಡಿದ್ದರು. ಆದರೆ ಶರವಣ ಬೆಂಗಳೂರಿನ ಜೆ.ಪಿ.ನಗರದಲ್ಲಿ ಮಳಿಗೆಯೊಂದನ್ನು ಬಾಡಿಗೆ ಪಡೆದು ವ್ಯಾಪಾರದಲ್ಲಿ ತೊಡಗಿದ್ದನ್ನು ಗಮನಿಸಿದ ಮಾಜಿ ಸೈನಿಕರೊಬ್ಬರು ನೀಡಿದ ಸುಳಿವಿನ ಮೇರೆಗೆ ಕೊಳ್ಳೇಗಾಲ ಗ್ರಾಮಾಂತರ ಠಾಣೆ ಪೊಲೀಸರು ಆತನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಜಿಲ್ಲಾಡಳಿತದ ವಿರುದ್ಧ ಪ್ರತಿಭಟನೆ

ಚಾಮರಾಜನಗರ, ಡಿ.19– ಕೊಳ್ಳೇಗಾಲದ ಸರ್ಕಾರಿ ಎಂಜಿಎಸ್‌ವಿ ಕಾಲೇಜು ಆವರಣದಲ್ಲಿ ನಡೆಸುತ್ತಿರುವ ಕನ್ನಡ ಹಬ್ಬ ಕಾರ್ಯಕ್ರಮದ ವೇದಿಕೆ ತೆರವುಗೊಳಿಸುವಂತೆ ಜಿಲ್ಲಾಡಳಿತದ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿ ಪ್ರಗತಿಪರ ವೇದಿಕೆ ಸಂಚಾಲಕ ಶೇಖರಬುದ್ಧ ನಗರದಲ್ಲಿ ಪ್ರತಿಭಟನೆ ನಡೆಸಿದರು.


ಚಾ.ನಗರದಲ್ಲಿ ಪ್ರಗತಿಪರ ವೇದಿಕೆ ಸಂಚಾಲಕ ಶೇಖರಬುದ್ಧ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಕೆಳಗೆ ಕುಳಿತು ಪ್ರತಿಭಟನೆ ನಡೆಸಿ ಜಿಲ್ಲಾಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಅವರು, ಇಂದು ನಾಳೆ ಕಿರುಪರೀಕ್ಷೆ ಇದ್ದು, ಈ ಕಾರ್ಯಕ್ರಮದಿಂದ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗಿದೆ ಎಂದು ದೂರಿದರು.

ಕೊಳ್ಳೇಗಾಲದ ಎಂಜಿಎಸ್‌ವಿ ಸರ್ಕಾರಿ ಕಾಲೇಜು ಆಗಿದ್ದು, ಕಾಲೇಜಿನಿಂದ ಯಾವುದೇ ಅನುಮತಿ ಪಡೆಯದೆ ಖಾಸಗಿ ಸಂಸ್ಥೆಯವರು ಕಾಲೇಜು ಮುಖ್ಯಗೇಟ್ ಬೀಗ ಹಾಕಿದರೂ ಕೂಡ ಬೀಗ ಒಡೆದು ಅಕ್ರಮವಾಗಿ ಕಾರ್ಯಕ್ರಮ ವೇದಿಕೆ ನಿರ್ಮಾಣ ಮಾಡಿದ್ದಾರೆ. ಹೀಗಾಗಿ ಅಕ್ರಮ ವೇದಿಕೆ ತೆರವುಗೊಳಿಸಬೇಕು ಎಂದು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರೂ ಜಿಲ್ಲಾಡಳಿತ ಕಾರ್ಯಕ್ರಮ ರದ್ದುಗೊಳಿಸುವಲ್ಲಿ ವಿಫಲವಾಗಿದೆ. ಹೀಗಾಗಿ ಜಿಲ್ಲಾಡಳಿತ ಅಕ್ರಮ ವೇದಿಕೆ ತೆರವುಗೊಳಿಸಬೇಕು. ಖಾಸಗಿ ಸಂಸ್ಥೆಯವರ ಮೇಲೆ ಕಾನೂನು ಕ್ರಮ ಕೈಗೊಳ್ಳುವ ತನಕ ಅಹೋರಾತ್ರಿ ಧರಣಿ ನಡೆಸುವುದಾಗಿ ಶೇಖರಬುದ್ಧ ಎಚ್ಚರಿಸಿದರು. ಜೊತೆಯಲ್ಲಿ ಆಲೂರು ನಾಗೇಂದ್ರ ಭಾಗವಹಿಸಿದ್ದರು.

ಶ್ರೀರಾಮೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ



ಗುಂಡ್ಲುಪೇಟೆ, ಡಿ.19– ಅಮಾವಾಸ್ಯೆ ಹಾಗೂ ಧನುರ್ಮಾಸದ ಅಂಗವಾಗಿ ಪಟ್ಟಣದ ಶ್ರೀರಾಮೇಶ್ವರ ದೇವಾಲಯದಲ್ಲಿ ಶಿವಲಿಂಗಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು.

ದೇವಾಲಯದ ಪ್ರಧಾನ ಅರ್ಚಕರಾದ ಶಂಕರನಾರಾಯಣ ಜೋಯಿಸ್ ಮತ್ತು ವೆಂಕಟಪತಿ ಜೋಯಿಸ್ ಅವರ ಪೌರೋಹಿತ್ಯದಲ್ಲಿ ಶಿವ ಪಾರ್ವತಿ ಮಾತೆಗೆ ವಿವಿಧ ಹೂಗಳಿಂದ ಅಲಂಕಾರ ಮಾಡಿ ಪೂಜೆ ನೆರವೇರಿಸಲಾಯಿತು. ಈ ವೇಳೆ ಪಟ್ಟಣದ ವಿವಿಧ ಬಡಾವಣೆ ಭಕ್ತರು ಇದ್ದರು.

ಇಂದು ಪಲ್ಸ್ ಪೋಲಿಯೋ ಜಾಗೃತಿ ಜಾಥಾ

ಚಾಮರಾಜನಗರ, ಡಿ.19– ರಾಷ್ಟ್ರೀಯ ಕಾರ್ಯಕ್ರಮ ಪಲ್ಸ್ ಪೋಲಿಯೋ ಡಿ.21 ರಿಂದ 24ರವರೆಗೆ ನಡೆಯಲಿದ್ದು, ಇದರ ಅಂಗವಾಗಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಜಾಥಾ ಕಾರ್ಯಕ್ರಮಕ್ಕೆ ಡಿ.20ರಂದು ಬೆಳಗ್ಗೆ 8.30ಕ್ಕೆ ಗುಂಡ್ಲುಪೇಟೆ ರಸ್ತೆಯಲ್ಲಿರುವ ನಗರ ಆರೋಗ್ಯ ಕೇಂದ್ರದ ಆವರಣದ ಬಳಿ ಚಾಲನೆ ನೀಡಲಾಗುವುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಯೋಜನಾ ಅಭಿವೃದ್ಧಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ ಸಂತೇಮರಹಳ್ಳಿ ಉಪವಿಭಾಗ ವ್ಯಾಪ್ತಿ ನಿರ್ವಹಣಾ ಕಾಮಗಾರಿ ನಿಮಿತ್ತ ಡಿ.20ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಹಿರಿಕೆರೆ, ಕಾಳಿಕಾಂಬ ಕಾಲೋನಿ, ಚಂದಕವಾಡಿ, ಹೆಬ್ಬಸೂರು, ಕಾಗಲವಾಡಿ, ರೇಚಂಬಳ್ಳಿ, ಸರಗೂರು ಮೋಳೆ, ಅಯ್ಯನಪುರ, ಮಲ್ಲೇದೇವನಹಳ್ಳಿ, ನವೋದಯ, ಹೊಂಡರಬಾಳು, ನಾಗವಳ್ಳಿ, ಜ್ಯೋತಿಗೌಡನಪುರ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಪಾಂಪ್ಲೆಟ್ ಅಂಟಿಸಲು ಹುಡುಗರು ಬೇಕಾಗಿದ್ದಾರೆ.
9606047267

ಮನೆ ಭೋಗ್ಯಕ್ಕೆ ಇದೆ
17x58 ಮೊದಲನೇ ಮಹಡಿಯಲ್ಲಿ ನಾರ್ತ್ ಫೇಸಿಂಗ್ ಡೋರ್ 2 ಬಿಹೆಚ್‌ಕೆ ಮನೆ ಭೋಗ್ಯಕ್ಕೆ ಇದೆ. ಇಟ್ಟಿಗೆಗೂಡು ಅಂಚೆ ಕಚೇರಿ ಹತ್ತಿರ, ಮೈಸೂರು, ಸಂಪರ್ಕಿಸಿ.
9845724605

ಮಹಿಳಾ ಅಡುಗೆಯವರು ಬೇಕಾಗಿದ್ದಾರೆ
ಮಹಿಳಾ ಸಸ್ಯಹಾರಿ ಅಡುಗೆ ತಯಾರಕರು ಬೇಕಾಗಿದ್ದಾರೆ. (ಲಿಂಗಾಯಿತ & ಬ್ರಾಹ್ಮಣ ಮಾತ್ರ) ಸ್ಥಳ: ಬಸವರಾಜು ಸರ್ಕಲ್, ವಿಜಯನಗರ, ಮೈಸೂರು
8310846772, 9535096161

SITE FOR SALE
50 x 60, N/F
50 Ft. Road
YESH MEGA CITY
Mysore-Hunsur Road
7338445401

WANTED
Accountant
Graphic Designer
94480 67939
97395 69260

ನಿರ್ಮಲಧಾರೆ ಸಲ್ಯೂಷನ್ಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
Mob: 9740893554

ಸೈಟು ಮಾರಾಟಕ್ಕಿದೆ
25 x 60, 50 Ft. Road, N/W CORNER
ಯಶ್ ಮೆಗಾಸಿಟಿ
ಮೈಸೂರು - ಹುಣಸೂರು ರಸ್ತೆ
7338445482

ಬೇಕಾಗಿದ್ದಾರೆ
ವಿಪ್ರೊ ಎಂಟರ್‌ಪ್ರೈಸಸ್ ಸಂಸ್ಥೆಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಬಳ 15,000 ರಿಂದ 20,000 ವರೆಗೆ, ವಸತಿ ಸೌಲಭ್ಯ ಇದೆ. ಸಂಪರ್ಕಿಸಿ:
9187073404

WANTED
1) FARM SUPERVISORS
Age limit: Within 30 years. Should know M.S. Excel.
2) OFFICE ASSISTANT
Should know to speak Tamil & Hindi. Age limit: Within 45 years. Contact:
Mob: 63660 42375

COMMERCIAL SITE FOR RENT
Koorgalli KIADB 10,000 Sqft Corner site, build to suite as per req. Contact:
7848987005, 9164350357

ಹೊಸ ಮನೆ ಮಾರಾಟಕ್ಕಿದೆ
20"x30" - 3 BHK, E/F- ಲಲಿತಾದ್ರಿನಗರ, 3 Flr -Duplex ಬಾಲಾಜಿ ನಗರದಲ್ಲಿ (Good House Best Price) ಮಾರಾಟಕ್ಕೆ ಇದೆ.
Ph: 9480222708

SITE FOR SALE
1054 Sqft, North East Corner Site, RS 7200/Sqft (Negotiable) Dattagalli, DIRECT OWNER SITTING
9535171710 / 9740281710

ಜಮೀನುಗಳು ಮಾರಾಟಕ್ಕಿದೆ
ಮೈಸೂರು ತಾಲೂಕು ಜಯಪುರ ಹೋಬಳಿ ಹಾಗೂ ಕೋಟೆ ತಾಲೂಕು ಹಂಪಾಪುರ ಹೋಬಳಿಯಲ್ಲಿ ಫಾರಂ ಹೌಸ್ ಸೆಟ್ಟಿಂಗ್ ಮಾಡಲು ಮತ್ತು ಲೇಔಟ್ ನಿರ್ಮಾಣ ಮಾಡಲು ಸಂಯುಕ್ತ ಜಮೀನುಗಳು ಮಾರಾಟಕ್ಕೆ ಸಿಗುತ್ತವೆ.
9945661696

ಬೇಕಾಗಿದ್ದಾರೆ
- ಸೂಪರ್ ವೈಸರ್/ರಿಸೆಪ್ಷನಿಸ್ಟ್–01
- ಹೆಲ್ಪರ್ ಮತ್ತು ಹೌಸ್ ಕೀಪಿಂಗ್ ಕೆಲಸಕ್ಕೆ–03,
- ಪಾರ್ಟ್ ಟೈಮ್ ಅಟೆಂಡೆಂಟ್ಸ್, ಸಮಯ : ಬೆಳಿಗ್ಗೆ 5.30 ರಿಂದ 9.00, ಸಾಯಂಕಾಲ 6.30 ರಿಂದ 10.00,
- ವಾಚ್‌ಮನ್–01, ಕೆಲಸದ ಜಾಗದಲ್ಲಿ ವಾಸವಿರುವವರಿಗೆ ಆದ್ಯತೆ ನೀಡಲಾಗುತ್ತದೆ. ಸಂಪರ್ಕಿಸಿ: ಆಸಕ್ತಿ ಉಳ್ಳವರು ಕೆಳಗಿನ ನಂಬರ್‌ಗೆ ತಮ್ಮ ವಿವರಗಳನ್ನು ವಾಟ್ಸ್ ಅಪ್‌ನಲ್ಲಿ ಕಳುಹಿಸತಕ್ಕದ್ದು.

ನಂ 17, ಹೆಲ್ತ್ ಸಿಟಿ, ಕನಕದಾಸನಗರ, ಮೈಸೂರು
79753 56711/ 91080 39302

ಕೆಲಸಕ್ಕೆ ಬೇಕಾಗಿದ್ದಾರೆ
ಕಚೇರಿ ಕೆಲಸಕ್ಕೆ ಹುಡುಗಿಯರು ಅಥವಾ ಗೃಹಿಣಿಯರು ಬೇಕಾಗಿದ್ದಾರೆ.
Call : 99726 88868
ಯಾವುದೇ ವಿದ್ಯಾರ್ಹತೆ ಇಲ್ಲ, ಬೇಸಿಕ್ ಕಂಪ್ಯೂಟರ್ ನಾಲೆಡ್ಜ್ ಇದ್ದರೆ ಸಾಕು

ನಿವೃತ್ತರಿಗೆ ವಿಶೇಷ ಅವಕಾಶ
ನಿವೃತ್ತರು, ವಿದ್ಯಾವಂತ ಗೃಹಿಣಿಯರು, ಬಿಸಿನೆಸ್ ವಲಯ ಇವರಿಗೆ ಆಹ್ವಾನ, ಆಹ್ವಾನಿತರಿಗೆ ವಿಶೇಷ ಸನ್ಮಾನವಿದೆ. Salary, PF, ESI, Incentives, ಇತರೆ ಸೌಲಭ್ಯಗಳಿವೆ. ಲೀಡರ್ ಆಗುವ ಅವಕಾಶ. ಸ್ಥಳ : ಹೋಟೆಲ್ ಮಯೂರ ಹೊಯ್ಸಳ, ಜೆ.ಎಲ್‌ಬಿ ರಸ್ತೆ, (ಮೆಟ್ರೋಪೋಲ್ ಹೋಟೆಲ್ ಎದುರು) ಮೈಸೂರು. ದಿನಾಂಕ :21–12–2025 ಭಾನುವಾರ ಬೆಳಿಗ್ಗೆ 11 ಗಂಟೆಗೆ Lunch Arranged
Contact : 9448188504, 7349052084, 9611073077

ಉಚಿತ ಕಣ್ಣು ತಪಾಸಣೆ ಉಚಿತ ಕನ್ನಡಕ ವಿತರಣೆ
21.12.2025 ಭಾನುವಾರ ರೋಟರಿ ಸಭಾಂಗಣ ಮುಡಾ ಎದುರು, ಮೈಸೂರು ಕಸ್ತೂರಿ ಚಂದ್ರು
8867688676

ಮೈಸೂರಿನಲ್ಲಿ DTCP Approved ಬಡಾವಣೆಗಳಲ್ಲಿ ನಿವೇಶನಗಳು ದೊರೆಯುತ್ತವೆ
1) ಟಿ.ನರಸೀಪುರ ಮುಖ್ಯ ರಸ್ತೆ.
2) ಹೆಚ್.ಡಿ. ಕೋಟೆ ಮುಖ್ಯ ರಸ್ತೆ
3) ಕೆಲ್ಲಹಳ್ಳಿ ಪೆರಿಫೆರಲ್ ರಿಂಗ್ ರಸ್ತೆ.
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.
ಶ್ರೀ ರಮಣಶ್ರೀ ಡೆವಲಪರ್ಸ್
Mob: 7411914135

RAI ESTATES
RERA APPROVED — MUDA APPROVED — E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayraji Rao Road, Bamboo Bazar, Mysuru - 570 001

ಹೊಸ ಲೇಔಟ್ಸ್ ಆರಂಭವಾಗಿದೆ
- T.N ಪುರ ರಸ್ತೆ – ಸಪ್ತಮಾತೃಕ, ಪ್ರಶಾಂತ ಛಾಯ ಹೌಸಿಂಗ್ ಪ್ರಾಜೆಕ್ಟ್ ಪಕ್ಕ 14–25 ಲಕ್ಷ
- ಬನ್ನೂರು ರಸ್ತೆ – ಮಾನಸಿ ನಗರ ಹಿಂಬಾಗ ವಿದ್ಯಾವಿಕಾಸ್ ಕಾಲೇಜ್ ಎದುರು 25–49 ಲಕ್ಷ
- ಬೋಗಾಧಿ ರಸ್ತೆ – ಹೊಸ ಕ್ರಿಕೆಟ್ ಸ್ಟೇಡಿಯಂ ಜಟ್ಟಿ ಹುಂಡಿ ಹಿಂಬಾಗ 29 ಲಕ್ಷ
- 30X50 ಮರಟಿಕ್ಯಾತನಹಳ್ಳಿ 42 ಲಕ್ಷ

Brokers Excuse
81230 75038

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ: 12000 (24 CT)
Mob: 9108146123

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆಯಲ್ಲಿ ಇರುವ ಸುವ್ಯವಸ್ಥಿತ ಸಸ್ಯಾಹಾರಿ ಹೋಟೆಲ್‌ಗೆ, ಸೌತ್ ಅಸಿಸ್ಟೆಂಟ್ (South Assistant), ಸಪ್ಲೆಯರ್ / ವೆಯಿಟರ್ (Supplier / Waiter), ಕ್ಲೀನಿಂಗ್ / ವಾಷಿಂಗ್, ಕೌಂಟರ್ (counter) Continental Chef (ಕಾಂಟಿನೆಂಟಲ್ ಚೆಫ್) ಸಂಪರ್ಕಿಸಿ
7338392631

ಗ್ರಾವಲ್ ಕೆಮ್ಮಣ್ಣು ದೊರೆಯುತ್ತದೆ
ಜಮೀನು 10 ಗುಂಟೆ 5 ಗುಂಟೆ, 20 ಗುಂಟೆ ಬೇಕಾದವರು. ಸಂಪರ್ಕಿಸಿ
7259407518
8310220458

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535175624

ಬೇಕಾಗಿದ್ದಾರೆ
ಮೈಸೂರಿನ ಸುತ್ತಮುತ್ತ ಕೆಲಸ ಮಾಡಲು ಸೂಪರ್‌ವೈಸರ್ ಹಾಗೂ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
7019935825
8970944445

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

House for sale
30x40 East Facing 4bhk with attached bath rooms, 3 car parkings with lift option Triplex house near Andolana Circle Ramakrishna Nagar, A & B block is for sale
9620607138, 8105751169

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. 12 ಗಂಟೆ ಕೆಲಸ ರಾತ್ರಿ ಪಾಳಯಕ್ಕೆ ಮಾತ್ರ, 1) ಆಲನಹಳ್ಳಿ, 2) ದೇವೇಗೌಡ ಸರ್ಕಲ್, 3) ನಾಡನಹಳ್ಳಿ 4) ವಸಂತನಗರ
9901014687

ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಏಜೆನ್ಸಿಗೆ ಫೀಲ್ ಆಫೀಸರ್ (Security Field officer) ಬೇಕಾಗಿದ್ದಾರೆ ಮತ್ತು ಮೈಸೂರಿನ ಸಿಟಿ ಸುತ್ತ ಮುತ್ತ ಕಂಪನಿಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಮತ್ತು ಹೌಸ್ ಕೀಪಿಂಗ್ (ಹುಡುಗರು) ಬೇಕಾಗಿದ್ದಾರೆ. ವಯೋಮಿತಿ 50 ವರ್ಷದ ಒಳಗೆ. ಸಂಪರ್ಕಿಸಿ:
9035050652, 9900212487

100% ಉದ್ಯೋಗವಕಾಶ
ವರ್ಕ್ ಫ್ರಂ ಹೋಂ ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ ಹಾಗೂ ಪುರುಷರಿಗೆ. ವಯಸು: 18 ರಿಂದ 65 ರವರೆಗೆ. ಆಫೀಸ್‌ಗಳಿಗೆ 4th, 7th, 10th, ITI, Any Degree ಪಾಸ್ / ಫೇಲ್ ಆದ ಯುವಕ, ಯುವತಿಯರಿಗೆ ಹಾಗೂ ಇಎಸ್ಐ, ಪಿಎಫ್‌ನೊಂದಿಗೆ ಮೊದಲ ಕರೆ ಮಾಡಿ 22,000 – 45,000.
6362024878, 9019593297

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಾದ್ಯಂತ ಕಂಪನಿಗಳಿಗೆ, ಆಫೀಸ್‌ಗಳಿಗೆ & ಶೋರೂಂಗಳಿಗೆ ಯುವಕರು, ಯುವತಿಯರು ಬೇಕಾಗಿದ್ದಾರೆ. 7th, 10th, PUC, Any Degree ವಸತಿ, ಊಟ ಉಚಿತವಾಗಿದೆ. ಸಂಬಳ + ಓ.ಟಿ. 20,000 ದಿಂದ 45,000. ಸಂಪರ್ಕಿಸಿ:
Mob: 9916744622

ನೇರ ಆಯ್ಕೆ ಉದ್ಯೋಗವಕಾಶ
ವರ್ಕ್ ಫ್ರಮ್ ಹೋಂ ಮನೆಯಿಂದಲೇ ಕೆಲಸ ಪಾರ್ಟ್ ಟೈಮ್ & ಫುಲ್ ಟೈಮ್ ವರ್ಕ್‌ಗಳಿಗೆ ವಿದ್ಯಾರ್ಥಿಗಳಿಗೆ + ಮಹಿಳೆಯರಿಗೆ ಹಾಗೂ ವಯಸ್ಕರಿಗೆ ಮೊದಲ ಆದ್ಯತೆ. ಕೊರಿಯರ್ ಸೌಲಭ್ಯವಿದೆ. 7th, 10th, PUC, Any Degree ಪಾಸ್, ಫೇಲ್ ಆದವರು. 20,000 ದಿಂದ 25,000. ಸಂಪರ್ಕಿಸಿ:
Mob: 8095133188

ಬೇಕಾಗಿದ್ದಾರೆ
ಕುವೆಂಪು ನಗರದಲ್ಲಿ ಇರುವ ನಿಧಿ ಬೋಟಿಕ್‌ನಲ್ಲಿ ಕೆಲಸ ಮಾಡಲು ಹುಡುಗಿ ಬೇಕಾಗಿದ್ದಾರೆ
8296695765
7348843351

HOUSE FOR SALE
20X30 E/F, # 485 2ನೇ ಕ್ರಾಸ್, ESF ಬ್ಲಾಕ್ ರಾಮಕೃಷ್ಣ ನಗರ, ಸಾಯಿಬಾಬ ಟೆಂಪಲ್ ಹಿಂಬಾಗ G.F + F.F + S.F. 1ರೂಂ
8217786985

SITES FOR SALE
30x40 Site in ದಟ್ಟಗಳ್ಳಿಯಲ್ಲಿ Near KEB Circle, 70 Lakhs. With Loan ಸಹಿತ. ಅಥವಾ Plan Elivation ಸಹಿತ ಮನೆ ಕೂಡ Construction ಮಾಡಿ ಕೊಡುತ್ತೇವೆ.
9620528490



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645, 9008711654

FOR SALE
30x40 Sites Near RT Nagar BSNL Layout @ Just 22 Lakhs
20x30, 30x40 MUDA Approved Sites Near Rainbow School Bogadi
30x40|30x50 MUDA Sites KHB Attach, HD Kote Road.
2 & 3 BHK Apartments @ Ramakrishna Ngr
Commercial Properties Also Available
PRAKRUTHI PROPERTIES
95386 90359, 90359 90359

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 9964733988

FOR SALE
20x30 New Duplex House Nr T.Narsipura Ring Road.
30x40 Duplex House @ Dattagalli
40x120 Site@ 80 Feet Road Dattagalli
33X40 SOUTH WEST CORNER SITE @ KABINI LAYOUT, SRIRAMPURA.
40x45 Duplex Nr Vijaya Ngr
35x60 Commercial, 20x30/40x60 /50x80 Sites @ Srirampura
40x60 Site@ Shardha Lyt, JP Ngr
PRAKRUTHI PROPERTIES
95386 90359, 90359 90359

FARM HOUSE AVAILABLE
FULLY FURNISHED FARM HOUSE available for new year celebration. Location: Near Mysore Airprot
8008705679

"ಶ್ರೀ ಲಕ್ಷ್ಮಿವೆಂಕಟೇಶ್ವರಸ್ವಾಮಿ ಪ್ರಸನ್ನ"
ಒನಕೆಯಿಂದ ಉಳುಕು ತೆಗೆಯಲಾಗುತ್ತದೆ. (ಕೈಕಾಲು, ಸೊಂಟ, ಬೆನ್ನು, ಕುತ್ತಿಗೆ) # 256, ನಾಯಕರ ಬೀದಿ, ಹಿನಕಲ್, ಮೈಸೂರು.
9880819563
ತಿಮ್ಮ ನಾಯಕ

ನಿವೇಶನಗಳು ಮಾರಾಟಕ್ಕಿದೆ
30x47 (E/S) ಕಾರ್ನರ್ ಜ್ಞಾನಭಾರತಿ(ದಡದಹಳ್ಳಿ) (ಎದುರುಗಡೆ ಪಾರ್ಕ್), 30x40 ವಿಮಾನನಗರ (ದಡದಹಳ್ಳಿ) (ದಕ್ಷಿಣ ದಿಕ್ಕು ಎದುರುಗಡೆ ಪಾರ್ಕ್), 30x50 ಪೂರ್ವ ದಿಕ್ಕು(ವಿಶಾಖನಗರ), (ನಿಯರ್ ನ್ಯೂ R.T. Nagar ಯಡಹಳ್ಳಿ)
9980325199

SITE FOR SALE
Near Ring Road Dattagalli 30x50 East, West, South.
Mob: 94499 90513

WANTED TEACHERS
Jnanajyothi Vidyalaya, Beerihundi. (High-School). English-1 and Social Science-1. Teachers wanted immediately.
9845390377, 8197057626

SITES FOR SALE
MUDA Approved East Facing 40x62 Two Adjacent Sites for sale @ Bhugathahalli, Ready to Construct.
Contact
7411118490 / 9845114050

ಬೇಕಾಗಿದ್ದಾರೆ
ಹಾಸ್ಟೆಲ್ ಕ್ಲೀನಿಂಗ್ ಕೆಲಸಕ್ಕೆ ಲೇಡೀಸ್ ಬೇಕಾಗಿದ್ದಾರೆ. ಸಂಬಳ : 10,000/– ಸ್ಥಳ : ಉನ್ನತಿನಗರ (ಬನ್ನಿಮಂಟಪ). ಮೈಸೂರು
9964242430

ಸೈಟು ಬೇಕಾಗಿದೆ
ಚಿಕ್ಕಹಳ್ಳಿ/ ವಾಜಮಂಗಲ / ವರುಣ ಕ್ಯಾಲಿಬರ್/ ಜೆಎಸ್‌ಎಸ್ 3ನೇ ಹಂತ / ವರುಣ ಬಸವೇಶ್ವರ/ ನಿರ್ಮಾಣ್ ನಗರ/ ಲಲಿತಾದ್ರಿನಗರ/ ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ / ಟಿ ನರಸೀಪುರ ರಸ್ತೆ / ಬನ್ನೂರು ರಸ್ತೆ
ಮೊ: 9686071750

SITES FOR SALE
40x60 S/F NEXT TO EXPRESS HIGHWAY, ILAVALA BROKERS EXCUSE
9449448797

ಹೊಸ ಮನೆ ಮಾರಾಟಕ್ಕಿದೆ
ಹುಣಸೂರಿನ ಸೋಮನಹಳ್ಳಿಯ ಹೊಸ ಬಡಾವಣೆಯಲ್ಲಿ 2 BHK ಹೊಸ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ:
8971015729

ಜಮೀನು ಮಾರಾಟಕ್ಕಿದೆ
1 ACRE LAND FOR SALE
ಮೈಸೂರು TO ಬೆಂಗಳೂರು ಹೊಸ ಹೆದ್ದಾರಿಯ ಸರ್ವಿಸ್ ರೋಡ್ ಪಕ್ಕದಲ್ಲಿ ವಾಣಿಜ್ಯ ವ್ಯವಹಾರಗಳಿಗೆ ಸೂಕ್ತವಾಗಿರುತ್ತದೆ. ಸಂಪೂರ್ಣ ವಿವರಗಳಿಗೆ ಸಂಪರ್ಕಿಸಿ
73488-31599

ಬೇಕಾಗಿದ್ದಾರೆ
ಮನೆ ಕೆಲಸಕ್ಕೆ ಸರಸ್ವತಿಪುರಂ
7411216781

Plot for Sale
30X40 South Facing Plot , Excellent Location With All Developments, Opposite To MUDA Park, Pearl Habitat Layout, With 40 Ft Road , Adjacent To Vijaynagar 4th Stage ,near To Hootgalli Cmc Office, Clear Title & Ekhata ,easy Bank Loan Available. Direct Owner, Brokers Stay Away.
8197375001, 9148781111

WANTED
Need Telecaller / Officer Assistants for Travel Company Salary 8,000+
8722640344

CHANGE OF NAME
I PRANAV KARTHIK, Residing at #5, Kaveri Block, PTC Campus Mysuru-570010, Have changed My name From Pernamitta Venkata Pranav Karthik to : Pranav Karthik vide affidavit sworn before notary
M. Ananthamurthy, Mysore
Dated : 16-12-2025

ಕಾರ್ ಮಾರಾಟಕ್ಕಿದೆ
1. INNOVA – MODEL -2006 (MYSORE – OWNER, 2,50,000/- KM)
2. TATA INDIGO – ECS – MODEL – 2015 (SINGLE OWNER / YELLOW BOARD, 1,35,000/- KM)
ಸಂಪರ್ಕಿಸಿ: 9448150408

ಕಮರ್ಷಿಯಲ್ ಮಳಿಗೆ ಮತ್ತು ಸೈಟ್ ಮಾರಾಟಕ್ಕಿದೆ
ಕೆಬಿಎಲ್ ಗ್ರೀನ್ ಹುಡ್ ಕಮರ್ಷಿಯಲ್ ಕಾರ್ನರ್ ಮಳಿಗೆ ಮಾರಾಟಕ್ಕಿದೆ ಮತ್ತು ಉತ್ತರ ಪೂರ್ವ ಕಾರ್ನರ್ ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ. ಸಪ್ತಮಾತೃಕ ಹಂತ–1 ಮಹಾವೀರ್‌ನಗರ, ಮೈಸೂರು. ಸಂಪರ್ಕಿಸಿ:
9448601655

HOUSE/ SITES FOR SALE
From Mysore Palace 2kmt, 22x32 N.F. - 700 SqFt, 20x40 G + Triplex- InCompleted BoreWell + Lift Facilities
Call : 9448848415

SITES FOR SALE
30x40, 40x60 Sri Rampura Ring Road, Mysuru
Mob : 8050345574

ನವೋದ್ಯಮ
ಸ್ವಂತ ಉದ್ಯಮ ಆರಂಭಿಸಲು ಬಂಡವಾಳ ಒದಗಿಸಲಾಗುತ್ತದೆ.
* Tea/Coffee Shop, * Chat Center / Gobi Shop, * Food Canteen, * Pg's, * Play Home / Kinder garten, * Beauty Parlour.
9611263045

ತಕ್ಷಣ ಬೇಕಾಗಿದ್ದಾರೆ
1) ಸೌತ್ ಇಂಡಿಯನ್ ಭಟ್ರು –2
2) ನಾನ್ ವೆಜ್ ಭಟ್ರು –2
3) ಕ್ಯಾಶಿಯರ್ – 2
4) ಸರ್ವಿಶ್ / ಕ್ಯಾಪ್ಟನ್ –4
9901506954

MYSURU RETINA CARE
STAFF REQUIRED
1. OPTOMETRIST
CONTACT NUMBER
7338369364 / 0821-2543244
NIVEDITHA NAGAR, MYSORE-570022 ABOVE ANANTHAM CAFÉ

ತಕ್ಷಣ ಬೇಕಾಗಿದ್ದಾರೆ
ಕಾರ್ಖಾನೆಯಲ್ಲಿ ಹೆಲ್ಪರ್ ಕೆಲಸ ಮಾಡಲು ಪುರುಷ ಅಭ್ಯರ್ಥಿಗಳು ತಕ್ಷಣ ಬೇಕಾಗಿದ್ದಾರೆ. ವಿದ್ಯಾರ್ಹತೆ SSLC, PUC, ITI, Pass or Fail ಆಕರ್ಷಕ ವೇತನ ESI + PF ಸೌಲಭ್ಯವಿರುತ್ತದೆ. ಹಾಗೂ ವಸತಿ ಸೌಲಭ್ಯವಿದೆ. 8 ಘಂಟೆಗಳ ಕೆಲಸ ಹಾಗೂ 12 ಘಂಟೆಗಳ ಕೆಲಸ ದ ಅವಧಿ. ಸ್ಥಳ : ಬದನಗುಪ್ಪೆ ಇಂಡಸ್ಟ್ರೀಯಲ್ ಏರಿಯಾ (NEAR) ಚಾಮರಾಜನಗರ.
Contact : 7019378337 / 9483076815 / 9902708581

COMMERCIAL SITE FOR SALE
55 X 100, E/F
50 Ft. Road
YESH MEGA CITY
Mysore-Hunsur Road
8971444919

ಸೈಟು ಮಾರಾಟಕ್ಕಿದೆ
40x60 ಸೈಟು N/F @ Rs. 93 ಲಕ್ಷ ರಿಂಗ್ ರೋಡ್‌ನಿಂದ 1 ಕಿ.ಮೀ. APMC Yard ನಿಂದ 3 ಕಿ.ಮೀ K.R. Circle ನಿಂದ 8 ಕಿ.ಮೀ ತಕ್ಷಣ ಮನೆ ಕಟ್ಟಬಹುದು.
Call : 9964923399

ಕೇರ್ ಟೇಕರ್ ಕೆಲಸ
(ವಯಸ್ಸಾದವರನ್ನು ನೋಡಿಕೊಳ್ಳಲು) ಅನುಭವ ಇರುವ ಇಲ್ಲದೆ ಇರುವ ಪುರುಷರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. ಬೆಳಿಗ್ಗೆ ಅಥವಾ ರಾತ್ರಿ ಅಥವಾ 24 ಸೇವೆ ಮಾಡುವವರು
ಸಂಪರ್ಕಿಸಿ 8951717070
ಸ್ಥಳ: ಮೈಸೂರು, ಕೂರ್ಗ್ ಹಾಗೂ ಬೆಂಗಳೂರು

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡುಗಳು
a) ಪಂಪ್ ಹೌಸ್(ಕೆಆರ್‌ಎಸ್ ರಸ್ತೆ)
b) ಮೊಗರಹಳ್ಳಿ (ಮಂಟಿ)
c) ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ
d) ಕೂರ್ಗಳ್ಳಿ ಇಂಡಸ್ಟ್ರಿಯಲ್ ಏರಿಯಾ.
2) ಲೇಡಿ ಗಾರ್ಡ್, a) ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಉಚಿತ ವಸತಿ, ಊಟ, ESI / PF
9686422400 / 9242406261

ಬೇಕಾಗಿದ್ದಾರೆ
* ಮನೆ ಅಡುಗೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. * ಸೆಕ್ಯೂರಿಟಿ ಕೆಲಸಕ್ಕೆ ಪುರುಷ ಬೇಕಾಗಿದ್ದಾರೆ. ವಯಸ್ಸಿನ ಮಿತಿ 40 ವರ್ಷ, * ಅನುಭವವುಳ್ಳ ಪರ್ಸನಲ್ ಡ್ರೈವರ್ ಬೇಕಾಗಿದ್ದಾರೆ. ವಸತಿ ಸೌಲಭ್ಯ ನೀಡಲಾಗುತ್ತದೆ. ಆಸಕ್ತಿವುಳ್ಳವರು ಮಾಹಿತಿಗಾಗಿ ಸಂಪರ್ಕಿಸಿ: ಆಲನಹಳ್ಳಿ (ನಂದಿನಿ ಬಡಾವಣೆ)
Contact : 9900515650

SLEEPWAVE MATTRESS Pvt Ltd
WANTED
ಅನುಭವವುಳ್ಳವರು ಮಾತ್ರ, ಟ್ಯಾಲಿ ಅಕೌಂಟೆಂಟ್ 2 ಹುದ್ದೆಗಳು ಟೈಲರಿಂಗ್ 5 ಹುದ್ದೆಗಳು, ಸಂಬಳ : 15,000 ರಿಂದ 20 ಸಾವಿರದವರೆಗೆ, ಕೆಲಸಕ್ಕೆ (ಹೆಲ್ಪರ್), ಹುಡುಗರು 10 ಹುದ್ದೆ 12,000 ರಿಂದ 15 ಸಾವಿರದವರೆಗೆ. ವಯಸ್ಸು : 18 ರಿಂದ 35 ರವರೆಗೆ, ಮೊದಲು ಮೈಸೂರುನವರಿಗೆ ಆದ್ಯತೆ ನೀಡಲಾಗುವುದು.
M.No : 9036824741

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ (II Marriages Also)
9343175000

ಸೈಟು ಮಾರಾಟಕ್ಕಿದೆ
ಬೋಗಾದಿ ರಸ್ತೆಯಲ್ಲಿ ಸೈಟುಗಳು ಮಾರಾಟಕ್ಕಿವೆ 30X40 & 30X50 START 22 ಲಕ್ಷ
Mob : 9740407921

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಶೋರೂಮ್ ಹಾಗೂ ಬೈಕ್ ಶೋರೂಮ್‌ಗಳಿಗೆ, CASHIER, RECEPTIONIST, HR, ADMIN, ACCOUNT, ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ, (18k -38k), SSLC, PUC, DEGREE
6366718368, 9739121355

ಮೈಸೂರು ಮಿತ್ರ
46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ

ಬೋನಿಗೆ ಬಿದ್ದ ಚಿರತೆ



ತಿ.ನರಸೀಪುರ, ಡಿ.19– ಗ್ರಾಮಸ್ಥರಿಗೆ ಮತ್ತು ಜಾನುವಾರುಗಳಿಗೆ ಉಪಟಳ ನೀಡುತ್ತಿದ್ದ ಚಿರತೆಯೊಂದು ಅರಣ್ಯ ಇಲಾಖೆ ಇಟ್ಟಿದ್ದ ಬೋನಿಗೆ ಬಿದ್ದಿದೆ.

ತಾಲೂಕಿನ ಶ್ರೀರಂಗರಾಜಪುರ ಗ್ರಾಮ ಸೇರಿದಂತೆ ಸುತ್ತ–ಮುತ್ತಲಿನ ಗ್ರಾಮಗಳಲ್ಲಿ ಚಿರತೆ ಕಾಣಿಸಿಕೊಂಡು ಜಾನುವಾರುಗಳನ್ನು ಭೇಟೆಯಾಡುತ್ತಿತ್ತು. ಗ್ರಾಮಸ್ಥರ ಕೋರಿಕೆ ಮೇರೆಗೆ ಅರಣ್ಯ ಇಲಾಖೆಯವರು ಶ್ರೀರಂಗರಾಜಪುರ ಗ್ರಾಮದ ಮಲ್ಲೇಶ್ ಎಂಬುವರ ಜಮೀನಿನಲ್ಲಿ ಬೋನು ಇಟ್ಟಿದ್ದರು.

ಈ ವೇಳೆ ಇಂದು ಚಿರತೆ ಬೋನಿಗೆ ಬಿದ್ದಿದ್ದು, ಅದನ್ನು ಅರಣ್ಯ ಇಲಾಖೆ ಮೈಸೂರಿನ ಕೂರ್ಗಳ್ಳಿಯಲ್ಲಿರುವ ಪ್ರಾಣಿಗಳ ಪುನರ್ವಸತಿ ಕೇಂದ್ರಕ್ಕೆ ಬಿಡಲಾಗಿದೆ. ನಂತರ ದಿನಗಳಲ್ಲಿ ಅದನ್ನು ಕಾಡಿಗೆ ಬಿಡಲಾಗುವುದು ಎಂದ ಮೂಲಗಳು ತಿಳಿಸಿವೆ.

ಕುಡಿತಕ್ಕೆ ಹಣ ನೀಡದ ಗೆಳೆಯನ ಕೊಲೆ


ಕೊಲೆ ಮಾಡಿ ಮನೆಯಲ್ಲಿ ಮಲಗಿದ್ದ ಇಬ್ಬರು ಆರೋಪಿಗಳ ಬಂಧನ



ಖಾಜಪೀರ್



ಜಾಭೀರ್



ಇನಾಯತ್

ಹುಣಸೂರು, ಡಿ.19– ರಾಜ್ಯದಲ್ಲಿ ಇತ್ತೀಚೆಗೆ ಗಾಂಜಾ, ಡ್ರಗ್ಸ್, ಮಾದಕ ವಸ್ತುಗಳ ಸೇವನೆ ಮತ್ತು ಕುಡಿತದ ಚಟದಿಂದ ಕೊಲೆ, ಸುಲಿಗೆಗಳು ಹೆಚ್ಚಾಗುತ್ತಿದೆ. ಹೆಚ್.ಡಿ.ಕೋಟೆಯಲ್ಲಿ ಗಾಂಜಾ ನಶೆಯಲ್ಲಿ ವ್ಯಕ್ತಿಯೊಬ್ಬ ದೊಣ್ಣೆಯಿಂದ ಹೊಡೆದು ಸ್ನೇಹಿತನನ್ನು ಕೊಲೆ ಮಾಡಿದ ಘಟನೆ ಮಾಸುವ ಮುನ್ನವೇ ಕುಡಿಯಲು ಹಣ ಕೊಡಲಿಲ್ಲ ಎಂಬ ಕಾರಣದಿಂದ ವ್ಯಕ್ತಿಗಳಿಬ್ಬರು ಗೆಳೆಯನನ್ನೇ ಕೊಂದು ಪೊಲೀಸರ ಅತಿಥಿಯಾಗಿರುವ ಘಟನೆ ಸಂಭವಿಸಿದೆ.

ಹುಣಸೂರು ಪಟ್ಟಣದ ವಿಶ್ವೇಶ್ವರಯ್ಯ ಸರ್ಕಲ್ ಆಟೋ ಸ್ಟ್ಯಾಂಡಿನಲ್ಲಿ ಗುರುವಾರ ರಾತ್ರಿ ಈ ಘಟನೆ ಸಂಭವಿಸಿದೆ. ನಿಜಾಂ ಮೊಹಲ್ಲಾದ ದಾದಾಪೀರ್ ಅವರ ಪುತ್ರ ಖಾಜಪೀರ್(40) ಕೊಲೆಯಾದ ದುರ್ದೈವಿ.

ನಿಜಾಂ ಮೊಹಲ್ಲಾದ ಲೇಟ್ ರಫೀಕ್ ಅವರ ಪುತ್ರ ಜಾಭೀರ್(38) ಹಾಗೂ ಖಾಜಿ ಮೊಹಲ್ಲಾದ ಅತಾವುಲ್ಲ ಅವರ ಪುತ್ರ ಇನಾಯತ್ ಉಲ್ಲಾ (43) ಎಂಬುವರೆ ಕುಡಿಯಲು ಹಣ ನೀಡಲಿಲ್ಲವೆಂದು ಸ್ನೇಹಿತನನ್ನೆ ಮರದ ಪಟ್ಟಿಯಿಂದ ಒಡೆದು ಕೊಲೆ ಮಾಡಿರುವ ಅರೋಪಿಗಳು.

ಮೃತ ಖಾಜಪೀರ್, ಜಾಭೀರ್ ಹಾಗೂ ಇನಾಯತ್ ಉಲ್ಲಾ ಇವರುಗಳು ಲಾರಿ ಲೋಡರ್ಸ್‌ಗಳಾಗಿದ್ದು, ಪರಸ್ಪರ ಸ್ನೇಹಿತರಾಗಿದ್ದರು. ಗುರುವಾರ ಮದ್ಯಾಹ್ನ ಕುಡಿದು ಪರಸ್ಪರ ಗಲಾಟೆ ಮಾಡಿಕೊಂಡಿದ್ದರು. ಮತ್ತೆ ನಂತರ ಎಲ್ಲರೂ ವಿಶ್ವೇಶ್ವರಯ್ಯ ಸರ್ಕಲ್ ಬಳಿ ಇರುವ ವೈನ್ ಸ್ಟೋರ್‌ನಲ್ಲಿ ಕುಡಿದು ಮತ್ತಷ್ಟು ಕುಡಿಯಲು ಜಾಭೀರ್ ಬಳಿ ಹಣವಿಲ್ಲದಿದ್ದಾಗ ಖಾಜಪೀರ್ ಬಳಿ 150 ರೂ. ಕೇಳಿದ್ದಾನೆ. ನನ್ನ ಬಳಿ ಹಣ ಇಲ್ಲ ಎಂದಿದ್ದಕ್ಕೆ ಅರೋಪಿಗಳಿಬ್ಬರು ಸೇರಿ ಖಾಜಪೀರ್ ಮೇಲೆ ಮರದ ಪಟ್ಟಿಯಿಂದ ತಲೆ, ಎದೆ ಹಾಗೂ ಗುಪ್ತಾಂಗಕ್ಕೆ ಮನಸೊ ಇಚ್ಛೆ ಹೊಡೆದು ಕೊಲೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಳಗ್ಗೆ ಅಟೊ ಸ್ಟ್ಯಾಂಡಿನಲ್ಲಿ ಮೃತದೇಹ ಬಿದ್ದಿರುವುದನ್ನು ನೋಡಿದ ಆಟೋ ಚಾಲಕರು ಪೊಲೀಸರು ಮತ್ತು ಮೃತನ ಮನೆಯವರಿಗೆ ವಿಷಯ ಮುಟ್ಟಿಸಿದ್ದಾರೆ. ಇವರುಗಳು ಕುಡಿದು ಗಲಾಟೆ ಮಾಡಿಕೊಂಡಿದ್ದ ವಿಷಯವನ್ನು ಪೊಲೀಸರಿಗೆ ತಿಳಿಸಿದ್ದಾರೆ. ತಕ್ಷಣ ಜಾಗೃತರಾದ ನಗರ ಪೊಲೀಸ್ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ಮತ್ತು ಸಿಬ್ಬಂದಿ ಸ್ಥಳಕ್ಕೆ ದಾವಿಸಿ ವಿಷಯ ಸಂಗ್ರಹಿಸಿ ತಕ್ಷಣ ಅರೋಪಿಗಳನ್ನು ಒಂದೆ ಗಂಟೆಯಲ್ಲಿ ಬಂಧಿಸಿದ್ದಾರೆ.

ಆರೋಪಿಗಳು ಕುಡಿದ ಅಮಲಿನಲ್ಲಿ ರಾತ್ರಿ ಕೊಲೆ ಮಾಡಿ ಮನೆಯಲ್ಲಿ ಗಡದ್ದಾಗಿ ನಿದ್ರೆ ಮಾಡುತ್ತಿದ್ದರಂತೆ. ಕೊಲೆಯ ಮಾಹಿತಿ ಸಂಗ್ರಹಿಸಿದ ಪೊಲೀಸರು ಮನೆಯ ಮೇಲೆ ದಾಳಿ ಮಾಡಿ ನಿದ್ರೆಯಲ್ಲಿದ್ದ ಆರೋಪಿಗಳನ್ನು ಬಂಧಿಸಿ ಜೈಲಿಗಟ್ಟಿದ್ದಾರೆ.

ಕಾರ್ಯಾಚರಣೆಯಲ್ಲಿ ಸಬ್‌ಇನ್ಸ್‌ಪೆಕ್ಟರ್ ಜಮೀರ್ ಅಹಮದ್, ಸಿಬ್ಬಂದಿಗಳಾದ ಅರುಣ, ರಾಜರತ್ನಮ್, ಯೋಗೇಶ್, ಬಸವೇಗೌಡ, ಇರ್ಫಾನ್ ಭಾಗವಹಿಸಿದ್ದರು.

ಘಟನಾ ಸ್ಥಳಕ್ಕೆ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಡಿವೈಎಸ್ಪಿ ರವಿ, ಬೆರಳಚ್ಚು ತಜ್ಞರು, ಎಫ್‌ಎಸ್‌ಎಲ್ ತಂಡದವರು ಪರಿಶೀಲನೆ ನಡೆಸಿದರು. ಶವ ಪರೀಕ್ಷೆಯ ನಂತರ ಕುಟುಂಬಕ್ಕೆ ಮೃತ ದೇಹ ಹಸ್ತಾಂತರಿಸಿದರು.

ಕೋಟೆಯಲ್ಲಿ ಗಾಂಜಾ ನಶೆಯಲ್ಲಿ ಗೆಳೆಯನ ಕೊಲೆ ಮಾಡಿ ಪರಾರಿಯಾಗಿದ್ದವನ ಬಂಧನ



ತವೀದ್

ಹೆಚ್.ಡಿ.ಕೋಟೆ: ಗಾಂಜಾ ನಶೆಯಲ್ಲಿ ಗೆಳೆಯನನ್ನು ದೊಣ್ಣೆಯಿಂದ ಹೊಡೆದು ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಪಟ್ಟಣದ ಮುಸ್ಲಿಂ ಬ್ಲಾಕ್‌ನಲ್ಲಿ ಕಲಾಂ ಎಂಬಾತನನ್ನು ಕೊಲೆ ಮಾಡಿದ್ದ ಆರೋಪಿ ತವೀದ್‌ನನ್ನು ಹೆಚ್.ಡಿ.ಕೋಟೆ ಪಟ್ಟಣದ ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ತವೀದ್ ಪಾಷ ಹಾಗೂ ಕಲಾಂ ಪರಸ್ಪರ ಗೆಳೆಯರಾಗಿದ್ದು, ಕಳೆದ ಮಂಗಳವಾರಗಾಂಜಾ ನಶೆಯಲ್ಲಿ ಮಾತಿನ ಚಕಮಕಿ ನಡೆದು ಅದು ವಿಕೋಪಕ್ಕೆ ತಿರುಗಿ ದೊಣ್ಣೆಯಿಂದ ಹೊಡೆದು ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಕಲಾಂ ಸಾವಿಗೀಡಾದ ಸುದ್ದಿಯ ನಂತರ ಪರಾರಿಯಾಗಿದ್ದ ತವೀದ್‌ನನ್ನು ಬಂಧಿಸಿದ್ದಾರೆ.

ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ಅವರ ಮಾರ್ಗದರ್ಶನದಲ್ಲಿ ಸ್ಥಳೀಯ ಪೊಲೀಸರು ಕಾರ್ಯತಂತ್ರ ನಡೆಸಿ ಹುಣಸೂರಿನ ಸುತ್ತಮುತ್ತ ಈತನ ಇರುವಿಕೆಯನ್ನು ದೃಢಪಡಿಸಿಕೊಂಡು ಹುಣಸೂರಿನ ಬಸ್ ನಿಲ್ದಾಣದಲ್ಲಿ ಆರೋಪಿಯನ್ನು ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ. ಘಟನೆ ನಡೆದ 48 ಗಂಟೆಗಳ ಅವಧಿಯಲ್ಲಿ ಆರೋಪಿ ಯನ್ನು ಬಂಧಿಸಿ ಸ್ಥಳ ಮಹಜರು ನಡೆಸಿದ ತರುವಾಯ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುವದಾಗಿ ಆರಕ್ಷಕ ವೃತ್ತ ನಿರೀಕ್ಷಕ ಗಂಗಾಧರ್ ತಿಳಿಸಿದ್ದಾರೆ.

ಆರೋಪಿಯ ಬಂಧನದ ಕಾರ್ಯಾಚರಣೆಯಲ್ಲಿ ಸೈಯದ್ ಕಬೀರ್, ಯೋಗೇಶ್, ಮೋಹನ್ ಹಾಗೂ ಬೀರಪ್ಪ ಪಾಲ್ಗೊಂಡಿದ್ದರು.

ರಾಜ್ಯಮಟ್ಟದ ಫುಟ್ಬಾಲ್ ಪಂದ್ಯಾವಳಿಗೆ ಚಾಲನೆ

●ವಿಜೇತರಿಗೆ ದಿ. ಧ್ರುವನಾರಾಯಣ್ ಮೆಮೋರಿಯಲ್ ಕಪ್ ●30 ತಂಡಗಳು ಭಾಗಿ ●ತಂದೆಯ ಕ್ರೀಡಾಸ್ಫೂರ್ತಿ ಸ್ಮರಿಸಿದ ದರ್ಶನ್



ನಂಜನಗೂಡಿನ ಜೂನಿಯರ್ ಕಾಲೇಜು ಮೈದಾನದಲ್ಲಿ ದಿ. ಆರ್.ಧ್ರುವನಾರಾಯಣ ಮೆಮೋರಿಯಲ್ ಕಪ್ ರಾಜ್ಯ ಮಟ್ಟದ ಫುಟ್ಬಾಲ್ ಪಂದ್ಯಾವಳಿಗೆ ಶಾಸಕ ದರ್ಶನ್ ಧ್ರುವನಾರಾಯಣ, ಪೆನಾಲ್ಟಿ ಗೋಲು ಹೊಡೆಯುವ ಮೂಲಕ ಚಾಲನೆ ನೀಡಿದರು.

ನಂಜನಗೂಡು: ನಂಜನಗೂಡಿನ ಕ್ರೀಡಾ ಇತಿಹಾಸದ ಗತ ವೈಭವವನ್ನು ಮರುಕಳಿಸಿ, ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಸತತ ಎರಡನೇ ಬಾರಿಗೆ ದಿ.ಆರ್. ಧ್ರುವನಾರಾಯಣರವರ ಮೆಮೋರಿಯಲ್ ಕಪ್ ರಾಜ್ಯಮಟ್ಟದ ಫುಟ್ಬಾಲ್ ಪಂದ್ಯಾವಳಿಯನ್ನು ನಡೆಸಲಾಗುತ್ತಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ತಿಳಿಸಿದರು.

ನಗರದ ಜೂನಿಯರ್ ಕಾಲೇಜ್ ಮೈದಾನದಲ್ಲಿ ದಿ. ಆರ್.ಧ್ರುವನಾರಾಯಣ ಮೆಮೊರಿಯಲ್ ಕಪ್ ರಾಜ್ಯಮಟ್ಟದ ಕ್ರೀಡಾ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದರು.

ಕಳೆದ ಮೂರು ದಶಕಗಳ ಹಿಂದೆ ನಂಜನಗೂಡು ಉತ್ತಮ ರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳನ್ನು ಹೊಂದುವ ಮೂಲಕ, ಕ್ರೀಡೆಗಳಿಗೆ ಹೆಚ್ಚು ಹೆಸರುವಾಸಿಯಾಗಿತ್ತು, ಇತ್ತೀಚಿನ ದಿನಗಳಲ್ಲಿ ಕ್ರೀಡಾಪಟುಗಳ ಆಸಕ್ತಿಯ ಕೊರತೆಯಿಂದಾಗಿ ಮತ್ತು ಕ್ರೀಡೆಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರಕದ ಕಾರಣ ಕ್ರೀಡೆಗಳು ಮರೆಯಾಗುತ್ತಿವೆ, ನಂಜನಗೂಡಿನ ಕ್ರೀಡಾ ಇತಿಹಾಸವನ್ನು ಮರು ಸ್ಥಾಪಿಸಿ ಕ್ರೀಡಾ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ನಂಜನಗೂಡಿನಲ್ಲಿ ಕ್ರೀಡೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಲಾಗುತ್ತಿದೆ.

ನನ್ನ ತಂದೆ ಆರ್. ಧ್ರುವನಾರಾಯಣ್ ಅವರು ಕೂಡ ಉತ್ತಮ ಫುಟ್ಬಾಲ್ ಪಟುವಾಗಿದ್ದರು, ನಾನು ಮತ್ತು ನನ್ನ ತಂದೆ ಮತ್ತು ತಾಯಿ ಜೊತೆಗೆ ಫುಟ್ಬಾಲ್ ಪಂದ್ಯಾವಳಿಗಳನ್ನು ವೀಕ್ಷಣೆ ಮಾಡುತ್ತಿದ್ದೆವು, ಅವರ ಸಂಸ್ಮರಣಾರ್ಥವಾಗಿ, ಹಾಗೂ ಫುಟ್ಬಾಲ್ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿ ಅವಕಾಶ ಕಲ್ಪಿಸುವ ಸಲುವಾಗಿ ಸತತ ಎರಡನೇ ಬಾರಿಗೆ ನಂಜನಗೂಡಿನಲ್ಲಿ ರಾಜ್ಯ ಮಟ್ಟದ ಫುಟ್ಬಾಲ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ, ಕ್ರೀಡಾಕೂಟದಲ್ಲಿ ರಾಜ್ಯಾದ್ಯಂತ ವಿವಿಧ ಜಿಲ್ಲೆಗಳಿಂದ ಸುಮಾರು 30 ತಂಡಗಳು ಭಾಗವಹಿಸುತ್ತಿವೆ ಎಂದರು.

ಹಿರಿಯ ಫುಟ್ಬಾಲ್ ಆಟಗಾರರಾದ ಯು.ಎನ್.ಪದ್ಮಾಭರಾವ್ ಮಾತನಾಡಿ ನಂಜನಗೂಡಿನಲ್ಲಿ ಫುಟ್ಬಾಲ್, ವಾಲಿಬಾಲ್ ಮತ್ತು ಕೊಕ್ಕೋ ಆಟಗಳ ರಾಷ್ಟ್ರೀಯ ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು ನಂಜನಗೂಡು ಕ್ರೀಡೆಗೆ ಹೆಚ್ಚಿನ ಹೆಸರುವಾಸಿಯಾಗಿತ್ತು, ದಸರಾ ಕ್ರೀಡೆಗಳಲ್ಲಿ ನಂಜನಗೂಡು ಹಬ್ಬದ ರೀತಿಯಲ್ಲಿ ಭಾಗಿಯಾಗುತ್ತಿತ್ತು, ಈ ಕ್ರೀಡೆ ಇತಿಹಾಸಕ್ಕೆ ಪುನರ್ಜೀವನ ಕಲ್ಪಿಸಿಕೊಟ್ಟ ಶ್ರೇಯಸ್ಸು ಶಾಸಕ ದರ್ಶನ್ ಧ್ರುವ ನಾರಾಯಣ್ ಅವರಿಗೆ ಸಲ್ಲುತ್ತದೆ ಎಂದರು.

ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ಜಿ.ರೆಡ್ಡಿ ಮಾತನಾಡಿದರು. ಮಾಜಿ ಶಾಸಕ ಕಳಲೆ ಕೇಶವ ಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಕೆ.ಜಿ.ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠ ನಾಯಕ, ವಿಧಾನಸಭಾ ಉಸ್ತುವಾರಿ ಹಿರೇಹಳ್ಳಿ ಸೋಮೇಶ್, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಮುಖಂಡರಾದ ಚಿನ್ನದಗುಡಿಹುಂಡಿ ಕುಳ್ಳಯ್ಯ, ದೊರಸ್ವಾಮಿ ನಾಯಕ, ಕಳಲೆ ರಾಜೇಶ್, ಮುರುಗೇಶ್, ಎನ್.ಟಿ.ಗಿರೀಶ್, ಎನ್.ಎಂ. ಮಂಜುನಾಥ್, ಸೋಮು, ಸತೀಶ್ ಗೌಡ, ಅಶೋಕ್, ಶಿವಪ್ಪದೇವರು, ಮುದ್ದುಮಾದಶೆಟ್ಟಿ, ಎಸ್ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉಪ್ಪಿನಹಳ್ಳಿ ಶಿವಣ್ಣ, ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯಕುಮಾರ್, ಗಂಗಾಧರ್, ಎಸ್.ಪಿ.ಮಹೇಶ್, ತಹಸಿಲ್ದಾರ್ ಶಿವಕುಮಾರ್ ಕಾಸ್ನೂರು, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಉಪಸ್ಥಿತರಿದ್ದರು.

ಹೊತ್ತಿ ಉರಿದ ಕೇರಳ ಸರ್ಕಾರಿ ಬಸ್

ಚಾಲಕನ ಸಮಯ ಪ್ರಜ್ಞೆಯಿಂದ ತಪ್ಪಿದ ಭಾರೀ ಅನಾಹುತ



ನಂಜನಗೂಡು: ಚಲಿಸುತ್ತಿದ್ದ ಕೇರಳ ಸರ್ಕಾರಿ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಸಂಪೂರ್ಣವಾಗಿ ಸುಟ್ಟು ಹೋದ ಘಟನೆ ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿಯ ತಾಲೂಕಿನ ಹೊಸಹಳ್ಳಿ ಗೇಟ್ ಬಳಿ ಜರುಗಿದ್ದು ಅದೃಷ್ಟ ವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಮೈಸೂರಿನಿಂದ ಕೇರಳ ರಾಜ್ಯಕ್ಕೆ ತೆರಳುತ್ತಿದ್ದ ಬಸ್(ಕೆಎಲ್–15 ಎ–2444) ನಲ್ಲಿ ಸುಮಾರು 41 ಪ್ರಯಾಣಿಕರು ಪ್ರಯಾಣಿಸುತ್ತಿದ್ದರು ಎನ್ನಲಾಗಿದ್ದು, ಮಧ್ಯ ರಾತ್ರಿ ಸರಿ ಸುಮಾರು 3 ಗಂಟೆಯ ವೇಳೆಗೆ ತಾಲೂಕಿನ ಹೊಸಹಳ್ಳಿ ಗೇಟ್ ಬಳಿ ಬಸ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು ಧಿಢೀರ್ ಬೆಂಕಿ ಕಾಣಿಸಿಕೊಂಡಿದೆ. ಚಾಲಕನ ಸಮಯ ಪ್ರಜ್ಞೆಯಿಂದ ಬಸ್ ನಿಲ್ಲಿಸಿ ಪ್ರಯಾಣಿಕರನ್ನು ಬಸ್ಸಿನಿಂದ ಕೆಳಗಿಳಿಸಿದ್ದಾರೆ. ಕೆಲವೇ ನಿಮಿಷಗಳಲ್ಲಿ ಭಾರಿ ಪ್ರಮಾಣದ ಬೆಂಕಿ ವ್ಯಾಪಿಸಿ ಬಸ್ ಸಂಪೂರ್ಣವಾಗಿ ಸುಟ್ಟು ಕರಕಲಾಗಿದೆ. ಅಗ್ನಿಶಾಮಕ ಸಿಬ್ಬಂದಿಗಳ ಆಗಮನಕ್ಕೆ ಮುನ್ನವೇ ಬಸ್ ಸುಟ್ಟು ಕರುಕಲಾಗಿದೆ ಕೇರಳ ರಾಜ್ಯಕ್ಕೆ ಸೇರಿದ ಸಾರಿಗೆ ಬಸ್ ಚಾಲಕ ಮತ್ತು ನಿರ್ವಾಹಕ ಪ್ರಯಾಣಿ ಕರಿಗೆ ಪರ್ಯಾಯ ಬಸ್ ವ್ಯವಸ್ಥೆ ಮಾಡಿ ಕಳುಹಿಸಿ ಕೊಟ್ಟಿದ್ದಾರೆ.

ನಂಜನಗೂಡು ಸಂಚಾರಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿದ್ದಾರೆ.

ಕೆ.ಆರ್.ನಗರಕ್ಕೆ ಮತ್ತೊಂದು ಪೊಲೀಸ್ ಠಾಣೆ ಅಗತ್ಯ

ಕೆ.ಆರ್.ನಗರ ಪೊಲೀಸ್ ಠಾಣೆಗೆ ಡಿಐಜಿಪಿ ಬೋರಲಿಂಗಯ್ಯ ಭೇಟಿ



ಡಿಐಜಿಪಿ ಬೋರಲಿಂಗಯ್ಯ ಕೆ.ಆರ್.ನಗರ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದರು.

ಕೆ.ಆರ್.ನಗರ: ಮೈಸೂರು ವಿಭಾಗದ ದಕ್ಷಿಣ ವಲಯ ಡೆಪ್ಯೂಟಿ ಜನರಲ್ ಆಫ್ ಪೊಲೀಸ್ (ಡಿಐಜಿಪಿ) ಎಂ.ಬಿ.ಬೋರಲಿಂಗಯ್ಯ ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಎನ್.ವಿಷ್ಣುವರ್ಧನ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮಲ್ಲಿಕ್ ಅವರುಗಳೊಂದಿಗೆ ಕೆ.ಆರ್.ನಗರ ಪೊಲೀಸ್ ಠಾಣೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಕೆ.ಆರ್.ನಗರಕ್ಕೆ ಮತ್ತೊಂದು ಪೊಲೀಸ್ ಠಾಣೆ ಅವಶ್ಯಕತೆ ಇರುವುದಾಗಿ ತಿಳಿಸಿದ್ದಾರೆ.

ಎಸ್‌ಪಿ ಮತ್ತು ಡಿಐಜಿ ಮಟ್ಟದ ಅಧಿಕಾರಿಗಳು ಪ್ರತಿ ತಿಂಗಳು ಮೂರು ಠಾಣೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರೆ ಮಾದಕ ವಸ್ತು, ಕಳ್ಳತನ, ದರೋಡೆ, ಜೂಜು, ಮಟ್ಕಾ ಮುಂತಾದವುಗಳನ್ನು ತಡೆಯಬಹುದು.

ನಾಳೆಯಿಂದಲೇ ಎಸ್‌ಪಿ, ಡಿಐಜಿ ಮಟ್ಟದ ಅಧಿಕಾರಿಗಳು ಠಾಣೆಗಳಿಗೆ ಭೇಟಿ ನೀಡಬೇಕು.

> ಕೆ.ಆರ್.ನಗರ ತಾಲೂಕಿನ ಸುಗ್ಗನಹಳ್ಳಿ ಗ್ರಾಮದ ಶಿವಕುಮಾರ್ ಮತ್ತು ಗೌರಮ್ಮ ದಂಪತಿಗಳ ಪುತ್ರ ರಾಘವೇಂದ್ರ ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಹೊಟೇಲ್‌ನಲ್ಲಿ ಕೆಲಸ ಮಾಡುತ್ತಿದ್ದು ಕಳೆದ ಆಗಸ್ಟ್ ತಿಂಗಳಲ್ಲಿ ನಾಪತ್ತೆಯಾಗಿದ್ದು ಪೋಷಕರು ಕೆಆರ್‌ಎಸ್ ಪೊಲೀಸ್ ಠಾಣೆಯಲ್ಲಿ ಹೊಟೇಲ್ ಮಾಲೀಕನ ಮೇಲೆ ಅನುಮಾನ ವ್ಯಕ್ತಪಡಿಸಿ ದೂರು ನೀಡಿದ್ದು, ಇದುವರೆವಿಗೂ ಆ ಯುವಕನ ಶವ ಪತ್ತೆಯಾಗಿಲ್ಲ ಎಂದು ಮಾಧ್ಯಮದವ ಪ್ರಶ್ನೆಗೆ ಉತ್ತರಿಸಿದ ಡಿಐಜಿ ಈ ಸಂಬಂದ ತನಿಖೆ ಮಾಡುವುದಾಗಿ ತಿಳಿಸಿದರು.

ಭೇಟಿ ವೇಳೆ ಕೂಲಂಕಷವಾಗಿ ಪರಿಶೀಲನೆ ನಡೆಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರರು ಇತ್ತೀಚೆಗೆ ಸೂಚನೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಕೆ.ಆರ್.ನಗರ ಪಟ್ಟಣದ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದರು.

ಮೈಸೂರು ಜಿಲ್ಲೆಯಲ್ಲಿ ವರುಣ, ಇಲವಾಲ, ಜಯಪುರ, ಸೌತ್ ಪೊಲೀಸ್ ಠಾಣೆ, ನಂಜನಗೂಡು ಟೌನ್, ಗ್ರಾಮಾಂತರ, ಸಂಚಾರಿ, ಕೌಲಂದೆ, ಬಿಳಿಗೆರೆ, ಹುಲ್ಲಹಳ್ಳಿ ಪಿರಿಯಾಪಟ್ಟಣ, ಬೈಲುಕುಪ್ಪೆ, ಬೆಟ್ಟದಪುರ, ಹುಣಸೂರು ಟೌನ್ ಹಾಗೂ ಗ್ರಾಮಾಂತರ, ಬಿಳಿಕೆರೆ, ಹೆಚ್.ಡಿ.ಕೋಟೆ ಟೌನ್, ಸರಗೂರು, ಅಂತರಸಂತೆ, ಟೀ.ನರಸೀಪುರ, ಪಟ್ಟಣ, ಬನ್ನೂರು, ತಲಕಾಡು ಪೊಲೀಸ್ ಠಾಣೆಗಳಿದ್ದು, ಕೆ.ಆರ್.ನಗರ ಮತ್ತು ಸಾಲಿಗ್ರಾಮ ಆವಳಿ ತಾಲೂಕಿನಲ್ಲಿ ತಲಾ ಒಂದು ಠಾಣೆಗಳಿವೆ ಎಂದು ಡಿಐಜಿ ಬೋರಲಿಂಗಯ್ಯ ತಿಳಿಸಿದರು.

ಈ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಅವರು ಕೆಆರ್.ನಗರ ತಾಲೂಕಿಗೆ ಮತ್ತೊಂದು ಪೊಲೀಸ್ ಠಾಣೆಯ ಅವಶ್ಯಕತೆ ಇದೆ, ಹಾಗಾಗಿ ಗ್ರಾಮಾಂತರ ಠಾಣೆ ಮಂಜೂರು ಮಾಡುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಮಾಹಿತಿ ನೀಡಿದರು.

ಪೋಷಕರು ಯಾವುದೇ ಕಾರಣಕ್ಕೂ ತಮ್ಮ ಅಪ್ರಾಪ್ತ ಮಕ್ಕಳಿಗೆ ಬೈಕ್ ಸೇರಿದಂತೆ ಯಾವುದೇ ವಾಹನಗಳ ಚಾಲನೆ ಮಾಡಲು ಕೊಡಬೇಡಿ. ಇದು ಕ್ರಿಮಿನಲ್ ಅಪರಾಧವಾಗಿದೆ. ಪೋಷಕರು ತಮ್ಮ ಮಕ್ಕಳ ಮೇಲೆ ತೀವ್ರ ನಿಗಾ ವಹಿಸಬೇಕು ಎಂದರಲ್ಲದೆ ಯುವಕರು ದುಶ್ಚಟಗಳಿಗೆ ಬಲಿಯಾಗದಂತೆ ಮುಂಜಾಗ್ರತೆ ವಹಿಸಿ ಎಂದು ತಿಳಿಸಿದರು.

ಪೊಲೀಸರಿಗೆ ಸಾರ್ವಜನಿಕರು ಹೆಚ್ಚಿನ ರೀತಿಯಲ್ಲಿ ಸಹಕಾರ ನೀಡಿದರೆ ಅಪರಾಧ ಪ್ರಕರಣಗಳನ್ನು ಮಟ್ಟ ಹಾಕಬಹುದು ಎಂದರು.

ಎಸ್ಪಿ ಡಾ.ಎನ್.ವಿಷ್ಣುವರ್ಧನ್, ಎಎಸ್ಪಿ ಎಂ.ಮಲ್ಲಿಕ್, ದಕ್ಷಿಣ ವಿಭಾಗದ ಡಿವೈಎಸ್‌ಪಿ ಟಿ.ಬಿ.ರಾಜಣ್ಣ, ಪಟ್ಟಣದ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶಿವಪ್ರಕಾಶ್, ಸಬ್ ಇನ್ಸ್‌ಪೆಕ್ಟರ್ ಸ್ವಾಮೀಗೌಡ ಇದ್ದರು.

ಹನಗೋಡು ಚರಂಡಿಯಲ್ಲಿ ತೇಗದ ತುಂಡು ಪತ್ತೆ



ಹನಗೋಡು, ಡಿ.19– ನಾಗರಹೊಳೆ ಕಾಡಂಚಿನ ಹನಗೋಡು ಹೋಬಳಿಯ ಕೊಳವಿಗೆ ಗ್ರಾಮದ ಬಳಿಯ ಮೋರಿ ಕೆಳಗೆ ತೇಗದ ತುಂಡು ಪತ್ತೆಯಾಗಿದೆ.

ಹನಗೋಡು ಹೋಬಳಿಯ ಕೊಳವಿಗೆ–ಕೋಣನಹೊಸಹಳ್ಳಿಗೆ ತೆರಳುವ ರಸ್ತೆಗೆ ನಿರ್ಮಿಸಿರುವ ಮೋರಿ ಕೆಳಗೆ ಸುಮಾರು ಎಂಟು ಅಡಿ ಉದ್ದದ ತೇಗದ ತುಂಡು ಇರುವ ಬಗ್ಗೆ ಮಾಹಿತಿ ಪಡೆದ ವೀರನಹೊಸಹಳ್ಳಿ ವಲಯದ ಡಿಆರ್‌ಎಫ್‌ಓ ನವೀನ್, ಹುಣಸೂರು ಪ್ರಾದೇಶಿಕ ಅರಣ್ಯ ವಿಭಾಗದ ಡಿಆರ್ ಎಫ್‌ಓ ಮಲ್ಲಿಕಾರ್ಜುನ್ ಹಾಗೂ ಸಿಬ್ಬಂದಿಗಳು ಪರಿಶೀಲಿಸಿದ ವೇಳೆ ತೇಗದ ತುಂಡು ಪತ್ತೆಯಾಗಿದೆ. ಕಳೆದ ಎರಡು ತಿಂಗಳ ಹಿಂದೆ ಕಲ್ಲಹಳ್ಳಿ ವಲಯದ ಪಾರದ ಕಡದ ಬಳಿಯಿಂದ ಅಕ್ರಮವಾಗಿ ತೇಗದ ಮರ ಕಡಿತಲೆ ಮಾಡಿ ಸಾಗಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಅಂದು ವಶಪಡಿಸಿಕೊಂಡಿದ್ದ ಮರದ ದಿಮ್ಮಿ ಇಲ್ಲಿ ಸಿಕ್ಕಿರುವ ಮರದ ತುಂಡನ್ನು ಕಲ್ಲಹಳ್ಳ ವಲಯದ ಆರ್‌ಎಫ್‌ಓ ಅಭಿಷೇಕ್ ಪರಿಶೀಲಿಸಿದ್ದು, ಪತ್ತೆಯಾಗಿರುವ ಮರದ ತುಂಡು ತಾಳೆಯಾಗದ್ದರಿಂದ ಇದು ಬೇರೆ ಪ್ರಕರಣವಾಗಿದೆ ಎಂದು ತಿಳಿದು ಬಂದ ಮೇರೆಗೆ ಇದೀಗ ಪತ್ತೆಯಾದ ತೇಗದ ತುಂಡನ್ನು ಹುಣಸೂರು ಪ್ರಾದೇಶಿಕ ಅರಣ್ಯ ಇಲಾಖೆ ವಶಕ್ಕೊಪ್ಪಿಸಲಾಗಿದೆ ಎಂದು ವೀರನಹೊಸಹಳ್ಳಿವಲಯದ ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಇಂದು ನರಸೀಪುರದಲ್ಲಿ ವಿದ್ಯುತ್ ವ್ಯತ್ಯಯ

ತಿ.ನರಸೀಪುರ, ಡಿ.19– ಮೂಗೂರು ವಿ.ವಿ.ಕೇಂದ್ರದಿಂದ ಹೊರಹೊಮ್ಮುವ ಫೀಡರ್‌ಗಳಿಗೆ ಲಿಂಕ್ ಲೈನ್ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಡಿ.20ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಮೂಗೂರು, ಕುರುಬೂರು, ಮೂಗೂರುಮೋಳೆ, ಹೊಸಹಳ್ಳಿ, ಹೊಸಹಳ್ಳಿಮೋಳೆ, ಮಾಡ್ರಳ್ಳಿ, ಕನ್ನಹಳ್ಳಿ, ಕನ್ನಹಳ್ಳಿಮೋಳೆ, ಸೀಹಳ್ಳಿ, ಕೊತ್ತೇಗಾಲ, ತೊಟ್ಟವಾಡಿ, ತೊಟ್ಟವಾಡಿಮೋಳೆ, ಆದಿಬೆಟ್ಟಳ್ಳಿ, ಹ್ಯಾಕನೂರು, ಕನ್ನಹಳ್ಳಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ

ನಾಳೆ ನಂ.ಗೂಡಲ್ಲಿ ಕನಕದಾಸ ಜಯಂತಿ



ಸುದ್ದಿಗೋಷ್ಠಿಯಲ್ಲಿ ಸಮಿತಿ ಅಧ್ಯಕ್ಷ ಟಿ.ಎಲ್.ಮೋಹನ್‌ಕುಮಾರ್ ಮಾತನಾಡಿದರು.

ನಂಜನಗೂಡು: ಭಾನುವಾರ (ಡಿ.21) ನಂಜನಗೂಡಿನಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಮತ್ತು ತಾಲೂಕು ಕುರುಬರ ಸಮುದಾಯದ ವತಿಯಿಂದ ಶ್ರೀ ಭಕ್ತ ಕನಕದಾಸರ 531ನೇ ಜಯಂತಿ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಜಯಂತೋತ್ಸವ ಸಮಿತಿ ಅಧ್ಯಕ್ಷ ಟಿ.ಎಲ್.ಮೋಹನ್ ಕುಮಾರ್ ತಿಳಿಸಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಭಕ್ತ ಕನಕದಾಸರ ಜಯಂತೋತ್ಸವದ ಅಂಗವಾಗಿ ಬೆಳಗ್ಗೆ 10:30 ಕ್ಕೆ ನಗರದ ಜೂನಿಯರ್ ಕಾಲೇಜು ಮೈದಾನದಿಂದ ಶ್ರೀ ಭಕ್ತ ಕನಕದಾಸರ ಭಾವಚಿತ್ರವನ್ನು ವಿವಿಧ ಜಾನಪದ ಕಲಾತಂಡಗಳೊಂದಿಗೆ, ಬೆಳ್ಳಿರಥದಲ್ಲಿ ಅದ್ದೂರಿಯಾಗಿ ಮೆರವಣಿಗೆ ನಡೆಸಲಾಗುವುದು. ಮೆರವಣಿಗೆಯನ್ನು ಶಾಸಕ ದರ್ಶನ್ ದ್ರುವ ನಾರಾಯಣ್ ಮತ್ತು ಶಾಸಕ ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ, ಮಧ್ಯಾಹ್ನ 1 ಗಂಟೆಗೆ ವೇದಿಕೆ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು ಕಾರ್ಯಕ್ರಮವನ್ನು ಸಂಸದ ಸುನೀಲ್ ಬೋಸ್ ಉದ್ಘಾಟಿಸಲಿದ್ದಾರೆ ಎಂದರು.

ಶಾಸಕ ದರ್ಶನ್ ಧ್ರುವನಾರಾಯಣ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಯತೀಂದ್ರ ಸಿದ್ದರಾಮಯ್ಯ ಮತ್ತು ಎಲ್ಲಾ ಕ್ಷೇತ್ರದ ಶಾಸಕರು ಮತ್ತು ಚುನಾವಣಾ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದರಲ್ಲದೆ ಈ ಬಾರಿ ಕನಕದಾಸರ ಜಯಂತಿ ಮಹೋತ್ಸವವನ್ನು ಅದ್ದೂರಿಯಾಗಿ ಆಚರಣೆ ನಡೆಸಲು ತೀರ್ಮಾನಿಸಲಾಗಿತ್ತು ಕಾರ್ಯಕ್ರಮದಲ್ಲಿ ಸುಮಾರು 8 ಸಾವಿರ ಮಂದಿ ಭಾಗಿಯಾಗುವ ನಿರೀಕ್ಷೆಯನ್ನು ಹೊಂದಲಾಗಿದೆ. ಜಯಂತಿ ಮಹೋತ್ಸವದಲ್ಲಿ ಭಾಗವಹಿಸುವವರಿಗೆ ಟೀ ಶರ್ಟ್ ಮತ್ತು ಶಲ್ಯವನ್ನು ವಿತರಿಸಲಾಗುತ್ತದೆ. ಸುಮಾರು 8 ಸಾವಿರ ಮಂದಿಗೆ ಶ್ರೀಕಂಠೇಶ್ವರ ದಾಸೋಹ ಭವನದಲ್ಲಿ ಭೋಜನದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ನಂಜನಗೂಡು ತಾಲೂಕಿನ ಸಮುದಾಯದ ಎಲ್ಲಾ ಬಂಧುಗಳು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಜಯಂತಿ ಮಹೋತ್ಸವವನ್ನು ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಚಿನ್ನದಗುಡಿ ಹುಂಡಿ ಕುಳ್ಳಯ್ಯ, ಕುರಿಹುಂಡಿರಾಜು, ತಾಲೂಕು ಕುರುಬರ ಸಂಘದ ನಿಕಟ ಪೂರ್ವ ಅಧ್ಯಕ್ಷ ಕೆಂಪಣ್ಣ, ಮೆರವಣಿಗೆ ಸಮಿತಿ ಅಧ್ಯಕ್ಷ ಸಿದ್ದರಾಜು, ಪ್ರಚಾರ ಸಮಿತಿ ಅಧ್ಯಕ್ಷ ಬೀರೇಗೌಡ, ನಗರಸಭಾ ಮಾಜಿ ಸದಸ್ಯ ಗಂಗಾಧರ್, ಪ್ರದೀಪ್, ರಾಮು, ಉಪಸ್ಥಿತರಿದ್ದರು.

ಹುಲಿ ಹಾವಳಿ: ಹೆಮ್ಮಿಗೆ, ಬಿ.ಆರ್.ಕಾವಲ್ ಗ್ರಾಮದಲ್ಲಿ ಬೋನಿಟ್ಟ ಅರಣ್ಯ ಇಲಾಖೆ



ಹನಗೋಡಿಗೆ ಸಮೀಪದ ಹೆಮ್ಮಿಗೆಯಲ್ಲಿ ಜಾನುವಾರು ಬಲಿಪಡೆದಿದ್ದ ಜೋಳದ ಹೊಲದಲ್ಲಿ ಹುಲಿ ಸೆರೆಗಾಗಿ ಬೋನ್ ಇರಿಸಲಾಗಿದೆ.

ಹನಗೋಡು, ಡಿ.19– ಹನಗೋಡಿಗೆ ಸಮೀಪದ ಬೀರತಮ್ಮನಹಳ್ಳಿ ಅರಣ್ಯ ಪ್ರದೇಶದಂಚಿನ ಹೆಮ್ಮಿಗೆ ಬಳಿಯಲ್ಲಿ ಹುಲಿಯು ಜಾನುವಾರುಗಳನ್ನು ಕೊಂದು ಹಾಕುತ್ತಿರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಹೆಮ್ಮಿಗೆ ಹಾಗೂ ಬಿ.ಆರ್. ಕಾವಲ್ ಗ್ರಾಮಗಳ ಜಮೀನಿನಲ್ಲಿ ಬೋನ್ ಇಟ್ಟಿದೆ.

ಹೆಮ್ಮಿಗೆ, ಕಾಮಗೌಡನಹಳ್ಳಿ, ಬಿ.ಆರ್. ಕಾವಲ್, ಗೌಡಿಕೆರೆ ಗ್ರಾಮಗಳ ಹತ್ತಾರು ಜಾನುವಾರುಗಳನ್ನು ಹುಲಿಯು ಬಲಿಪಡೆದಿರುವ ಹಿನ್ನೆಲೆಯಲ್ಲಿ ಬೋನ್‌ಗಳನ್ನು ಇಡಲಾಗಿದೆ ಎಂದು ಅಲ್ಲದೆ ಹುಲಿ ಪತ್ತೆಗಾಗಿ ಆರ್‌ಎಫ್‌ಓ ಸುಬ್ರಮಣ್ಯ ನೇತೃತ್ವದಲ್ಲಿ ಥರ್ಮಲ್ ಡ್ರೋಣ್ ಹಾಗೂ ಸಾಕಾನೆಗಳ ಸಹಾಯದಿಂದ ಸಿಬ್ಬಂದಿ ಕೂಂಬಿಂಗ್ ನಡೆಸುತ್ತಿದ್ದಾರೆಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಶ್ರೀ ಕಾಡು ಬಸವೇಶ್ವರಸ್ವಾಮಿ ದೇವಸ್ಥಾನದಲ್ಲಿ ಅಮಾವಾಸ್ಯೆ ಪೂಜೆ

ಸಾವಿರಾರು ಮಂದಿ ಭಾಗಿ, ಭಕ್ತಾದಿಗಳಿಗೆ ಅನ್ನ ಸಂತರ್ಪಣೆ



ಅನ್ನ ಪ್ರಸಾದ ಕಾರ್ಯಕ್ರಮಕ್ಕೆ ಪುರಸಭೆ ಮಾಜಿ ಸದಸ್ಯೆ ರೂಪಾ ಪರಮೇಶ್ ಚಾಲನೆ ನೀಡಿದರು.

ತಿ.ನರಸೀಪುರ, ಡಿ.19– ಧನುರ್ಮಾಸದ ಮೊದಲ ಅಮಾವಾಸ್ಯೆ ಹಿನ್ನೆಲೆಯಲ್ಲಿ ತಾಲೂಕಿನ ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಈಶ್ವರಗೌಡನ ಹಳ್ಳಿ ಹಾಗೂ ಹೆಳವರ ಹುಂಡಿ ಸಮೀಪದ ಶ್ರೀ ಕಾಡು ಬಸವೇಶ್ವರ ಸ್ವಾಮಿ ದೇವಸ್ಥಾನದ ಸನ್ನಿದಾನದಲ್ಲಿ ಲೋಕ ಕಲ್ಯಾಣಕ್ಕಾಗಿ ವಿಶೇಷ ಪೂಜಾ ಕಾರ್ಯಕ್ರಮದೊಂದಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಿತು.

ಅಮಾವಾಸ್ಯೆ ಹಿನ್ನೆಲೆಯಲ್ಲಿ ದೇವಸ್ಥಾನದಲ್ಲಿ ಬೆಳಗ್ಗಿನಿಂದಲೇ ವಿಶೇಷ ಪೂಜಾ ಕೈಂಕರ್ಯ ಗಳು ನಡೆದವು. ಪುರಸಭೆ ಮಾಜಿ ಸದಸ್ಯೆ ರೂಪಾ ಪರಮೇಶ್ ಅವರ ಸೇವಾರ್ಥದೊಂದಿಗೆ ಭಕ್ತಾದಿಗಳಿಗೆ ಅನ್ನಪ್ರಸಾದ ಮಾಡಲಾಯಿತು.

ಹೆಳವರಹುಂಡಿ ಗ್ರಾಮದ ಹೊರಹೊಲಯದಲ್ಲಿರುವ ಕಾಡು ಬಸವೇಶ್ವರ ಸ್ವಾಮಿ ದೇವಸ್ಥಾನಕ್ಕೆ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಸಾವಿರಾರು ಮಂದಿ ಭಕ್ತಾದಿಗಳು ಬೆಳಗ್ಗಿನಿಂದಲೇ ಸರತಿ ಸಾಲಿನಲ್ಲಿ ನಿಂತು ದರ್ಶನ ಪಡೆದು ಪೂಜೆ ಸಲ್ಲಿಸಿದರು. ಹರಕೆ ಹೊತ್ತ ಭಕ್ತಾದಿಗಳು ದೇವರಿಗೆ ಕಾಣಿಕೆ ಸಲ್ಲಿಸಿ ದೈವ ಕೃಪೆಗೆ ಪಾತ್ರರಾದರು. ಅಮಾವಾಸ್ಯೆ ಹಿನ್ನೆಲೆಯಲ್ಲಿ ಬಸವೇಶ್ವರ ಸ್ವಾಮಿಗೆ ವಿಶೇಷವಾದ ಹೂವಿನ ಅಲಂಕಾರ ಮಾಡಲಾಗಿತ್ತು. ವೀರಶೈವ ಲಿಂಗಾಯತ ಸಮಾಜದ ಮಹಿಳಾ ಘಟಕದ ವತಿಯಿಂದ ದೇವಸ್ಥಾನದ ಆವರಣದಲ್ಲಿ ಭಜನೆ ಕಾರ್ಯಕ್ರಮ ನಡೆಯಿತು. ಖ್ಯಾತ ಗಾಯಕ ಕಿರಗಸೂರು ರಾಜಪ್ಪ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು

ಅನ್ನ ದಾಸೋಹಕ್ಕೆ ನಿರ್ಮಿಸಲಾಗಿದ್ದ ಎರಡು ಕೌಂಟರ್‌ಗಳಲ್ಲಿ ಭಕ್ತಾದಿಗಳಿಗೆ ಕಡ್ಲೆ ಹುಳಿ, ಪಾಯಸ, ಬೂಂದಿ ಅನ್ನ ಸಾಂಬಾರ್, ಮಜ್ಜಿಗೆ ಬಡಿಸಲಾಯಿತು. ಸಾವಿರಾರು ಮಂದಿ ಭಕ್ತಾದಿಗಳು ಪ್ರಸಾದ ಸ್ವೀಕರಿಸಿದರು.

ನಂತರ ಪುರಸಭೆ ಮಾಜಿ ಸದಸ್ಯೆ ರೂಪಾ ಅವರು ಕುಟುಂಬಸ್ಥರೊಂದಿಗೆ ಬಸವೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಿದರು. ಈ ವೇಳೆ ಹೊಸೂರುಂಡಿ ಗುರು ಮಲ್ಲೇಶ್ವರ ದಾಸೋಹ ಮಠದ ಅಧ್ಯಕ್ಷರಾದ ರಾಜಶೇಖರ ಶ್ರೀಗಳು, ನೆರಗ್ಯಾತನಹಳ್ಳಿ ವಿರಕ್ತ ಮಠದ ಇಮ್ಮಡಿ ಶಿವಕುಮಾರ ಸ್ವಾಮಿಗಳು ಹೆಳವರಹುಂಡಿ ಶಿವಲಿಂಗ ಸ್ವಾಮಿಗಳು, ಪುರಸಭೆ ಮಾಜಿ ಸದಸ್ಯೆ ರೂಪಾ ಪರಮೇಶ್, ವಕೀಲ ಪರಮೇಶ್, ಬಿಲಿಗೆರೆ ಹುಂಡಿ ಮಂಟೇಸ್ವಾಮಿ, ಬನ್ನಳ್ಳಿ ಹುಂಡಿ ಶಿವಕುಮಾರ್, ಜೆಎಸ್‌ಎಸ್ ನಟ ರಾಜು, ಕೆಬ್ಬೇಹುಂಡಿ ಶಿವಕುಮಾರ, ತೊಂಟೇಶ್, ಸುಂದರ್ ಸ್ವಾಮಿ, ಕೇಬಲ್ ರಾಜಶೇಖರ್ ಸೇರಿದಂತೆ ಮತ್ತಿತರರಿದ್ದರು.

ತೋಪಿನಮ್ಮ ದೇವಸ್ಥಾನದಲ್ಲಿ ಎಳ್ಳಮವಾಸ್ಯೆ ಪೂಜೆ



ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ಮರದೂರು ಗ್ರಾಮದ ತೋಪಿನಮ್ಮ ದೇವಾಲಯದಲ್ಲಿ ಎಳ್ಳಮಾವಾಸ್ಯೆ ಪ್ರಯುಕ್ತ ವಿಶೇಷ ಪೂಜೆ ಅಭಿಷೇಕ ಹಾಗೂ ಅನ್ನ ದಾಸೋಹ ಕಾರ್ಯಕ್ರಮ ನಡೆಯಿತು. ವಿಶೇಷ ಪೂಜೆಯನ್ನು ದೂರ ಗ್ರಾಮ ಪಂಚಾಯತಿ ಎಫ್‌ಡಿಎ ಪವಿತ್ರ ಜಗದೀಶ್ ಅವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಬೆಟ್ಟದಪುರ, ಅತ್ತಿಗೋಡು, ಮರದೂರು, ಕಿತ್ತೂರು, ಪಿರಿಯಾಪಟ್ಟಣ, ಕೆ.ಆರ್.ನಗರ ಸೇರಿದಂತೆ ವಿವಿಧ ಭಾಗಗಳಿಂದ ಅಪಾರ ಮಹಿಳೆಯರು ಭಾಗವಹಿಸಿ ದೇವಿಗೆ ವಿವಿಧ ಪೂಜೆ ಹಾಗೂ ಬಾಗಿನ ಮಡಿಲಕ್ಕಿ ಅರ್ಪಿಸಿದರು.

ಮೈಸೂರು ಮಿತ್ರ

ಶನಿವಾರ 20 ಡಿಸೆಂಬರ್ 2025

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪಡೆಯಪ್ಪ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಅವತಾರ್ 3ಡಿ (ಕ–1 + ಇಂ–2)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂಧರ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಡೆವಿಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಅಖಂಡ–2 (ತೆ)	4 ಪ್ರದರ್ಶನಗಳು
ಸಂಗಂ	
ಡೆವಿಲ್ (ಕ)	3 ಪ್ರದರ್ಶನಗಳು
ಲಿಡೋ	
ಅಖಂಡ–2 (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಂತಾರ–2 (ಕ)	4 ಪ್ರದರ್ಶನಗಳು

'ನ್ಯಾಷನಲ್ ಹೆರಾಲ್ಡ್' ಪ್ರಕರಣದಲ್ಲಿ ಪಕ್ಷದ ನಾಯಕರಿಗೆ ಕಿರುಕುಳ ಖಂಡಿಸಿ

ಕಾಂಗ್ರೆಸ್‌ನಿಂದ ಬಿಜೆಪಿ ಕಚೇರಿಗೆ ಮುತ್ತಿಗೆ ಯತ್ನ

● ಪ್ರತಿಭಟನಾಕಾರರು ಪೊಲೀಸರ ವಶಕ್ಕೆ ● ಬಿಜೆಪಿ ಕಾರ್ಯಕರ್ತರಿಂದಲೂ ಎದಿರೇಟು



ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್‌ನಿಂದ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ಶುಕ್ರವಾರ ಯತ್ನಿಸಲಾಯಿತು.



ಬಿಜೆಪಿ ಕಾರ್ಯಕರ್ತರೂ ಸಹ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು, ಡಿ.19(ಎಂಕೆ)– ಕೇಂದ್ರ ಸರ್ಕಾರ 'ನ್ಯಾಷನಲ್ ಹೆರಾಲ್ಡ್' ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ವಿರುದ್ಧ ಅಪಪ್ರಚಾರ ಮಾಡಿ ಹಾಗೂ ಜಾರಿ ನಿರ್ದೇಶನಾಲಯವನ್ನು ದುರ್ಬಳಕೆ ಮಾಡಿಕೊಂಡು ದ್ವೇಷದ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿ ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ವತಿಯಿಂದ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಲಾಯಿತು.

ಮೈಸೂರು ರಾಮಸ್ವಾಮಿ ವೃತ್ತದಲ್ಲಿ ಜಮಾವಣೆಗೊಂಡ ಕಾಂಗ್ರೆಸ್ ಮುಖಂಡರು ಹಾಗೂ ನೂರಾರು ಮಂದಿ ಕಾರ್ಯಕರ್ತರು, ಜಾರಿ ನಿರ್ದೇಶನಾಲಯ(ಇಡಿ) ದುರ್ಬಳಕೆಗೆ ದೆಹಲಿ ಹೈಕೋರ್ಟ್ ಆಕ್ಷೇಪ ವ್ಯಕ್ತಪಡಿಸಿದ್ದು, ಸುಳ್ಳಿನ ವಿರುದ್ಧ ಸತ್ಯಕ್ಕೆ ಬಹುದೊಡ್ಡ ಜಯ ದೊರೆತಿದೆ ಎಂಬ ಇತ್ಯಾದಿ ಭಿತ್ತಿಪತ್ರಗಳನ್ನು ಹಿಡಿದು ಬಿಜೆಪಿ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದ್ದಲ್ಲದೆ ರಾಮಸ್ವಾಮಿ ವೃತ್ತದಿಂದ ಜಯಲಕ್ಷ್ಮಿ ವಿಲಾಸ ರಸ್ತೆ ಮಾರ್ಗವಾಗಿ ಬಿಜೆಪಿ ಕಚೇರಿಗೆ ತೆರಳಿ ಮುತ್ತಿಗೆ ಹಾಕಲು ಯತ್ನಿಸಿದರು. ಸೂಕ್ತ ಬಂದೋಬಸ್ತ್ ಒದಗಿಸಿದ್ದ ಪೊಲೀಸರು, ಪ್ರತಿಭಟನಾಕಾರರನ್ನು ತಡೆದು ಬಂಧಿಸಿ, ನಂತರ ಬಿಡುಗಡೆ ಮಾಡಿದರು.

ಪ್ರತಿಭಟನೆ ವೇಳೆ ಮಾತನಾಡಿದ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬಿಜೆಪಿ ಕಿರುಕುಳ ನೀಡುತ್ತಿದೆ. ಆದರೆ, ನ್ಯಾಯಾಲಯ ಆಕ್ಷೇಪ ವ್ಯಕ್ತಪಡಿಸಿದ್ದು, ನ್ಯಾಯ ವ್ಯವಸ್ಥೆ ಇನ್ನೂ ಬದುಕಿದೆ ಎಂಬ ಭರವಸೆ ಬಂದಿದೆ. ಅಹಿಂಸಾ ಮಾರ್ಗದಲ್ಲಿ ಹೋರಾಟ ಮಾಡಿದರೆ ನ್ಯಾಯ ದೊರೆಯಲಿದೆ. ಸುಳ್ಳು ಪ್ರಕರಣವನ್ನು ದಾಖಲಿಸಲು ಅಧಿಕಾರ ದುರುಪಯೋಗ ಮಾಡಿಕೊಳ್ಳುವ ಬಿಜೆಪಿಗೆ ತಕ್ಕ ಉತ್ತರ ಸಿಕ್ಕಿದೆ ಎಂದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಮಾತನಾಡಿ, ಗಾಂಧಿ ಕುಟುಂಬವು ರಾಷ್ಟ್ರಕ್ಕಾಗಿ ತನ್ನ ಆಸ್ತಿ ಮತ್ತು ಸಂಪತ್ತನ್ನು ತ್ಯಾಗ ಮಾಡಿದೆ. ಆದರೆ, ಬಿಜೆಪಿ ಉದ್ದೇಶಪೂರ್ವಕವಾಗಿ ಪ್ರೇರಿತ ಪ್ರಚಾರಗಳ ಮೂಲಕ ಗಾಂಧಿ ಕುಟುಂಬಕ್ಕೆ ಕಿರುಕುಳ ನೀಡುತ್ತಿದೆ. ವೋಟ್ ಚೋರಿ ಮೂಲಕ ದೇಶದಾದ್ಯಂತ ವಾಮ ಮಾರ್ಗದಿಂದ ಅಧಿಕಾರ ಹಿಡಿದಿರುವ ಬಿಜೆಪಿ ದ್ವೇಷ ರಾಜಕಾರಣ ಹೊಸದೇನಲ್ಲ ಎಂದು ಕಿಡಿಕಾರಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮುಡಾ ಮಾಜಿ ಅಧ್ಯಕ್ಷ ಕೆ.ಮರಿಗೌಡ, ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಮೋದಮಣಿ, ಮುಖಂಡರಾದ ಕೆ.ಎಸ್.ಶಿವರಾಮ, ಕೆ.ವಿ.ಮಲ್ಲೇಶ್, ಭಾಸ್ಕರ್ ಗೌಡ, ನಾಗಭೂಷಣ್, ರವಿ ಮಂಚೇಗೌಡನಕೊಪ್ಪಲು, ಬಸವಣ್ಣ, ಈಶ್ವರ್ ಚಕ್ಕಡಿ, ಡೈರಿ ವೆಂಕಟೇಶ್, ವಿ.ರಾಮಸ್ವಾಮಿ, ಸುನಿಲ, ಶಿವಪ್ರಸಾದ್, ನಾಗೇಶ್, ರಾಜೇಶ್, ಸೇವಾದಳದ ಗಿರೀಶ, ಮಾಧ್ಯಮ ವಕ್ತಾರ ಕೆಮಹೇಶ್, ಅಶೋಕ ತೊರೆಮಾವು ಗಿರೀಶ್ ಮತ್ತಿತರರಿದ್ದರು.

ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ...

ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರ ಪ್ರತಿಭಟನೆ ಹಾಗೂ ಬಿಜೆಪಿ ಕಚೇರಿಗೆ ಮುತ್ತಿಗೆ ಖಂಡಿಸಿ ಬಿಜೆಪಿ ಕಾರ್ಯಕರ್ತರು ಕೂಡ ಪ್ರತಿಭಟನೆ ನಡೆಸಿದರು. ಬಿಜೆಪಿ ಕಚೇರಿ ಎದುರು ಜಮಾಯಿಸಿದ ಕಾರ್ಯಕರ್ತರು, ಕೇಸರಿ ಶಾಲುಗಳನ್ನು ಹಿಡಿದು ಕಾಂಗ್ರೆಸ್ ಗೂಂಡಾ ವರ್ತನೆ ತೋರುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರಲ್ಲದೆ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕುವುದಕ್ಕೆ ಅವರಿಗೆ ಸ್ವಾಗತ ಕೋರಿ, ಬಂದವರಿಗೆ ಕೇಸರಿ ಶಾಲು ಹಾಕುತ್ತೇವೆ ಎಂದು ಲೇವಡಿ ಮಾಡಿದರು.

ಬಿಜೆಪಿ ಮುಖಂಡರಾದ ವಿ.ಶೈಲೇಂದ್ರ, ಬಿ.ಎಂ.ರಘು, ಎಸ್.ಮಹದೇವಯ್ಯ, ರುದ್ರಮೂರ್ತಿ, ಪಡುವಾರಹಳ್ಳಿ ಎಂ ರಾಮಕೃಷ್ಣ, ನಾರಾಯಣ ಲೋಲಪ್ಪ, ಕೃಷ್ಣನಾಯಕ, ನಂದೀಶ್, ಲೋಕೇಶ್ ಜಯಸಿಂಹ, ಹಿನಕಲ್ ಚಂದ್ರ, ಬಾಲಕೃಷ್ಣ, ಸಿದ್ದರಾಜು, ವೀರನಗೆರೆಯ ಶ್ರೀನಿವಾಸ್, ಶಿವಕುಮಾರ್, ದಿನೇಶ್ ಗೌಡ, ಕಾರ್ತಿಕ ಮರಿಯಪ್ಪ, ರಾಮು, ದಾಸಪ್ರಕಾಶ್, ರಾಕೇಶ್ ಗೌಡ, ಲೋಹಿತ್, ಸಚಿನ್ ಗೌಡ, ಅರ್ಜುನ್ ಕುಮಾರ್, ರಾಕೇಶ್ ಭಟ್ ಮತ್ತಿತರರಿದ್ದರು.

ಉದ್ಘಾಟನೆ



ಮೈಸೂರಿನ ರಾಮಕೃಷ್ಣನಗರದ ಹೆಚ್ ಬ್ಲಾಕ್‌ನ ಆರೋಗ್ಯನಗರ ಬಡಾವಣೆಯ ನಿವಾಸಿಗಳು ಶುಕ್ರವಾರ ರಮಾ ಗೋವಿಂದ ರಂಗಮಂದಿರದಲ್ಲಿ ಏರ್ಪಡಿಸಿದ್ದ 'ತಾಯಿ ಎಂದರೆ ಸಾಕೆ' ನಾಟಕ ಹಾಗೂ ಆರ್.ಪ್ರೇಕ್ಷಾ ಅವರ ಭರತನಾಟ್ಯ ಕಾರ್ಯಕ್ರಮವನ್ನು ನಿವೃತ್ತ ಮುಖ್ಯ ಶಿಕ್ಷಕ ರಾಮಕೃಷ್ಣಯ್ಯ ಉದ್ಘಾಟಿಸಿದರು. ನಿವೃತ್ತ ಪ್ರಾಂಶುಪಾಲ ಕೆ.ಬಿ.ಕೆಂಪೇಗೌಡ, ರೇಷ್ಮೆ ಇಲಾಖೆ ನಿವೃತ್ತ ಉದ್ಯೋಗಿ ಪುಟ್ಟಸ್ವಾಮಿ, ನಿವೃತ್ತ ಮುಖ್ಯ ಶಿಕ್ಷಕರಾದ ಎಂ.ಗುರುಮಲ್ಲಪ್ಪ ಹಾಗೂ ಕಲಾವಿದೆ ಮಾಲತಿಶ್ರೀ ಮೈಸೂರು ಉಪಸ್ಥಿತರಿದ್ದರು.

ಜ.5 ರವರೆಗೆ ದಸರಾ ವಸ್ತುಪ್ರದರ್ಶನ ಮುಂದುವರಿಕೆ



ಮೈಸೂರು,ಡಿ.19– ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ಆಯೋಜಿಸಲಾಗಿರುವ ದಸರಾ ವಸ್ತುಪ್ರದರ್ಶನವು 20–12–2025 ರಂದು ಮುಕ್ತಾಯವಾಗಬೇಕಿತ್ತು, ಆದರೆ ಗುತ್ತಿಗೆದಾರರ ಕೋರಿಕೆ ಮೇರೆಗೆ 05–01–2026 ರವರೆಗೆ ಒಟ್ಟು 16 ದಿನಗಳ ಕಾಲ ಮುಂದುವರೆಸಲಾಗುತ್ತಿದೆ. ಅಲ್ಲಿವರೆಗೂ ಪ್ರವಾಸಿಗರು, ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಲ್ಪಸಂಖ್ಯಾತರು ವಾಸಿಸುವಂತಹ ಸ್ಥಳದಲ್ಲಿ

ಬಾಲ್ಯ ವಿವಾಹ, ಬಾಲಕಾರ್ಮಿಕ ಪದ್ಧತಿ ದುಷ್ಪರಿಣಾಮಗಳ ಅರಿವು ಮೂಡಿಸಿ

ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಸೂಚನೆ



ಮೈಸೂರು ಜಿಪಂ ಸಭಾಂಗಣದಲ್ಲಿ ಶುಕ್ರವಾರ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಮೈಸೂರು, ಡಿ.19(ಎಂಕೆ)– ಅಲ್ಪಸಂಖ್ಯಾತ ಸಮುದಾಯದವರು ವಾಸಿಸುವ ಸ್ಥಳಗಳಲ್ಲಿ ಬಾಲ್ಯ ವಿವಾಹ ಹಾಗೂ ಬಾಲಕಾರ್ಮಿಕ ಪದ್ಧತಿಗಳ ದುಷ್ಪರಿಣಾಮಗಳ ಕುರಿತು ಅರಿವು ಕಾರ್ಯಕ್ರಮಗಳನ್ನು ಆಯೋಜಿಸಿ, ಅರಿವು ಮೂಡಿಸುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಸೂಚಿಸಿದರು.

ಮೈಸೂರು ಜಿಪಂ ಸಭಾಂಗಣದಲ್ಲಿ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಮುಖ್ಯವಾಗಿ ಮುಸ್ಲಿಂ ಸಮುದಾಯದವರು ವಾಸಿಸುವ ಸ್ಥಳಗಳಲ್ಲಿ ಕಾರ್ಮಿಕ ಇಲಾಖೆ ಅಧಿಕಾರಿಗಳು ದಾಳಿ ನಡೆಸಿ ಬಾಲಕಾರ್ಮಿಕರು ಕಂಡು ಬಂದಲ್ಲಿ ಪ್ರಕರಣ ದಾಖಲಿಸುವಂತೆ ತಿಳಿಸಿದರು.

ಹಾಗೆಯೇ ಮಾದಕ ವಸ್ತುಗಳ ಮಾರಾಟ, ಸಂಚಾರಿ ನಿಯಮ ಪಾಲನೆ ಮಾಡದಿರುವುದು, ವೀಲ್ಹಿಂಗ್ ಮಾಡಿ ವಾಹನ ಚಾಲನೆ ಮಾಡುವುದರ ಕುರಿತು ಪರಿಶೀಲನೆ ನಡೆಸುವಂತೆ ಪೊಲೀಸ್ ಆಯುಕ್ತರಿಗೆ ಪತ್ರ ಬರೆಯುವಂತೆ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಜೈನ್ ಸಮುದಾಯ ವಾಸಿಸುವ ಸ್ಥಳದಲ್ಲಿ ಸರ್ಕಾರದ ಯೋಜನೆಗಳ ಕುರಿತು ಜಾಗೃತಿ ಮೂಡಿಸುವುದರ ಜೊತೆಗೆ ವಿವಿಧ ಇಲಾಖೆಗಳಿಂದ ದೊರಕುವ ಸೌಲಭ್ಯಗಳ ಬಗ್ಗೆ ತಿಳಿಸಿ, ಸರ್ಕಾರದ ಯೋಜನೆ ಪಡೆದುಕೊಳ್ಳಲು ಅನುವಾಗುವಂತೆ ಶಿಬಿರ ಆಯೋಜಿಸಿ ಅರ್ಹರಿಗೆ ಜಾತಿ ಪ್ರಮಾಣ ಪತ್ರ ಪಡೆದುಕೊಳ್ಳಲು ತಿಳಿಸಿ ಎಂದರು.

ಮೈಸೂರು ನಗರದಲ್ಲಿ ಜೈನ ಸಮುದಾಯದವರಿಗೆ ಸ್ಮಶಾನ ಸ್ಥಳದ ಬಗ್ಗೆ ಮನವಿ ಸಲ್ಲಿಸಿದ್ದು, ಈ ಬಗ್ಗೆ ಮೈಸೂರು ತಾಲೂಕಿನ ತಹಶೀಲ್ದಾರ್ ಅವರಿಗೆ ಪತ್ರ ಬರೆಯುವಂತೆ ಹಾಗೂ ಬನುಮಯ್ಯ ಕಾಲೇಜು ಬಳಿ ಇರುವ ಜೈನ್ ದೇವಾಲಯದ ಸುತ್ತಳತೆ ಗುರುತಿಸಿಕೊಡಲು ಜಿಲ್ಲೆಯ ಭೂ ದಾಖಲೆಗಳ ಉಪನಿರ್ದೇಶಕರಿಗೆ ಪತ್ರ ಬರೆಯುವಂತೆ ತಿಳಿಸಿದರು. ನಾಮನಿರ್ದೇಶಿತ ಸದಸ್ಯರಾದ ಸುರೇಶ್ ಕುಮಾರ್ ಜೈನ್, ಸುಬಾನ್, ಜಿಪಂ ಸಿಇಓ ಯುಕೇಶ್ ಕುಮಾರ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಶಿಲ್ಪಾ ಮತ್ತಿತರರಿದ್ದರು.

ನಿಯಮ ಬಾಹಿರವಾಗಿ ಖಾಸಗಿ ಶಾಲೆಗಳಿಗೆ

ಅನುಮತಿ, ಮಾನ್ಯತೆ ನವೀಕರಣ ವಿರುದ್ಧ ಪ್ರತಿಭಟನೆ

ಡಿಡಿಪಿಐ, ಬಿಇಓ ವಿರುದ್ಧ ಪ್ರಕರಣ ದಾಖಲಿಸಲು ಜನ ಸಂಗ್ರಾಮ್ ಪರಿಷತ್ ಆಗ್ರಹ



ಸಾರ್ವಜನಿಕ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರ ಕಚೇರಿ ಎದುರು ಶುಕ್ರವಾರ ಜನ ಸಂಗ್ರಾಮ್ ಪರಿಷತ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಡಿ.19(ಎಂಕೆ)– ನಿಯಮ ಬಾಹಿರವಾಗಿ ಖಾಸಗಿ ಶಾಲೆಗಳಿಗೆ ಅನುಮತಿ ಹಾಗೂ ಮಾನ್ಯತೆ ನವೀಕರಣ ನೀಡಲಾಗುತ್ತಿದೆ ಎಂದು ಆರೋಪಿಸಿ ಜನ ಸಂಗ್ರಾಮ್ ಪರಿಷತ್ ವತಿಯಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಆಗ್ರಹಿಸಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ನಂಜನಗೂಡು ತಾಲೂಕು ಕಳಲೆ ಗ್ರಾಮದ ಶ್ರೀ ಆಚಾರ್ಯ ಗುರುಕುಲ ಶಾಲೆಗೆ ಶಿಕ್ಷಣ ಇಲಾಖೆಯ ಎಲ್ಲಾ ನಿಯಮಗಳನ್ನು ಗಾಳಿಗೆ ತೂರುತ್ತಿದ್ದು, ಲಂಚ ಪಡೆದು ಮಾನ್ಯತೆ ನವೀಕರಣ ಮಾಡುತ್ತಿರುವ ಅಧಿಕಾರಿಗಳನ್ನು ಅಮಾನತುಗೊಳಿಸಬೇಕು. ಹಾಗೆಯೇ ಶಾಲೆಯ ಮಾನ್ಯತೆ ರದ್ದುಗೊಳಿಸಬೇಕೆಂದು ಒತ್ತಾಯಿಸಿದರು.

ಕಳಲೆ ಗ್ರಾಮದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನದ ಕಲ್ಲಿನ ಮಂಟಪದ ಜಾಗವನ್ನು ಒತ್ತುವರಿ ಮಾಡಿಕೊಂಡಿರುವ ಆಚಾರ್ಯ ಗುರುಕುಲ ಶಾಲೆಯ ಆಡಳಿತ ಮಂಡಳಿಯವರು ಕಾನೂನು ಬಾಹಿರವಾಗಿ ಶಾಲೆ ನಡೆಸುತ್ತಿದ್ದಾರೆ. ಇದಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪ ನಿರ್ದೇಶಕರು ಒತ್ತಾಸೆಯಾಗಿ ನಿಂತು, ಪ್ರತೀ ವರ್ಷ ನವೀಕರಣ ಮಾಡಿಕೊಡುತ್ತಿದ್ದಾರೆ ಎಂದು ದೂರಿದರು.

ಭ್ರಷ್ಟ ಅಧಿಕಾರಿಗಳ ವಿರುದ್ಧ ಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ಹಲವು ಬಾರೀ ಪತ್ರ ಬರೆಯಲಾಗಿದೆ. ಆದರೆ, ಈವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಶಾಲೆಯ ಮಾನ್ಯತೆ ರದ್ದು ಮಾಡಿಲ್ಲ. ಕೂಡಲೇ ಶಾಲೆ ಮಾನ್ಯತೆಯನ್ನು ರದ್ದು ಮಾಡದೆ, ಇದೇ ಕಾನೂನು ಬಾಹಿರವಾಗಿ ಮುಂದುವರೆಸಲು ಬಿಟ್ಟಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಜನ ಸಂಗ್ರಾಮ್ ಪರಿಷತ್ ರಾಜ್ಯ ಗೌರವಾಧ್ಯಕ್ಷ ನಗರ್ಲೆ ಎಂ.ವಿಜಯ ಕುಮಾರ್, ರಾಜ್ಯ ಉಪಾಧ್ಯಕ್ಷ ಪಾಲಹಳ್ಳಿ ಪ್ರಸನ್ನ, ಚೋರನಹಳ್ಳಿ ಶಿವಣ್ಣ, ಸಂಚಾಲಕ ವಿನೋದ್ ದೇಬೂರು, ಶಶಿಧರ್ ಕಳಲೆ, ಕುಮುದಾ, ಕೃಷ್ಣ ಮತ್ತಿತರರಿದ್ದರು.

ಚಾಮುಂಡಿಬೆಟ್ಟದ ತಪ್ಪಲು ಪ್ಲಾಸ್ಟಿಕ್‌ಯುಕ್ತ ಕಸಮಯ!

ಬೆಟ್ಟ ಸಂಪರ್ಕಿಸುವ ರಸ್ತೆಗಳ ಇಕ್ಕೆಲಗಳಲ್ಲಿ ರಾರಾಜಿಸುವ ಕಸದ ರಾಶಿ!!



ಮಹಾತ್ಮಗಾಂಧಿ ರಸ್ತೆ ಮತ್ತು ಲಲಿತಮಹಲ್ ರಸ್ತೆಯಿಂದ ಚಾಮುಂಡಿಬೆಟ್ಟ ಪಾದಕ್ಕೆ ಸಂಪರ್ಕಿಸುವ ರಸ್ತೆಯ ದುಸ್ಥಿತಿ.

ಮೈಸೂರು, ಡಿ.19– ಪುಣ್ಯಕ್ಷೇತ್ರ ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ನಿಷೇಧ ಮಾಡಲಾಗಿದೆ ಎಂದು ಸ್ಥಳೀಯ ಸಂಸ್ಥೆ ಹಾಗೂ ಅರಣ್ಯಾಧಿಕಾರಿಗಳು ದೇವಸ್ಥಾನದ ಬಳಿ ಜಂಟಿ ಕಾರ್ಯಾಚರಣೆ ನಡೆಸಿ ಅರಿವು ಮೂಡಿಸಿದ್ದಲ್ಲದೆ, ಪ್ಲಾಸ್ಟಿಕ್ ಕವರ್‌ಗಳನ್ನು ಇಟ್ಟುಕೊಂಡಿದ್ದ ಕೆಲ ವ್ಯಾಪಾರಿಗಳಿಗೆ ದಂಡ ವಿಧಿಸಿ, ಎಚ್ಚರಿಸಿದ್ದರು.

ಆದರೂ ಪ್ಲಾಸ್ಟಿಕ್ ಮಾರಿಯನ್ನು ಸಂಪೂರ್ಣವಾಗಿ ನಿಯಂತ್ರಿಸಲು ಸಾಧ್ಯವಾಗಿಲ್ಲ. ಇನ್ನು ಬೆಟ್ಟದ ಪರಿಸರ ಹಾಗೂ ಸಂಪರ್ಕಿಸುವ ರಸ್ತೆಗಳ ಸ್ವಚ್ಛತೆ ಬಗ್ಗೆ ಯಾರೂ ಕಿಂಚಿತ್ತು ತಲೆ ಕೆಡಿಸಿಕೊಂಡಿಲ್ಲ.

ಗಾಲ್ಫ್‌ಕ್ಲಬ್ ಮಾರ್ಗವಾಗಿ ಚಾಮುಂಡಿಬೆಟ್ಟದ ಪಾದ ಸಂಪರ್ಕಿಸುವ ರಸ್ತೆಯ ಇಕ್ಕೆಲಗಳಲ್ಲೂ ಕಸದ ರಾಶಿ ಬಿದ್ದಿದೆ. ಹರಿದ ಪ್ಲಾಸ್ಟಿಕ್, ತ್ಯಾಜ್ಯ ತುಂಬಿದ ಪ್ಲಾಸ್ಟಿಕ್ ಬ್ಯಾಗ್‌ಗಳು ಎಲ್ಲೆಂದರಲ್ಲಿ ಹರಡಿವೆ. ಮದ್ಯದ ಬಾಟಲ್‌ಗಳು, ಪ್ಲಾಸ್ಟಿಕ್ ಲೋಟಗಳು ಸಾಕಷ್ಟು ಬಿದ್ದಿವೆ. ಕೊಳೆತ ತರಕಾರಿ–ಹಣ್ಣುಗಳನ್ನು ಬಿಸಾಡಲಾಗಿದೆ. ಕಟ್ಟಡ ತ್ಯಾಜ್ಯವೂ ಅಲ್ಲಲ್ಲಿ ಕಣ್ಣಿಗೆ ರಾಚುತ್ತದೆ. ತ್ಯಾಜ್ಯವನ್ನು ಹೆಕ್ಕಲು ಜಾನುವಾರುಗಳು, ಶ್ವಾನಗಳೂ ಇಲ್ಲಿ ಠಿಕಾಣಿ ಹೂಡಿರುತ್ತವೆ. ಈ ರಸ್ತೆಯಲ್ಲಿ ಮೂಗು ಮುಚ್ಚಿಕೊಂಡೇ ಓಡಾಡುವ ದುಸ್ಥಿತಿ ನಿರ್ಮಾಣವಾಗಿದೆ. ತಾವರಕಟ್ಟೆ ಮಾರ್ಗದ ಪ್ರಮುಖ ರಸ್ತೆ ಹೊರತುಪಡಿಸಿ, ಬೆಟ್ಟ ಸಂಪರ್ಕಿಸುವ ಬಹುತೇಕ ಎಲ್ಲಾ ರಸ್ತೆಗಳಲ್ಲೂ ತ್ಯಾಜ್ಯದ ರಾಶಿ ಬಿದ್ದಿದೆ.

ಮಹಾನಗರ ಪಾಲಿಕೆಯವರು ನಿಯಮಿತವಾಗಿ ವಿಲೇವಾರಿ ಮಾಡದಿರುವುದರಿಂದ ತ್ಯಾಜ್ಯ ಕೊಳೆತು, ರೋಗರುಜಿನಿ ಹರಡುವ ಆತಂಕವಿದೆ. ಸದಾಕಾಲ ಬೀದಿನಾಯಿಗಳ ಹಿಂಡು ಹಿಂಡೇ ಇರುವುದರಿಂದ ಆಹಾರ ಅರಸಿ ಚಿರತೆಗಳು ಧಾವಿಸುತ್ತವೆ ಎಂಬ ದುಗುಡವೂ ಶುರುವಾಗಿದೆ. ನಿತ್ಯ ಮೆಟ್ಟಿಲು ಮಾರ್ಗದಲ್ಲಿ ಬೆಟ್ಟ ಹತ್ತುವವರು, ನಜರ್‌ಬಾದ್ ಭಾಗದಿಂದ ಗೌರಿಶಂಕರನಗರದ ಕಡೆ ಹೋಗುವವರು ಬಹುತೇಕ ಮಂದಿ ಇದೇ ರಸ್ತೆಯಲ್ಲಿ ಓಡಾಡುತ್ತಾರೆ. ಕೊಳೆತು ನಾರುವ ತ್ಯಾಜ್ಯದಿಂದ ಯಾವ ಸಾಂಕ್ರಾಮಿಕ ರೋಗ ಬಾಧಿಸುತ್ತದೋ ಎಂಬ ಭಯ ಉಂಟಾಗಿದೆ ಎಂದು ವಾಯು ವಿಹಾರಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

ಪೌರಕಾರ್ಮಿಕರು ಮನೆಗಳ ಬಳಿ ತೆರಳಿ ಕಸ ಸಂಗ್ರಹಿಸುತ್ತಾರೆ. ವಾಣಿಜ್ಯ ರಸ್ತೆಗಳಲ್ಲಿ ಅದರಲ್ಲೂ ಹೋಟೆಲ್, ಟೀ ಅಂಗಡಿ, ಇನ್ನಿತರ ತಿಂಡಿ–ತಿನಿಸು ಮಳಿಗೆಗಳಿಂದಲೂ ಎರಡು ಬಾರಿ ತ್ಯಾಜ್ಯ ಸಂಗ್ರಹಿಸಲಾಗುತ್ತದೆ. ಆದರೂ ಕೆಲವರು ಸಾರ್ವಜನಿಕ ಸ್ಥಳದಲ್ಲಿ ಕಸ ಸುರಿಯುವುದನ್ನು ನಿಲ್ಲಿಸಿಲ್ಲ. ರಾತ್ರಿ ವೇಳೆ ಕಸವನ್ನು ಪ್ಲಾಸ್ಟಿಕ್ ಕವರ್‌ಗಳಲ್ಲಿ ತುಂಬಿ ಬಿಸಾಡಿ ಹೋಗುತ್ತಾರೆ. ವ್ಯಾಪಾರ ಮುಗಿದ ಮೇಲೆ ಕೆಲ ಫಾಸ್ಟ್‌ಫುಡ್‌ನವರೂ ಉಳಿದ ಆಹಾರ ಇನ್ನಿತರ ತ್ಯಾಜ್ಯವನ್ನು ಸುರಿದು ಹೋಗುತ್ತಾರೆ. ಅಂತಹವರಿಂದಲೇ ಚಾಮುಂಡಿಬೆಟ್ಟ ಪಾದದ ರಸ್ತೆ ಅಧ್ವಾನವಾಗಿದೆ ಎಂದು ದೂರಿದ್ದಾರೆ.

ನಾಯಿಗಳ ಹಾವಳಿ: ತ್ಯಾಜ್ಯಗಳನ್ನು ಹೆಕ್ಕಿತಿಂದು ರೂಢಿಯಾಗಿರುವ ಬೀದಿ ನಾಯಿಗಳು, ಜನರ ಕೈಯಲ್ಲಿ ಅಥವಾ ದ್ವಿಚಕ್ರ ವಾಹನದಲ್ಲಿ ಇಟ್ಟುಕೊಂಡು ಹೋಗುವ ಬ್ಯಾಗ್‌ಗಳ ಮೇಲೆ ದೃಷ್ಟಿ ಇಡುತ್ತವೆ. ಕೆಲವೊಮ್ಮೆ ನಡೆದು ಹೋಗುವವರ ಮೇಲೆ ದಾಳಿಯನ್ನೂ ಮಾಡುತ್ತವೆ. ಇಲ್ಲಿ ಸದಾ ನಾಯಿಗಳ ಹಿಂಡು ಇರುವುದರಿಂದ ಬೆಟ್ಟದ ಕಡೆಯಿಂದ ಚಿರತೆಗಳು ದಾಂಗುಡಿ ಇಡುವ ಭೀತಿ ಸೃಷ್ಟಿಯಾಗಿದೆ. ಹಸುಗಳು ಆಹಾರದ ತ್ಯಾಜ್ಯವನ್ನು ತಿನ್ನುವ ವೇಳೆ ಪ್ಲಾಸಿಕ್ಟ್ ಕವರ್‌ಗಳನ್ನು ನುಂಗುವುದರಿಂದ ಅವುಗಳ ಪ್ರಾಣಕ್ಕೂ ಕುತ್ತು ಎದುರಾಗಿದೆ. ಕೂಡಲೇ ಈ ರಸ್ತೆಯ ತ್ಯಾಜ್ಯವನ್ನು ತೆರವುಗೊಳಿಸಿ, ಮತ್ತೆ ಇಂತಹ ದುಸ್ಥಿತಿ ನಿರ್ಮಾಣವಾಗದಂತೆ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

> ಚಾಮುಂಡಿಬೆಟ್ಟ ಪಾದ ಸಂಪರ್ಕಿಸುವ ರಸ್ತೆಯಲ್ಲಿ ಸಂಚರಿಸುವವರ ಸಂಖ್ಯೆ ಹೆಚ್ಚಿದೆ. ಗೌರಿಶಂಕರನಗರಕ್ಕೆ ಹತ್ತಿರದ ದಾರಿಯಾಗಿರುವುದರಿಂದ ಶಾಲಾ–ಕಾಲೇಜು ಮಕ್ಕಳೂ ಇಲ್ಲಿ ಓಡಾಡುತ್ತಾರೆ. ಆದರೆ ಈ ರಸ್ತೆಯ ಇಕ್ಕೆಲಗಳಲ್ಲಿ ಬಿದ್ದಿರುವ ತ್ಯಾಜ್ಯದ ರಾಶಿ, ಕೊಳೆತು ನಾರುವುದರಿಂದ ರೋಗದ ಭೀತಿ ಸೃಷ್ಟಿಯಾಗಿದೆ. ಒಂದು ರೀತಿಯಲ್ಲಿ ನಾವೇ ಕಸ ಎಸೆದು, ನಾವೇ ಕಾಯಿಲೆಗಳನ್ನು ಬರ ಮಾಡಿಕೊಳ್ಳುವಂತೆ ಆಗಿದೆ. ಜನರಿಗೆ ಈ ಬಗ್ಗೆ ಅರಿವಿಲ್ಲದಿರುವುದು ವಿಷಾದನೀಯ
> –**ಪ್ರಭಾಕರ್**, ಸ್ಥಳೀಯ ನಿವಾಸಿ.

ಸಹಕಾರ ಭಾರತಿಯಿಂದ ಸಹಕಾರ ಕ್ಷೇತ್ರ ಮುಂಚೂಣಿಯಲ್ಲಿದೆ

ಸಹಕಾರ ಭಾರತಿಯ ವಿಭಾಗೀಯ ಕಾರ್ಯಕಾರಿಣಿ ಸಭೆಯಲ್ಲಿ ಚರ್ಚೆ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಸಹಕಾರ ಭಾರತಿ ಮೈಸೂರು ವಿಭಾಗದಿಂದ ವಿಭಾಗೀಯ ಕಾರ್ಯಕಾರಿಣಿ ಸಭೆ ನಡೆಸಲಾಯಿತು.

ಮೈಸೂರು, ಡಿ.19(ಜಿಎ)–ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಸಹಕಾರ ಭಾರತಿ ಮೈಸೂರು ವಿಭಾಗದಿಂದ ವಿಭಾಗೀಯ ಕಾರ್ಯಕಾರಿಣಿ ಸಭೆ ನಡೆಸಲಾಯಿತು.

ಕಾರ್ಯಕಾರಿಣಿ ಸಭೆಯನ್ನು ಮುಡಾ ಮಾಜಿ ಅಧ್ಯಕ್ಷ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಶಿಕ್ಷಣ ಸಲಹಾ ಸಮಿತಿ ಸದಸ್ಯರಾದ ಹೆಚ್.ವಿ.ರಾಜೀವ್ ಉದ್ಘಾಟಿಸಿ ಮಾತನಾಡಿ ಸಹಕಾರ ಭಾರತಿಯೂ ಕಳೆದ ಒಂದು ದಶಕದಿಂದ ಸಂಘಟನೆಗೆ ಒತ್ತು ನೀಡಿ ಸಹಕಾರ ಕ್ಷೇತ್ರವನ್ನು ಮುಂಚೂಣಿಯಲ್ಲಿ ತೆಗೆದುಕೊಂಡು ಹೋಗುತ್ತಿದೆ ಎಂದರು.

ರಾಜ್ಯ ಮತ್ತು ರಾಷ್ಟ್ರದ ಸಹಕಾರದಲ್ಲಿ ಕಾಯ್ದೆಗೆ ತಿದ್ದುಪಡಿ ಮಾಡುವ ಸಂದರ್ಭದಲ್ಲಿ ಆ ತಿದ್ದುಪಡಿಯೂ ಸಹಕಾರಿಗಳಿಗೆ ಅನುಕೂಲಕರವಾಗಿರಬೇಕು. ಕುಂಠಿತ ಮಾಡುವ ಕಾಯ್ದೆಯನ್ನು ತಡೆಯುವುದಕ್ಕೆ ಸಂಘಟನೆ ಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನಾವೆಲ್ಲರೂ ಒಗ್ಗಟಾಗಿದ್ದೇವೆ. ಈ ನಿಟ್ಟಿನಲ್ಲಿ ಸಹಕಾರ ಭಾರತಿಯೂ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಸಾಮಾನ್ಯ ಜನರಿಗೆ ಅನುಕೂಲವಾಗುವಂತೆ ಆರ್ಥಿಕ ಸಮಾನತೆಗೆ ಸಹಕಾರ ಕ್ಷೇತ್ರವಿದೆ. ಅದಕ್ಕೆ ಸಹಕಾರ ಭಾರತಿ ಸಹಕಾರಿಯಾಗಿದೆ. ನಾವೆಲ್ಲರೂ ಅದಕ್ಕೆ ಶಕ್ತಿ ತುಂಬುವ ಕೆಲಸ ಮಾಡಬೇಕಿದೆ. ಈ ಸಭೆಯಲ್ಲಿ ಅವುಗಳನ್ನು ಮಾಡೋಣ ಎಂದು ಕರೆ ನೀಡಿದರು.

ಸಭೆಯಲ್ಲಿ ರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಘಟಕ ಪ್ರಮುಖ್ ಅಜಯ್ ನಿಖುಂಬ್, ರಾಜ್ಯ ಪ್ರಧಾನ ಕಾರ್ಯದರ್ಶಿ ಸಾಣೂರು ನರಸಿಂಹ ಕಾಮತ್, ರಾಜ್ಯ ಕಾರ್ಯದರ್ಶಿ ಬಿ.ಮಹದೇವಸ್ವಾಮಿ, ರಾಜ್ಯ ಕಾರ್ಯಕಾರಣಿ ಸದಸ್ಯ ಎಸ್.ಆರ್.ನಾರಾಯಣರಾವ್, ರಾಜ್ಯ ಮಹಿಳಾ ಸಹ ಪ್ರಮುಖ್ ಹೇಮಾ ಗಂಗಪ್ಪ, ಜಿಲ್ಲಾಧ್ಯಕ್ಷ ವಿ.ವೆಂಕಟೇಶ್, ವಿಭಾಗ ಸಂಘಟನಾ ಪ್ರಮುಖ್ ಮೋಹನ್ ಕುಂಬ್ಳೇಕರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್.ಸಿ.ಭಗೀರಥ, ನಗರಾಧ್ಯಕ್ಷ ಡಾ.ಜೆ.ಜೆ.ವಿಶ್ವನಾಥಯ್ಯ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಇ.ಕೆ. ರಾಜನ್ ಬಾಬು, ಜಿಲ್ಲಾ ಮಹಿಳಾ ಅಧ್ಯಕ್ಷೆ ಗೀತಾ ರಾಜಶೇಖರ್, ಮಹಿಳಾ ಪ್ರಮುಖ್ ಲಕ್ಷ್ಮಿ, ನಗರ ಮಹಿಳಾಧ್ಯಕ್ಷೆ ಮಂಜುಳಮ್ಮ ಉಪಸ್ಥಿತರಿದ್ದರು.


ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ಶ್ರೀ ಕೇಶವ ಆರ್. ರವರು

S/O Late M C Rachaiah, Vinayaka Metals, Ashoka Road, Ex City Vice President, BJP
Contact : 9538840765

ಇವರು ದಿ: 10–12–2025 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆ ಕಾರ್ಯವನ್ನು ದಿ: 21–12–2025ನೇ ಭಾನುವಾರ ಮಧ್ಯಾಹ್ನ 12.30 ಗಂಟೆಗೆ ನಮ್ಮ ಸ್ವಗೃಹ #1223, ಎ ಬ್ಲಾಕ್, 3ನೇ ಮೇನ್, 8ನೇ ಕ್ರಾಸ್, ಜೋಡಿ ಬೇವಿನಮರ, ಕನಕದಾಸನಗರ, ದಟ್ಟಗಳ್ಳಿ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖಿತಪ್ತರು : ಶ್ರೀಮತಿ ಎ. ಪ್ರೇಮಾವತಿ ಕೇಶವ್, ಮಗ ಶ್ರೀ ಸಾಯಿರಾಂ ಹಾಗೂ ಕುಟುಂಬವರ್ಗದವರು

13ನೇ ವರ್ಷದ ಸವಿನೆನಪು



ವಿ ಬಾಲಕೃಷ್ಣ (ಬಾಲಣ್ಣ) ಉದ್ಯಮಿ

(ನಂದಿನಿ ಉತ್ಪನ್ನಗಳ ಅಧಿಕೃತ ಮಾರಾಟಗಾರರು)

ನೀವು ನಮ್ಮನ್ನಗಲಿ 13 ವರ್ಷ ಕಳೆದರೂ ಸದಾ ನಮ್ಮ ನೆನಪಿನಲ್ಲಿ ನಿಮ್ಮ ಮಾರ್ಗದರ್ಶನದಂತೆ ನಡೆಯುತ್ತಿರುವೆವು.

ದುಃಖತಪ್ತರು : ಪತ್ನಿ, ಮಕ್ಕಳು, ಸೊಸೆ, ಅಳಿಯ ಹಾಗೂ ಮೊಮ್ಮಕ್ಕಳು ಹಾಗೂ ಕುಟುಂಬವರ್ಗ ವಿ.ಪಾಪಣ್ಣ ಅಂಡ್ ಬ್ರದರ್ಸ್ ಸಿಬ್ಬಂದಿ ವರ್ಗ, ಮೈಸೂರು ಹಾಗೂ ಸ್ನೇಹ ಅಸೋಸಿಯೇಟ್ಸ್ ಸಿಬ್ಬಂದಿವರ್ಗ, ಬೆಂಗಳೂರು